# ಕರ್ನಾಟಕ ಹೆದ್ದಾರಿ ಅಧಿನಿಯಮ, 1964

(ಕರ್ನಾಟಕ ರಾಜ್ಯಪತ್ರ, ಗುರುವಾರ, ಆಗಸ್ಟ್ 7, 2003, ಭಾಗ 4–ಎ, ಪುಟ 641 ರಿಂದ 668ರವರೆಗೆ ಪ್ರಕಟಿತವಾಗಿದೆ)

## (30ನೇ ಸೆಪ್ಟಂಬರ್ 2002 ರಂದು ಇದ್ದಂತೆ)

## ವಿಷಯಾನುಕ್ರಮಣಿಕೆ

## ಅಧ್ಯಾಯ – I

## ಪ್ರಾರಂಭಿಕ

**ಪ್ರಕರಣಗಳು:**

1. ಚಿಕ್ಕ ಹೆಸರು, ವ್ಯಾಪ್ತಿ, ಅನ್ವಯ ಮತ್ತು ಪ್ರಾರಂಭ
2. ಪರಿಭಾಷೆಗಳು

## ಅಧ್ಯಾಯ – II

## ಹೆದ್ದಾರಿಗಳ, ಹೆದ್ದಾರಿ ಪ್ರಾಧಿಕಾರಿಗಳ ಬಗ್ಗೆ ಘೋಷಣೆ ಮತ್ತು ಅವರ ಅಧಿಕಾರಗಳು ಮತ್ತು ಪ್ರಕಾರ್ಯಗಳು

3. ಹೆದ್ದಾರಿಗಳೆಂದು ರಸ್ತೆಗಳು, ದಾರಿಗಳು ಅಥವಾ ಭೂಮಿಗಳ ಬಗ್ಗೆ ಘೋಷಣೆ
4. ಹೆದ್ದಾರಿ ಪ್ರಾಧಿಕಾರಗಳ ನೇಮಕಾತಿ
5. ಹೆದ್ದಾರಿ ಪ್ರಾಧಿಕಾರಗಳ ಅಧಿಕಾರಗಳು ಮತ್ತು ಕರ್ತವ್ಯಗಳು
6. ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಮತ್ತು ನೌಕರರು

## ಅಧ್ಯಾಯ – III

## ಕಟ್ಟಡಗಳ ಬೆಳವಣಿಗೆಯ ಬಗ್ಗೆ ನಿರ್ಬಂಧ

7. ಹೆದ್ದಾರಿಗಳ ಕಟ್ಟಡ ಮತ್ತು ನಿಯಂತ್ರಣ ರೇಖೆಗಳ ಗಡಿಯನ್ನು ನಿಗದಿಪಡಿಸಲು ಅಧಿಕಾರ
8. ನಕಾಶೆಯನ್ನು ಸಿದ್ಧಪಡಿಸತಕ್ಕುದು ಮತ್ತು ಇಡತಕ್ಕುದು
9. ಹೆದ್ದಾರಿ ಗಡಿ ಮತ್ತು ಕಟ್ಟಡ ರೇಖೆಯ ನಡುವಣ ಮತ್ತು ಕಟ್ಟಡ ಮತ್ತು ನಿಯಂತ್ರಣ ರೇಖೆಗಳ ನಡುವಣ ಕಟ್ಟಡಗಳ ಮೇಲೆ ನಿರ್ಬಂಧಗಳು
10. ಅಪೀಲು
11. ನಡೆಯುತ್ತಿರುವ ಕಾಮಗಾರಿಗಳಿಗಾಗಿ ವಿನಾಯಿತಿ, ಇತ್ಯಾದಿ
12. ಕಟ್ಟಡ ರೇಖೆಯ ಅಥವಾ ನಿಯಂತ್ರಣ ರೇಖೆಯ ಹಿಂದಕ್ಕೆ ಕಟ್ಟಡಗಳನ್ನು ನೆಲೆಗೊಳಿಸುವುದು
13. ಹೆದ್ದಾರಿಗೆ ಪ್ರವೇಶಾವಕಾಶದ ಹಕ್ಕನ್ನು ನಿಯಂತ್ರಿಸುವುದು ಅಥವಾ ಪಲ್ಲಟಿಸುವುದು
14. ಯೋಜನೆಗಳಿಗೆ ಸಂಬಂಧಿಸಿದಂತೆ ಹೆದ್ದಾರಿ ಪ್ರಾಧಿಕಾರ ಮತ್ತು 6ನೇ ಪ್ರಕರಣದ ಮೇರೆಗೆ ನೇಮಕಗೊಂಡ ಅಧಿಕಾರಿಗಳು ಮತ್ತು ನೌಕರರ ಅಧಿಕಾರಗಳು
15. ಭೂಮಿ ಅಥವಾ ಭೂಮಿಯಲ್ಲಿನ ಹಕ್ಕು ಅಥವಾ ಹಿತಾಸಕ್ತಿಯ ಆರ್ಜನೆ
16. ಭೂಮಿಯನ್ನು ಗುರುತು ಮಾಡುವಂತೆ ಮತ್ತು ಅಳೆಯುವಂತೆ ಅಗತ್ಯಪಡಿಸುವುದು

17. ಆರ್ಜನೆಗಾಗಿನ ಅಂಥ ಅಗತ್ಯತೆಗಳ ಬಗ್ಗೆ ಸಾರ್ವಜನಿಕ ನೋಟೀಸು ಮತ್ತು ಇತರ ನೋಟೀಸುಗಳು
18. ಹಿತಾಸಕ್ತಿಯನ್ನು ಹೊಂದಿರುವ ಇತರ ವ್ಯಕ್ತಿಗಳ ಬಗ್ಗೆ ಹೇಳಿಕೆಗಳನ್ನು ಕೊಡುವಂತೆ ವ್ಯಕ್ತಿಗಳನ್ನು ಅಗತ್ಯಪಡಿಸುವುದು
19. ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು

## ಅಧ್ಯಾಯ – III

## ಒಪ್ಪಂದ ಮಾಡಿಕೊಳ್ಳಲು ಅಧಿಕಾರ ಮತ್ತು ಕಿಡಿಗೇಡಿ ಕೃತ್ಯಕ್ಕೆ ದಂಡನೆ

19ಎ. ಹೆದ್ದಾರಿಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಒಪ್ಪಂದ ಮಾಡಿಕೊಳ್ಳಲು ರಾಜ್ಯ ಸರ್ಕಾರದ ಅಧಿಕಾರ
19ಬಿ. ಹೆದ್ದಾರಿಗೆ ಹಾನಿಮಾಡುವ ಕಿಡಗೇಡಿ ಕೃತ್ಯಕ್ಕೆ ದಂಡನೆ

## ಅಧ್ಯಾಯ – IV

## ಹೆದ್ದಾರಿಯ ಅನಧಿಕೃತ ಅಧಿಭೋಗ ಮತ್ತು ಅದರ ಮೇಲಿನ ಒತ್ತುವರಿಯನ್ನು ತಡೆಗಟ್ಟುವುದು ಮತ್ತು ಒತ್ತುವರಿಯನ್ನು ತೆಗೆದುಹಾಕುವುದು

20. ಹೆದ್ದಾರಿಯ ಭಾಗವಾಗಿರುವ ಭೂಮಿಗಳನ್ನು ಸರ್ಕಾರಿ ಸ್ವತ್ತೆಂದು ಭಾವಿಸತಕ್ಕುದು
21. ಹೆದ್ದಾರಿಯ ಅನಧಿಕೃತ ಅಧಿಭೋಗವನ್ನು ತಡೆಗಟ್ಟುವುದು
22. ಅನುಮತಿಪತ್ರವನ್ನು ರದ್ದುಗೊಳಿಸುವ ಅಧಿಕಾರ
23. ಒತ್ತುವರಿಯನ್ನು ತಡೆಗಟ್ಟುವುದು
24. 23ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಜಾರಿಗೊಳಿಸಿದ ನೋಟೀಸಿನ ವಿರುದ್ಧ ಅಪೀಲು
25. ಒತ್ತುವರಿಯನ್ನು ತೆಗೆದುಹಾಕುವುದರ ವೆಚ್ಚದ ವಸೂಲಿ

## ಅಧ್ಯಾಯ – V

## ನಷ್ಟಪರಿಹಾರ

26. ಕೆಲವು ಸಂದರ್ಭಗಳಲ್ಲಿ ಕನಿಷ್ಠ ಹಾನಿಯನ್ನು ಉಂಟುಮಾಡುವುದು ಮತ್ತು ನಷ್ಟಪರಿಹಾರ
27. ಒಪ್ಪಂದದ ಮೂಲಕ ನಷ್ಟಪರಿಹಾರದ ಮೊಬಲಗಿನ ನಿರ್ಧರಣೆ
28. ಒಪ್ಪಂದವಾಗದಿದ್ದಲ್ಲಿ ನಷ್ಟಪರಿಹಾರದ ಮೊಬಲಗಿನ ನಿರ್ಧರಣೆ
29. ಇತರ ಯಾವುದೇ ಕಾನೂನಿನ ಮೇರೆಗೆ ಅಂಥದೇ ನಿರ್ಬಂಧಗಳು ಜಾರಿಯಲ್ಲಿರುವಲ್ಲಿ ಅಥವಾ ನಷ್ಟ ಪರಿಹಾರವನ್ನು ಈಗಾಗಲೇ ಸ್ವೀಕರಿಸಿರುವಲ್ಲಿ ಯಾವುದೇ ನಷ್ಟ ಪರಿಹಾರ ವಿರತಕ್ಕುದಲ್ಲ
30. ನಿರ್ಮಿಸಲು ಅನುಮತಿ ನಿರಾಕರಿಸಿದಾಗ ಕೊಡಬೇಕಾದ ನಷ್ಟಪರಿಹಾರವು, ಹಾಗೆ ನಿರಾಕರಿಸಿದ್ದಾಗ ಇದ್ದ ಮತ್ತು ಮಂಜೂರು ಮಾಡಿದ್ದರೆ ಕೊಡಬಹುದಾಗಿದ್ದ ಮೌಲ್ಯ ಇವೆರಡರ ನಡುವಣ ವ್ಯತ್ಯಾಸವನ್ನು ಮೀರತಕ್ಕುದಲ್ಲ
31. ಪ್ರವೇಶ ಮಾರ್ಗದ ಪಲ್ಲಟಕ್ಕಾಗಿನ ನಷ್ಟಪರಿಹಾರವು ಪರ್ಯಾಯ ಪ್ರವೇಶ ಮಾರ್ಗದ ವೆಚ್ಚವನ್ನು ಮೀರತಕ್ಕುದಲ್ಲ
32. ಬೆಳೆದಿರುವ ಫಸಲುಗಳು, ಮರಗಳು ಇತ್ಯಾದಿಗಳನ್ನು ಕತ್ತರಿಸಿ ಹಾಕುವುದಕ್ಕಾಗಿ ನಷ್ಟಪರಿಹಾರ

33. ಅನಧಿಕೃತ ನಿರ್ಮಿತಿಗಳಿಗಾಗಿ ಯಾವುದೇ ನಷ್ಟಪರಿಹಾರ ಇರತಕ್ಕುದಲ್ಲ
34. ಒತ್ತುವರಿಯನ್ನು ತೆಗೆದುಹಾಕುವುದಕ್ಕಾಗಿ ಯಾವುದೇ ನಷ್ಟಪರಿಹಾರ ವಿರತಕ್ಕುದಲ್ಲ
35. 28ನೇ ಪ್ರಕರಣದ ಮೇರೆಗೆ ಹೆದ್ದಾರಿ ಪ್ರಾಧಿಕಾರದ ಅಥವಾ ಅಧಿಕೃತಗೊಳಿಸಿದ ಅಧಿಕಾರಿಯ ಐತೀರ್ಪನ್ನು ಪರಾಮರ್ಶೆಗೆ ಒಪ್ಪಿಸುವುದು
36. 35 ಮತ್ತು 44ನೇ ಪ್ರಕರಣದ ಮೇರೆಗೆ ಪರಾಮರ್ಶೆಗೆ ಬಂದವುಗಳನ್ನು ತೀರ್ಮಾನಿಸಲು ಶಕ್ತಗೊಳಿಸಿದ ಪ್ರಾಧಿಕಾರಿಗಳ ಪ್ರಕ್ರಿಯೆ ಮತ್ತು ಅಧಿಕಾರಗಳು
37. ಯಾವುದೇ ಒತ್ತುವರಿಯ ಬಿಟ್ಟುಕೊಡುವಿಕೆಯನ್ನು ಮತ್ತು ತೆಗೆದುಹಾಕುವಿಕೆಯನ್ನು ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟನು ಜಾರಿಗೊಳಿಸತಕ್ಕುದು
38. 35 ಮತ್ತು 44ನೇ ಪ್ರಕರಣದ ಮೇರೆಗಿನ ಪ್ರಾಧಿಕಾರಿಗಳ ತೀರ್ಮಾನಗಳನ್ನು ಸಿವಿಲ್ ನ್ಯಾಯಾಲಯದ ಡಿಕ್ರಿಗಳಂತೆ ಜಾರಿಗೊಳಿಸತಕ್ಕುದು
39. ನಿರ್ಣಯಿಸಿದ ನಷ್ಟಪರಿಹಾರದ ಸಂದಾಯ
40. ಹೊಂದಾಣಿಕೆಯ ಮೂಲಕ ಸಂದಾಯ

## ಅಧ್ಯಾಯ - VI

## ಪುರೋಭಿವೃದ್ಧಿ ವೆಚ್ಚಗಳನ್ನು ವಿಧಿಸುವುದು

41. ಒಡೆಯರು ಅಥವಾ ಹಿತಾಸಕ್ತಿಯನ್ನು ಹೊಂದಿರುವ ವ್ಯಕ್ತಿಗಳಿಗೆ ನೋಟೀಸು
42. ವಿಚಾರಣೆ ಮತ್ತು ಆದೇಶ
43. ಮೌಲ್ಯದಲ್ಲಿನ ಹೆಚ್ಚಳ ಮತ್ತು ಪುರೋಭಿವೃದ್ಧಿ ವೆಚ್ಚಗಳು
44. 42ನೇ ಪ್ರಕರಣದ ಮೇರೆಗೆ ಅಧಿಕೃತಗೊಳಿಸಿದ ಅಧಿಕಾರಿಯ ಆದೇಶವನ್ನು ಪರಾಮರ್ಶೆಗೆ ಒಪ್ಪಿಸುವುದು
45. ಪುರೋಭಿವೃದ್ಧಿ ವೆಚ್ಚಗಳನ್ನು ನಿಗದಿಪಡಿಸುವ ಆದೇಶದ ಮತ್ತು ಅಭಿಪ್ರಾಯ ಕೋರಿಕೆಯ ತೀರ್ಮಾನದ ಅಂತಿಮತೆ
46. ಪುರೋಭಿವೃದ್ಧಿ ವೆಚ್ಚಗಳು ಭೂಕಂದಾಯದ ನಂತರ ಭೂಮಿಯ ಮೇಲಣ ಮೊದಲನೇ ಋಣಭಾರವಾಗಿರತಕ್ಕುದು
47. ಪುರೋಭಿವೃದ್ಧಿ ವೆಚ್ಚಗಳ ಸಂದಾಯ
48. ಪುರೋಭಿವೃದ್ಧಿ ವೆಚ್ಚಗಳನ್ನು ಸಂದಾಯ ಮಾಡುವುದಕ್ಕೆ ಬದಲು ಭೂಮಿಯನ್ನು ಬಿಟ್ಟುಕೊಡುವುದು ಅಥವಾ ಅದನ್ನು ವಿನಿಮಯ ಮಾಡಿಕೊಳ್ಳುವುದು

## ಅಧ್ಯಾಯ VI – ಎ

## ದಾರಿ ಸುಂಕವನ್ನು ವಿಧಿಸುವುದು

48ಎ. ದಾರಿ ಸುಕವನ್ನು ವಿಧಿಸುವುದು

## ಅಧ್ಯಾಯ VII

### ಸಂಚಾರದ ಸುರಕ್ಷತೆಯನ್ನು ಸುನಿಶ್ಚಿತಪಡಿಸಿಕೊಳ್ಳಲು ಮತ್ತು ಹೆದ್ದಾರಿಗಳಿಗೆ ಹಾನಿಯನ್ನು ತಡೆಗಟ್ಟಲು ಪೂರಕ ಉಪಬಂಧಗಳು

49. ಯಾವುದೇ ಹೆದ್ದಾರಿಯನ್ನು ಉಪಯೋಗಿಸುವ ವ್ಯಕ್ತಿಗಳ ದೃಷ್ಟಿಗೆ ಅಡ್ಡಿಯನ್ನು ತಡೆಗಟ್ಟುವುದು

50. ಹೆದ್ದಾರಿಯು ಸುರಕ್ಷಿತವಾಗಿಲ್ಲವೆಂದು ಘೋಷಿಸಿದಾಗ ಹೆದ್ದಾರಿ ಪ್ರಾಧಿಕಾರವು, ಸಂಚಾರವನ್ನು ನಿಯಂತ್ರಿಸಬಹುದು

51. ಕೆಲವು ಹೆದ್ದಾರಿಗಳಲ್ಲಿ ಭಾರೀ ವಾಹನಗಳ ಉಪಯೋಗದ ನಿಷೇಧ

52. ಹೆದ್ದಾರಿ ಪ್ರಾಧಿಕಾರವು ಯಾವುದೇ ಹೆದ್ದಾರಿಯನ್ನು ಶಾಶ್ವತವಾಗಿ ಮುಚ್ಚಲು ಇಚ್ಛಿಸಿದಾಗ ಅನುಸರಿಸಬೇಕಾದ ಪ್ರಕ್ರಿಯೆ

53. ಹೆದ್ದಾರಿಯ ಮೇಲೆ ಕೆಲವು ಕಾರ್ಯಗಳನ್ನು ಮಾಡಲು ಹೆದ್ದಾರಿ ಪ್ರಾಧಿಕಾರದ ಸಮ್ಮತಿಯು ಅಗತ್ಯವಾಗಿರತಕ್ಕುದು

54. ಹೆದ್ದಾರಿಗೆ ಹಾನಿಯನ್ನು ತಡೆಗಟ್ಟುವುದು ಮತ್ತು ಅದನ್ನು ಸರಿಪಡಿಸುವುದು

## ಅಧ್ಯಾಯ VIII

### ದಂಡನೆಗಳು

55. ಆದೇಶಗಳು, ಸೂಚನೆಗಳನ್ನು ಪಾಲಿಸದಿರುವುದು ಮತ್ತು ಮಾಹಿತಿಯನ್ನು ಕೊಡಲು ನಿರಾಕರಣೆ ಇತ್ಯಾದಿ

56. ಯಾವುದೇ ಕಟ್ಟಡದ ಪ್ರವೇಶಾವಕಾಶಕ್ಕೆ ಅಥವಾ ಅದನ್ನು ನಿರ್ಮಿಸುವುದಕ್ಕೆ ಸಂಬಂಧಪಟ್ಟ ನಿರ್ಬಂಧಗಳ ಉಲ್ಲಂಘನೆ ಇತ್ಯಾದಿ

57. ಹೆದ್ದಾರಿಯ ಅನಧಿಕೃತ ಅಧಿಭೋಗ

58. ಹೆದ್ದಾರಿಗಳಿಗೆ ಹಾನಿಯನ್ನುಂಟುಮಾಡುವುದು

58ಎ. ದಾರಿ ಸುಂಕವನ್ನು ಸಂದಾಯ ಮಾಡದೆ ಸೇತುವೆಗಳು ಇತ್ಯಾದಿಗಳ ಮೇಲೆ ಪ್ರವೇಶಿಸುವುದು

59. ಅಪರಾಧಗಳ ದಂಡನೆಗಾಗಿ ಸಾಮಾನ್ಯ ಉಪಬಂಧ

60. ಅಪರಾಧಗಳನ್ನು ರಾಜಿ ಮಾಡಿಕೊಳ್ಳುವ ಅಧಿಕಾರ

## ಅಧ್ಯಾಯ IX

### ಸಂಕೀರ್ಣ

61. ಪುನರೀಕ್ಷಣೆ

62. ಪೊಲೀಸರ ಅಧಿಕಾರಗಳು ಮತ್ತು ಕರ್ತವ್ಯಗಳು

63. ಗ್ರಾಮ ಅಧಿಕಾರಿಗಳ ಕರ್ತವ್ಯಗಳು

64. ರಸ್ತೆಯ ಉದ್ದೇಶಗಳಿಗಾಗಿ ಅಲ್ಲದೆ ಇತರ ಉದ್ದೇಶಗಳಿಗೆ ಹೆದ್ದಾರಿಯನ್ನು ಉಪಯೋಗಿಸುವ ಅಧಿಕಾರ

65. ಕ್ಷಿಪ್ರ ಹೊರಹಾಕುವಿಕೆ

66. ವಿಚಾರಣೆಗಳು

67. 8ನೇ ಪ್ರಕರಣದ ಮೇರೆಗೆ ಮಾಡಿದ ನಕಾಶೆಯ ಬಗ್ಗೆ ನೋಂದಣಿಯು ಅಗತ್ಯವಿಲ್ಲ

68. ಕೆಲವು ವ್ಯಕ್ತಿಗಳು ಲೋಕ ನೌಕರರಾಗಿರತಕ್ಕುದು

69. ಅಧಿಕಾರ ವ್ಯಾಪ್ತಿಯ ಪ್ರತಿಷೇಧ

70 [ಸದ್ಭಾವನೆಯಿಂದ ಕಾರ್ಯನಿರ್ವಹಿಸುವ ವ್ಯಕ್ತಿಗಳ ಸಂರಕ್ಷಣೆ ಮತ್ತು ದಾವೆ ಅಥವಾ ಪ್ರಾಸಿಕ್ಯೂಷನ್ ಬಗ್ಗೆ ಕಾಲ ಪರಿಮಿತಿ]

71. [ನೋಟೀಸುಗಳು ಮತ್ತು ಬಿಲ್ಲುಗಳ ಜಾರಿ]

72. [ನಿಯಮ ರಚನಾಧಿಕಾರ]

73. [ಉಳಿಸುವಿಕೆಗಳು]

74. [ಈ ಅಧಿನಿಯಮ ಅಥವಾ ನಿಯಮಗಳ ಉಪಬಂಧಗಳು ಇತರ ಕಾನೂನುಗಳಲ್ಲಿನ ಅಸಂಗತ ಉಪಬಂಧಗಳಿಗೆ ಸಂಬಂಧಪಟ್ಟಂತೆ ಮೇಲುಗೈಯಾಗಿರತಕ್ಕುದು]

75. [ರಾಷ್ಟ್ರೀಯ ಹೆದ್ದಾರಿಗಳ ಗುಂಟ ಕಟ್ಟಡ ಮತ್ತು ನಿಯಂತ್ರಣ ರೇಖೆಗಳು]

76. [ನಿರಸನ]

[ಅನುಸೂಚಿ]

[ಅಧಿಸೂಚನೆ]

* * * *

## ಉದ್ದೇಶ ಮತ್ತು ಕಾರಣಗಳ ಹೇಳಿಕೆ

## I

**1964ರ ಅಧಿನಿಯಮ 44.–** ಈಗ ಮೈಸೂರು ಹೆದ್ದಾರಿಗಳ ಅಧಿನಿಯಮವು (1920ರ IV) ಮೈಸೂರು ಪ್ರದೇಶದಲ್ಲಿನ ಸಂಚಾರದ ವಿನಿಯಮನಕ್ಕಾಗಿ ಮತ್ತು ಸಾರ್ವಜನಿಕ ರಸ್ತೆಗಳ ಮತ್ತು ಸ್ಥಳಗಳ ಮೇಲ್ಮೈ ಸಂರಕ್ಷಣೆಗಾಗಿ ಉಪಬಂಧಿಸುತ್ತದೆ. ಆದರೆ, ಈ ಅಧಿನಿಯಮವನ್ನು ಇನ್ನೂ ಜಾರಿಗೆ ತರಬೇಕಾಗಿದೆ.

ಮುಂಬಯಿ ಹೆದ್ದಾರಿಗಳ ಅಧಿನಿಯಮ, 1955, ಇದು ಹೆದ್ದಾರಿಗಳುದ್ದಕ್ಕೂ ಪಟ್ಟಿ ಬೆಳವಣಿಗೆಯ ನಿರ್ಬಂಧಕ್ಕಾಗಿ, ಅದರ ಮೇಲಣ ಒತ್ತುವರಿಯನ್ನು ತಡೆಗಟ್ಟುವುದಕ್ಕಾಗಿ, ಹೆದ್ದಾರಿಗಳ ನಿರ್ಮಾಣ ಮತ್ತು ಅಭಿವೃದ್ಧಿ ಇತ್ಯಾದಿಗಳಿಗಾಗಿ ಮತ್ತು ಪುರೋಭಿವೃದ್ಧಿ ಚಾರ್ಜುಗಳನ್ನು ವಿಧಿಸುವುದಕ್ಕಾಗಿ ಉಪಬಂಧಿಸುತ್ತದೆ. ಈ ಅಧಿನಿಯಮವು ಮುಂಬಯಿ ಪ್ರದೇಶದಲ್ಲಿ ಜಾರಿಯಲ್ಲಿದೆ. ರಾಜ್ಯದ ಇತರ ಭಾಗಗಳಲ್ಲಿ ಈ ರೀತಿಯ ಅಧಿನಿಯಮಗಳಿರುವುದಿಲ್ಲ.

ಹೆದ್ದಾರಿಗಳುದ್ದಕ್ಕೂ ಪಟ್ಟಿ ಬೆಳವಣಿಗೆಯ ನಿರ್ಬಂಧಕ್ಕಾಗಿ, ಅದರ ಮೇಲಣ ಒತ್ತುವರಿಯನ್ನು ತಡೆಗಟ್ಟುವುದಕ್ಕಾಗಿ, ಹೆದ್ದಾರಿಗಳ ನಿರ್ಮಾಣ ಮತ್ತು ಅಭಿವೃದ್ಧಿಗಾಗಿ ಪುರೋಭಿವೃದ್ಧಿ ಚಾರ್ಜುಗಳನ್ನು ವಿಧಿಸುವುದಕ್ಕಾಗಿ ಮತ್ತು ಇತರ ಕೆಲವು ವಿಷಯಗಳಿಗಾಗಿ ಉಪಬಂಧಿಸುವ ಮತ್ತು ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವ ಏಕರೂಪದ ಅಧಿನಿಯಮವನ್ನು ರಚಿಸುವ ದೃಷ್ಟಿಯಿಂದ ಈ ವಿಧೇಯಕವನ್ನು ಸಿದ್ಧಪಡಿಸಲಾಗಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ-IV-2ಎ, ದಿನಾಂಕ: 16ನೇ ಡಿಸೆಂಬರ್, 1963, ಪುಟ 45 ರಲ್ಲಿ ಸಂಖ್ಯೆ 165 ಎಂದು ಪ್ರಕಟಿಸಲಾಗಿದೆ).

## II

**1983ರ ತಿದ್ದುಪಡಿ ಮಾಡುವ ಅಧಿನಿಯಮ 15.–** ಮುಖ್ಯ ಮಂತ್ರಿಗಳು, 1983–84ರ ಬಜೆಟ್ ಅಂದಾಜುಗಳನ್ನು ಮಂಡಿಸುವಾಗ, ತಮ್ಮ ಭಾಷಣದಲ್ಲಿ ರಾಜ್ಯ ಹೆದ್ದಾರಿಗಳ ಮೇಲೆ ಪ್ರಮುಖ ನದಿಗಳಿಗೆ ಅಡ್ಡಲಾಗಿ ಸೇತುವೆಗಳ ನಿರ್ಮಾಣಕ್ಕೆ ರಾಜ್ಯ ಸರ್ಕಾರವು ಗಣನೀಯ ಪ್ರಮಾಣದ ನಿಧಿಗಳನ್ನು ತೊಡಗಿಸಿದೆ ಎಂದು ಸೂಚಿಸಿದ್ದಾರೆ. ದುರ್ಗಮ ಪ್ರದೇಶಗಳಿಗೆ ಸಂಪರ್ಕ ಸೌಲಭ್ಯ ಕಲ್ಪಿಸಲು ಇನ್ನಷ್ಟು ಸೇತುವೆಗಳ ನಿರ್ಮಾಣಕ್ಕಾಗಿ ಬೇಡಿಕೆಗಳು ಬರುತ್ತಲೇ ಇವೆ ಮತ್ತು ಇದಕ್ಕಾಗಿ ಹೆಚ್ಚುವರಿ ವೆಚ್ಚ ಅಗತ್ಯವಾಗುತ್ತದೆ. ರಾಷ್ಟ್ರೀಯ ಹೆದ್ದಾರಿಗಳ ಮೇಲಿನ ಸೇತುವೆಗಳ ಸಂಬಂಧದಲ್ಲಿ ಭಾರತ ಸರ್ಕಾರವು ವಾಹನಗಳಿಂದ ಸುಂಕವನ್ನು ವಸೂಲು ಮಾಡುತ್ತಿದೆ. ಅದೇ ರೀತಿಯಲ್ಲಿ ರಾಜ್ಯ ಹೆದ್ದಾರಿಗಳ ಮೇಲಣ ಸೇತುವೆಗಳನ್ನು ಬಳಸುವ ಮೋಟಾರು ವಾಹನಗಳ ಮತ್ತು ದ್ವಿಚಕ್ರ ವಾಹನಗಳ ಸಂಬಂಧದಲ್ಲಿ ಶುಲ್ಕವನ್ನು ವಿಧಿಸುವುದಕ್ಕಾಗಿ ಶಾಸನವನ್ನು ರಚಿಸಲು ಉದ್ದೇಶಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯ ಪತ್ರ (ವಿಶೇಷ ಸಂಚಿಕೆ) ಭಾಗ– IV, 2ಎ, ದಿನಾಂಕ: 30ನೇ ಮಾರ್ಚ್ 1983, ಪುಟ–3 ರಲ್ಲಿ, ಸಂಖ್ಯೆ 208 ಎಂದು ಪ್ರಕಟಿಸಲಾಗಿದೆ).

## III

**1998ರ ತಿದ್ದುಪಡಿ ಮಾಡುವ ಅಧಿನಿಯಮ 35.–** ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಯಾರೇ ವ್ಯಕ್ತಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲು ರಾಜ್ಯ ಸರ್ಕಾರವನ್ನು ಸಮರ್ಥಗೊಳಿಸಲು ಮತ್ತು ಅಂಥ ವ್ಯಕ್ತಿಯು ಒದಗಿಸಿದ ಸೇವೆ ಅಥವಾ ಸೌಕರ್ಯಗಳಾಗಿ ನಿರ್ದಿಷ್ಟಪಡಿಸಿದ ದರದಲ್ಲಿ ಶುಲ್ಕಗಳನ್ನು ವಸೂಲು ಮಾಡಿ ಇಟ್ಟುಕೊಳ್ಳುವುದಕ್ಕೆ ಅವನಿಗೆ ಅಧಿಕಾರ ನೀಡಲು ಮತ್ತು ಮೋಟಾರು ವಾಹನಗಳ ಅಧಿನಿಯಮ, 1988ರ ಉಪಬಂಧಗಳಿಗನುಸಾರವಾಗಿ ಸಂಚಾರವನ್ನು ವಿನಿಯಮಿಸಲು ಮತ್ತು ನಿಯಂತ್ರಿಸಲು ಹಾಗೂ ಕಿಡಿಗೇಡಿ ಕೃತ್ಯವೆಸಗಿದ್ದಕ್ಕಾಗಿ ಐದು ವರ್ಷಗಳರೆಗಿನ ಕಾರಾವಾಸವನ್ನು ಅಥವಾ ಜುಲ್ಮಾನೆಯನ್ನು ಅಥವಾ ಅವೆರಡನ್ನೂ ವಿಧಿಸುವುದಕ್ಕೆ ಉಪಬಂಧಿಸಲು 1964ರ ಕರ್ನಾಟಕ ಹೆದ್ದಾರಿಗಳ ಅಧಿನಿಯಮವನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1997ರ ಎಲ್.ಎ. ವಿಧೇಯಕ ಸಂಖ್ಯೆ 8, 1996ರ ಕಡತ ಸಂಖ್ಯೆ 42 ಇದರಿಂದ ಪಡೆಯಲಾಗಿದೆ.)

## IV

**2000ರ ತಿದ್ದುಪಡಿ ಮಾಡುವ ಅಧಿನಿಯಮ 22.–** ಈ ಅಧಿನಿಯಮದ ಮೂಲಕ ಕೆಲವು ಅಪ್ರಚಲಿತ ಕಾನೂನುಗಳನ್ನು ನಿರಸನಗೊಳಿಸಲಾಯಿತು ಮತ್ತು ಈ ಅಧಿನಿಯಮವೂ ಸೇರಿದಂತೆ ಇತರ ಕೆಲವು ಅಧಿನಿಯಮಗಳಿಗೆ ಕೆಲವು ಸಣ್ಣ ಲಿಪಿಕ ತಿದ್ದುಪಡಿಗಳನ್ನು ಮಾಡಲಾಯಿತು.

* * * *

# 1964ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ: 44

(1964ರ ಡಿಸೆಂಬರ್ ಮೂರನೇ ದಿವಸದಂದು [1][ಕರ್ನಾಟಕ][1] ರಾಜ್ಯಪತ್ರದಲ್ಲಿ ಮೊದಲು ಪ್ರಕಟವಾಯಿತು.)

# [1][ಕರ್ನಾಟಕ][1] ಹೆದ್ದಾರಿ ಅಧಿನಿಯಮ, 1964.

(1964ರ ನವೆಂಬರ್ ಐದನೇ ದಿವಸದಂದು ರಾಷ್ಟ್ರಪತಿಯ ಅನುಮೋದನೆಯನ್ನು ಪಡೆಯಿತು.)

(1983ರ 15, 1998ರ 35 ಮತ್ತು 2೦೦೦ದ 22ರ ಕರ್ನಾಟಕ ಅಧಿನಿಯಮಗಳ ಮೂಲಕ ತಿದ್ದುಪಡಿಯಾದಂತೆ)

**ಹೆದ್ದಾರಿಗಳ ಗುಂಟ ಕಟ್ಟಡಗಳ ಬೆಳವಣಿಗೆಯನ್ನು ನಿರ್ಬಂಧಿಸುವುದಕ್ಕಾಗಿ, ಅವುಗಳ ಮೇಲೆ ಒತ್ತುವರಿಯನ್ನು ತಡೆಗಟ್ಟುವುದು ಮತ್ತು ನಿವಾರಿಸುವುದಕ್ಕಾಗಿ, ಹೆದ್ದಾರಿಗಳ ನಿರ್ಮಾಣ, ನಿರ್ವಹಣೆ ಮತ್ತು ಅಭಿವೃದ್ಧಿಗಾಗಿ, ಪುರೋಭಿವೃದ್ಧಿ ವೆಚ್ಚಗಳನ್ನು ವಿಧಿಸುವುದಕ್ಕಾಗಿ ಮತ್ತು ಕೆಲವು ಇತರೆ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.**

ಹೆದ್ದಾರಿಗಳ ಗುಂಟ ಕಟ್ಟಡಗಳ ಬೆಳವಣಿಗೆಯನ್ನು ನಿರ್ಬಂಧಿಸುವುದಕ್ಕಾಗಿ, ಅವುಗಳ ಮೇಲೆ ಒತ್ತುವರಿಯನ್ನು ತಡೆಗಟ್ಟುವುದು ಮತ್ತು ನಿವಾರಿಸುವುದಕ್ಕಾಗಿ, ಹೆದ್ದಾರಿಗಳ ನಿರ್ಮಾಣ, ನಿರ್ವಹಣೆ ಮತ್ತು ಅಭಿವೃದ್ಧಿಗಾಗಿ, ಪುರೋಭಿವೃದ್ಧಿ ವೆಚ್ಚಗಳನ್ನು ವಿಧಿಸುವುದಕ್ಕಾಗಿ ಮತ್ತು ಕೆಲವು ಇತರ ವಿಷಯಗಳಿಗಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹದಿನೈದನೇ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1] ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದು:-

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

## ಅಧ್ಯಾಯ - I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ, ಅನ್ವಯ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು [1][ಕರ್ನಾಟಕ][1] ಹೆದ್ದಾರಿ ಅಧಿನಿಯಮ, 1964 ಎಂದು ಕರೆಯತಕ್ಕದು.

(2) ಇದು ಇಡೀ [1][ಕರ್ನಾಟಕ ರಾಜ್ಯ][1] ಕ್ಕೆ ವ್ಯಾಪ್ತವಾಗತಕ್ಕದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(3) ಇದು ರಾಷ್ಟ್ರೀಯ ಹೆದ್ದಾರಿ ಅಧಿನಿಯಮ, 1956ರ ಮೇರೆಗೆ ಕೇಂದ್ರ ಸರ್ಕಾರವು ಹಾಗೆಂದು ಘೋಷಿಸಿದ ರಾಷ್ಟ್ರೀಯ ಹೆದ್ದಾರಿಗಳನ್ನು ಹೊರತುಪಡಿಸಿ ರಾಜ್ಯದ ಹೆದ್ದಾರಿಗಳಿಗೆ ಅನ್ವಯವಾಗುತ್ತದೆ.

(4) ಈ ಪ್ರಕರಣವು ಕೂಡಲೇ ಜಾರಿಗೆ ಬರತಕ್ಕದು. ರಾಜ್ಯ ಸರ್ಕಾರವು, ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉಳಿದ ಉಪಬಂಧವು ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶದಲ್ಲಿ ಮತ್ತು ಅಂಥ [1][ದಿನಾಂಕ][1] ದಂದು ಜಾರಿಗೆ ಬರತಕ್ಕದೆಂದು ನಿರ್ದೇಶಿಸಬಹುದು:

ಪರಂತು, ರಾಜ್ಯ ಸರ್ಕಾರವು ಅಂಥದೇ ರೀತಿಯಲ್ಲಿ ಹೊರಡಿಸಿದ ಅಧಿಸೂಚನೆಯ ಮೂಲಕ, ಅಂಥ ಪ್ರದೇಶದಲ್ಲಿ ಇರುವ ಯಾವುದೇ ರಸ್ತೆ ಅಥವಾ ದಾರಿ ಅಥವಾ ರಸ್ತೆಗಳ ಅಥವಾ ದಾರಿಗಳ ವರ್ಗವನ್ನು ಈ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉಪಬಂಧದ ಪ್ರವರ್ತನೆಯಿಂದ ಹೊರತುಪಡಿಸಬಹುದು.

1. ಈ ಅಧಿನಿಯಮದ ಉಳಿದ ಉಪಬಂಧಗಳು ಅಧಿಸೂಚನೆಯ ಮೂಲಕ 1969ರ ಆಗಸ್ಟ್ 16ನೇ ದಿವಸದಿಂದ ಜಾರಿಗೆ ಬಂದಿದೆ. ಅಧಿಸೂಚನೆ ಪಾಠವು ಅಧಿನಿಯಮದ ಕೊನೆಯ ಭಾಗದಲ್ಲಿದೆ.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಪ್ರಾಣಿ" ಎಂದರೆ ಯಾವುದೇ ಸಾಕು ಅಥವಾ ಬಂಧಿತ ಪ್ರಾಣಿ;

(ಬಿ) "ಕಟ್ಟಡ" ಎಂಬುದು ಯಾವುದೇ ರೀತಿಯ ಸಾಮಗ್ರಿಯಿಂದ ಮತ್ತು ಯಾವುದೇ ರೀತಿಯಲ್ಲಿ ನಿರ್ಮಿಸಿದ (ಕೃಷಿ ಉದ್ದೇಶಗಳಿಗಾಗಿನ ಫಾರಂ ಕಟ್ಟಡವನ್ನು ಒಳಗೊಂಡು) ಯಾವುದೇ ನಿರ್ಮಿತಿಯನ್ನು ಒಳಗೊಳ್ಳುತ್ತದೆ ಮತ್ತು ಅದು ಮೇಲುಪಾಯಗಳು, ಬಾಗಿಲ ಮೆಟ್ಟಿಲುಗಳು, ಗೋಡೆಗಳು (ಕಾಂಪೌಂಡ್ ಗೋಡೆಗಳು ಮತ್ತು ಬೇಲಿಗಳೂ ಒಳಗೊಂಡು) ಜಾಹೀರಾತು ಫಲಕಗಳು ಮತ್ತು ಅದೇ ರೀತಿಯವುಗಳನ್ನು ಸಹ ಒಳಗೊಳ್ಳುತ್ತದೆ;

(ಸಿ) "ಕಟ್ಟಡ ರೇಖೆ" ಎಂದರೆ 7ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯ ಮೂಲಕ ಅಂಥ ಹೆದ್ದಾರಿ ಅಥವಾ ಅದರ ಭಾಗಕ್ಕೆ ಸಂಬಂಧಿಸಿದಂತೆ ನಿಗದಿಪಡಿಸಿದ ಯಾವುದೇ ಹೆದ್ದಾರಿ ಅಥವಾ ಅದರ ಭಾಗದ ಎರಡೂ ಕಡೆಯಲ್ಲಿನ ರೇಖೆ;

(ಡಿ) "ದಂಡು ಪ್ರದೇಶ" ಎಂದರೆ ದಂಡು ಪ್ರದೇಶ ಅಧಿನಿಯಮ, 1924 (ಕೇಂದ್ರ ಅಧಿನಿಯಮ 1924ರ ಸಂಖ್ಯೆ 2)ರ ಮೇರೆಗೆ ಸ್ಥಾಪಿಸಿದ ದಂಡು ಪ್ರದೇಶ;

(ಇ) "ನಿಯಂತ್ರಣ ರೇಖೆ" ಎಂದರೆ 7ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯ ಮೂಲಕ ಅಂಥ ಹೆದ್ದಾರಿ ಅಥವಾ ಅದರ ಭಾಗಕ್ಕೆ ಸಂಬಂಧಿಸಿದಂತೆ ನಿಗದಿಪಡಿಸಿದ ಕಟ್ಟಡ ರೇಖೆಯಿಂದ ಆಚೆ ಹೆದ್ದಾರಿ ಅಥವಾ ಅದರ ಭಾಗದ ಎರಡೂ ಕಡೆಯಲ್ಲಿನ ರೇಖೆ;

(ಎಫ್) "ಒತ್ತುವರಿ" ಎಂದರೆ ಯಾವುದೇ ಹೆದ್ದಾರಿ ಅಥವಾ ಅದರ ಭಾಗದ ಯಾವುದೇ ಅನಧಿಕೃತ ಅಧಿಭೋಗ ಮತ್ತು ಅದು,–

(i) ಹೆದ್ದಾರಿಯಲ್ಲಿ ಅಥವಾ ಅದರ ಮೇಲೆ ಅಥವಾ ಅದರ ಮೇಲೆ ಚಾಚಿಕೊಂಡ ಕಟ್ಟಡ ಅಥವಾ ಯಾವುದೇ ಇತರ ರಚನೆ, ಬಾಲ್ಕನಿಗಳು, ದ್ವಾರ ಮಂಟಪಗಳು, ಮುಂಚಾಚಿಕೆ ಇವುಗಳ ಅನಧಿಕೃತ ನಿರ್ಮಾಣ;

(ii) ಕಟ್ಟಡ ಸಾಮಗ್ರಿಗಳು ಅಥವಾ ಯಾವುದೇ ಇತರ ವಿವರಣೆಯ ಸರಕುಗಳನ್ನು ರಾಶಿ ಹಾಕುವುದಕ್ಕಾಗಿ, ಮಾರಾಟಕ್ಕಾಗಿ ವಸ್ತುಗಳನ್ನು ಪ್ರದರ್ಶಿಸುವುದಕ್ಕಾಗಿ, ಕಂಬಗಳು, ಗುಡಾರಗಳು, ಟೆಂಟುಗಳು, ಪೆಂಡಾಲುಗಳು, ಪ್ರಕಟಣಾ ಪಟಗಳು ಮತ್ತು ಇತರ ಅಂಥದೇ ನಿರ್ಮಿತಿಗಳಿಗಾಗಿ ಅಥವಾ ವಾಹನಗಳ ನಿಲುಗಡೆ ಅಥವಾ ಪ್ರಾಣಿಗಳನ್ನು ಲಾಯದಲ್ಲಿ ಕಟ್ಟುವುದಕ್ಕಾಗಿ ಅಥವಾ ಯಾವುದೇ ಇತರ ಉದ್ದೇಶಕ್ಕಾಗಿ ನಿಯಮಿಸಿದ ಅವಧಿ ಯಾವುದಾದರೂ ಇದ್ದರೆ ಅದನ್ನು ಮೀರಿ ಹೆದ್ದಾರಿಯ ಅನಧಿಕೃತ ಅಧಿಭೋಗ;

(iii) ಯಾವುದೇ ಹೆದ್ದಾರಿಯಲ್ಲಿ ಅಥವಾ ಅಂಥ ಹೆದ್ದಾರಿಯ ಕೆಳಗಡೆ ಮಾಡಿದ ಅಥವಾ ವಿಸ್ತರಿಸಿದ ಯಾವುದೇ ರೀತಿಯ ಅನಧಿಕೃತ ಅಗೆತಗಳು ಅಥವಾ ಗುಡ್ಡೆಗಳು

– ಇವುಗಳು ಒಳಗೊಳ್ಳುತ್ತವೆ;

(ಜಿ)ಕಟ್ಟಡಕ್ಕೆ ಸಂಬಂಧಪಟ್ಟಂತೆ ಅದರ ವ್ಯಾಕರಣ ವ್ಯತ್ಯಾಸಗಳೊಡನೆ "ನಿರ್ಮಿಸುವುದು" ಎಂದರೆ ಕಟ್ಟಡವನ್ನು ನಿರ್ಮಿಸುವುದು, ಪುನರ್ ನಿರ್ಮಿಸುವುದು, ವಿಸ್ತರಿಸುವುದು ಅದರ ಅಥವಾ ಭೂಮಿಯ ರಚನೆಯಲ್ಲಿ ಮಾರ್ಪಾಟು ಮಾಡುವುದು;

(ಹೆಚ್) ಭೂಮಿಯ ಯಾವುದೇ ತುಂಡಿಗೆ ಸಂಬಂಧಪಟ್ಟಂತೆ "ಅಗೆತವು" ಭೂಮಿಯ ಆ ತುಂಡಿನ ಮೇಲ್ಮೈಯನ್ನು ಭೇದಿಸದಂಥ ಯಾವುವೇ ಕೆಲಸಗಳನ್ನು ಒಳಗೊಳ್ಳುವುದಿಲ್ಲ, ಆದರೆ ಅದು ಬಾವಿಗಳು ಮತ್ತು ಕೆರೆಗಳನ್ನು ಒಳಗೊಳ್ಳುತ್ತದೆ;

(ಐ) "ಹೆದ್ದಾರಿ" ಎಂದರೆ ಯಾವುದರ ಮೇಲೆ ಸಾರ್ವಜನಿಕರಿಗೆ ದಾರಿಯ ಹಕ್ಕು ಇರುವುದೋ ಅಥವಾ ಅವರಿಗೆ ಪ್ರವೇಶಾವಕಾಶವನ್ನು ಕೊಡಲಾಗಿದೆಯೋ ಮತ್ತು ಯಾವುದನ್ನು 3ನೇ ಪ್ರಕರಣದ ಮೇರೆಗೆ ಹೆದ್ದಾರಿ ಎಂಬುದಾಗಿ ಘೋಷಿಸಲಾಗಿದೆಯೋ ಆ ಯಾವುದೇ ರಸ್ತೆ ಅಥವಾ ದಾರಿ;

ಈ ಪದವು,-

(i) ಅದರ ಗುಂಟ ಹೆದ್ದಾರಿಯನ್ನು ನಿರ್ಮಿಸುವ ದೃಷ್ಟಿಯಿಂದ ಆರ್ಜಿಸಿಕೊಂಡ ಅಥವಾ ಗಡಿಗುರುತು ಮಾಡಿದ ಯಾವುದೇ ಭೂಮಿ;

(ii) ಅಂಥ ರಸ್ತೆ ಅಥವಾ ದಾರಿಗೆ ಲಗತ್ತಾದ ಇಳಿಜಾರುಗಳು, ಪ್ರತಿ ತಟಗಳು ಪರೀಕ್ಷಾಗುಂಡಿಗಳು, ಕಾಲುದಾರಿಗಳು, ನೆಲಗಟ್ಟುಗಳು ಮತ್ತು ಬದಿ ತಡೆ ಮತ್ತು ಗಡಿ ಚರಂಡಿಗಳು;

(iii) ಅಂಥ ರಸ್ತೆ ಅಥವಾ ದಾರಿಯ ಮೇಲೆ ಅಥವಾ ಅದಕ್ಕೆ ಅಡ್ಡಲಾಗಿ ಕಟ್ಟಿದ ಎಲ್ಲಾ ಸೇತುವೆಗಳು, ಅಡಿಗಾಲುವೆಗಳು, ಒಡ್ಡುದಾರಿಗಳು, ವಾಹನದಾರಿಗಳು ಮತ್ತು ಇತರ ನಿರ್ಮಿತಿಗಳು; ಮತ್ತು

(iv) ಮರಗಳು, ಬೇಲಿಗಳು, ಕಂಬಗಳು, ಗಡಿ, ಅರ್ಧ ಕಿಲೋಮೀಟರು ಮತ್ತು ಕಿಲೋಮೀಟರು ಕಲ್ಲುಗಳು ಮತ್ತು ಇತರ ಹೆದ್ದಾರಿ ಸಾಧನ ಸಾಮಗ್ರಿಗಳು ಮತ್ತು ಸಾಮಗ್ರಿಗಳು ಮತ್ತು ಆ ರಸ್ತೆ ಅಥವಾ ದಾರಿಯ ಮೇಲೆ ರಾಶಿ ಹಾಕಿದ ಸಾಮಗ್ರಿಗಳು

- ಇವುಗಳನ್ನು ಒಳಗೊಳ್ಳುತ್ತದೆ;

(ಜೆ) "ಹೆದ್ದಾರಿ ಪ್ರಾಧಿಕಾರ" ಎಂದರೆ 4ನೇ ಪ್ರಕರಣದ ಮೇರೆಗೆ ಹಾಗೆಂದು ನೇಮಕ ಮಾಡಿದ ಪ್ರಾಧಿಕಾರ ಅಥವಾ ಯಾವುದಕ್ಕೆ ಅಂಥ ಪ್ರಾಧಿಕಾರದ ಪ್ರಕಾರ್ಯಗಳನ್ನು ವಹಿಸಿಕೊಡಲಾಗಿದೆಯೋ ಆ ಪ್ರಾಧಿಕಾರ;

(ಕೆ) "ಹೆದ್ದಾರಿ ಗಡಿಗಳು" ಎಂದರೆ 7ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯ ಮೂಲಕ ಅಂಥ ಹೆದ್ದಾರಿಗೆ ಸಂಬಂಧಿಸಿದಂತೆ ನಿಗದಿಪಡಿಸಿದ ಹೆದ್ದಾರಿಯ ಗಡಿಗಳು;

(ಎಲ್) "ಪ್ರವೇಶ ಮಾರ್ಗ" ಎಂಬುದು ವಾಹನಗಳಿಗಾಗಿ ಅಥವಾ ಪಾದಚಾರಿಗಳಿಗಾಗಿ ಖಾಸಗಿಯಾದದ್ದೇ ಆಗಲಿ ಅಥವಾ ಸಾರ್ವಜನಿಕವಾದದ್ದೇ ಆಗಲಿ ಯಾವುದೇ ಪ್ರವೇಶ ಮಾರ್ಗವನ್ನು ಒಳಗೊಳ್ಳುತ್ತದೆ ಮತ್ತು ಅದು ಯಾವುದೇ ಬೀದಿಯನ್ನು ಒಳಗೊಳ್ಳುತ್ತದೆ;

(ಎಂ) "ಹೆದ್ದಾರಿಯ ಮಧ್ಯ" ಎಂದರೆ ಹೆದ್ದಾರಿಯ ಗಡಿಗಳ ನಡುವಣ ಅರ್ಧದಾರಿಯಲ್ಲಿನ ಬಿಂದು;

(ಎನ್) "ಅಧಿಭೋಗದಾರ" ಇದು,-

(i) ಯಾವ ಆವರಣಕ್ಕೆ ಸಂಬಂಧಿಸಿದಂತೆ ಅಂಥ ಬಾಡಿಗೆಯನ್ನು ಸಂದಾಯ ಮಾಡಲಾಗುತ್ತಿದೆಯೋ ಅಥವಾ ಸಂದಾಯ ಮಾಡಬೇಕಾಗಿದೆಯೋ ಆ ಆವರಣದ ಬಾಡಿಗೆ ಅಥವಾ

ಬಾಡಿಗೆಯ ಯಾವುದೇ ಭಾಗವನ್ನು ಒಡೆಯನಿಗೆ ತತ್ಕಾಲದಲ್ಲಿ ಸಂದಾಯ ಮಾಡುತ್ತಿರುವ ಅಥವಾ ಸಂದಾಯ ಮಾಡಲು ಹೊಣೆಗಾರನಾದ ಯಾರೇ ವ್ಯಕ್ತಿ;

(ii) ಆ ಆವರಣದಲ್ಲಿ ವಾಸಿಸುತ್ತಿರುವ ಅಥವಾ ಅದನ್ನು ಅನ್ಯಥಾ ಉಪಯೋಗಿಸುತ್ತಿರುವ ಒಡೆಯ;

(iii) ಬಾಡಿಗೆರಹಿತ ಬಾಡಿಗೆದಾರ;

(iv) ಯಾವುದೇ ಆವರಣದ ಅಧಿಭೋಗದಲ್ಲಿರುವ ಲೈಸನ್ಸುದಾರ; ಮತ್ತು

(v) ಯಾವುದೇ ಆವರಣದ ಉಪಯೋಗ ಮತ್ತು ಅಧಿಭೋಗಕ್ಕಾಗಿ ಒಡೆಯನಿಗೆ ಹಾನಿ ಪರಿಹಾರವನ್ನು ಸಂದಾಯ ಮಾಡಲು ಹೊಣೆಗಾರನಾಗಿರುವ ಯಾವನೇ ವ್ಯಕ್ತಿ

– ಇವರನ್ನು ಒಳಗೊಳ್ಳುತ್ತದೆ;

(ಓ) "ಒಡೆಯ" ಎಂದರೆ,–

(ಎ) ಯಾವುದೇ ಆವರಣಕ್ಕೆ ಸಂಬಂಧಿಸಿದಂತೆ ಉಪಯೋಗಿಸಿದಾಗ, ಸದರಿ ಆವರಣದ ಬಾಡಿಗೆಯನ್ನು ಸ್ವೀಕರಿಸುವ ಅಥವಾ ಆ ಆವರಣವನ್ನು ಬಾಡಿಗೆಗೆ ಕೊಟ್ಟಿದ್ದರೆ ಅದರ ಬಾಡಿಗೆಯನ್ನು ಸ್ವೀಕರಿಸಲು ಹಕ್ಕುಳ್ಳವನಾಗಿರುತ್ತಿದ್ದ ವ್ಯಕ್ತಿ ಮತ್ತು ಅದು,–

(i) ಒಡೆಯನ ಪರವಾಗಿ ಅಂಥ ಬಾಡಿಗೆಯನ್ನು ಸ್ವೀಕರಿಸುವ ಏಜೆಂಟು ಅಥವಾ ನ್ಯಾಸಧಾರಿ;

(ii) ಧಾರ್ಮಿಕ ಅಥವಾ ಧರ್ಮಾರ್ಥ ಉದ್ದೇಶಗಳಿಗಾಗಿ ವಿನಿಯೋಗಿಸಿದ ಯಾವುದೇ ಆವರಣದ ಬಾಡಿಗೆಯನ್ನು ಸ್ವೀಕರಿಸುವ ಅಥವಾ ಅದನ್ನು ವಹಿಸಿಕೊಟ್ಟಿರುವ ಅಥವಾ ಅದಕ್ಕೆ ಸಂಬಂಧಪಟ್ಟ ಏಜೆಂಟ್ ಅಥವಾ ನ್ಯಾಸಧಾರಿ;

(iii) ಸಕ್ಷಮ ಅಧಿಕಾರ ವ್ಯಾಪ್ತಿಯ ಯಾವುದೇ ನ್ಯಾಯಾಲಯವು ನೇಮಕ ಮಾಡಿದ ರಿಸೀವರ್ ಅಥವಾ ವ್ಯವಸ್ಥಾಪಕ; ಮತ್ತು

(iv) ಅಧಿಭೋಗದಾರ

– ಇವರನ್ನು ಒಳಗೊಳ್ಳುತ್ತದೆ;

(ಬಿ) ಒಂದು ಸಂಸ್ಥೆ ಅಥವಾ ನಿಗಮಿತ ನಿಕಾಯಕ್ಕೆ ಸಂಬಂಧಿಸಿದಂತೆ ಉಪಯೋಗಿಸಿದಾಗ, ಅಂಥ ಸಂಸ್ಥೆ ಅಥವಾ ನಿಗಮಿತ ನಿಕಾಯದ ವ್ಯವಸ್ಥಾಪಕ;

(ಪಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಕ್ಯೂ) "ರೈಲ್ವೆ ಆಡಳಿತ" ಇದು ಭಾರತೀಯ ರೈಲ್ವೆ ಅಧಿನಿಯಮ, 1890 ಇದರಲ್ಲಿ ಇರುವಂಥದೇ ಅರ್ಥವನ್ನು ಹೊಂದಿರುತ್ತದೆ;

(ಆರ್) "ವಾಹನ" ಎಂಬುದು ಹೆದ್ದಾರಿಯ ಮೇಲೆ ಉಪಯೋಗಿಸಲು ಸಮರ್ಥವಾದ ಒಂದು ಕೈಬಂಡಿ, ಸ್ಲೆಡ್ಜ್‌ಗಾಡಿ, ನೇಗಿಲು, ಕುಂಟೆ ಮತ್ತು ಯಾವುದೇ ವಿವರಣೆಯ ಚಕ್ರವನ್ನು ಹೊಂದಿರುವ ವಾಹನವನ್ನು ಒಳಗೊಳ್ಳುತ್ತದೆ;

(ಎಸ್) ಈ ಅಧಿನಿಯಮದಲ್ಲಿ ಉಪಯೋಗಿಸಲಾದ "ಭೂಮಿ" "ಹಿತಾಸಕ್ತಿಯನ್ನು ಹೊಂದಿರುವ ವ್ಯಕ್ತಿಗಳು" ಮತ್ತು "ಕಾರ್ಯನಿರ್ವಹಿಸಲು ಹಕ್ಕುಳ್ಳ ವ್ಯಕ್ತಿಗಳು" ಎಂಬ ಪದಾವಳಿಗಳು ಭೂಸ್ವಾಧೀನ

ಅಧಿನಿಯಮ, 1894 ಇದರಲ್ಲಿ ಸದರಿ ಪದಾವಳಿಗಳು ಹೊಂದಿರುವಂಥದೇ ಅರ್ಥವನ್ನು ಹೊಂದಿರತಕ್ಕುದು.

## ಅಧ್ಯಾಯ II

## ಹೆದ್ದಾರಿಗಳ, ಹೆದ್ದಾರಿ ಪ್ರಾಧಿಕಾರಿಗಳ ಬಗ್ಗೆ ಘೋಷಣೆ ಮತ್ತು ಅವರ ಅಧಿಕಾರಗಳು ಮತ್ತು ಪ್ರಕಾರ್ಯಗಳು

**3. ಹೆದ್ದಾರಿಗಳೆಂದು ರಸ್ತೆಗಳು, ದಾರಿಗಳು ಅಥವಾ ಭೂಮಿಗಳ ಬಗ್ಗೆ ಘೋಷಣೆ.–** ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಯಾವುದೇ ರಸ್ತೆ, ದಾರಿ ಅಥವಾ ಭೂಮಿಯನ್ನು ಹೆದ್ದಾರಿ ಎಂಬುದಾಗಿ ಘೋಷಿಸಬಹುದು ಮತ್ತು ಅದನ್ನು,-

(i) ರಾಜ್ಯ ಹೆದ್ದಾರಿ (ವಿಶೇಷ);

(ii) ರಾಜ್ಯ ಹೆದ್ದಾರಿ;

(iii) ಮುಖ್ಯ ಜಿಲ್ಲಾ ರಸ್ತೆ;

(iv) ಇತರ ಜಿಲ್ಲಾ ರಸ್ತೆ; ಅಥವಾ

(v) ಹಳ್ಳಿ ರಸ್ತೆ

- ಎಂದು ವರ್ಗೀಕರಿಸಬಹುದು.

**4. ಹೆದ್ದಾರಿ ಪ್ರಾಧಿಕಾರಗಳ ನೇಮಕಾತಿ.–** ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮ ಅಥವಾ ಅದರ ಯಾವುದೇ ಉಪಬಂಧದ ಉದ್ದೇಶಕ್ಕಾಗಿ, ಯಾವನೇ ವ್ಯಕ್ತಿ ಅಥವಾ ಯಾವುದೇ ಪ್ರಾಧಿಕಾರವನ್ನು, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ರಾಜ್ಯದಲ್ಲಿನ ಅಥವಾ ರಾಜ್ಯದ ಭಾಗಗಳಲ್ಲಿನ ಎಲ್ಲಾ ಹೆದ್ದಾರಿಗಳಿಗಾಗಿ, ಅಥವಾ ರಾಜ್ಯದಲ್ಲಿನ ಯಾವುದೇ ನಿರ್ದಿಷ್ಟ ಹೆದ್ದಾರಿ ಅಥವಾ ಹೆದ್ದಾರಿಗಳಿಗಾಗಿ, ಪ್ರಾಧಿಕಾರವಾಗಿರಲು ನೇಮಕ ಮಾಡಬಹುದು.

**5. ಹೆದ್ದಾರಿ ಪ್ರಾಧಿಕಾರಗಳ ಅಧಿಕಾರಗಳು ಮತ್ತು ಕರ್ತವ್ಯಗಳು.–** ಹೆದ್ದಾರಿ ಪ್ರಾಧಿಕಾರವನ್ನು ನೇಮಕ ಮಾಡುವ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಮತ್ತು ರಾಜ್ಯ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು ಹೆದ್ದಾರಿ ಪ್ರಾಧಿಕಾರವು ಹೆದ್ದಾರಿಗಳ ಗುಂಟ ಕಟ್ಟಡಗಳ ಬೆಳವಣಿಗೆಯನ್ನು ನಿರ್ಬಂಧಿಸುವುದಕ್ಕಾಗಿ, ಒತ್ತುವರಿಗಳನ್ನು ತಡೆಗಟ್ಟುವುದು ಮತ್ತು ನಿವಾರಿಸುವುದಕ್ಕಾಗಿ ಮತ್ತು ಮೇಲಿನ ಯಾವುದೇ ಅಥವಾ ಎಲ್ಲಾ ವಿಷಯಗಳಿಗೆ ಅವಶ್ಯ ಮತ್ತು ಪ್ರಾಸಂಗಿಕವಾದ ಎಲ್ಲಾ ವಿಷಯಗಳಿಗಾಗಿ ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕುದು. ರಾಜ್ಯ ಸರ್ಕಾರದ ಅನುಮೋದನೆಗೆ ಮತ್ತು ಈ ಬಗ್ಗೆ ರಾಜ್ಯ ಸರ್ಕಾರವು ಮಾಡಬಹುದಾದಂಥ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು ಹೆದ್ದಾರಿ ಪ್ರಾಧಿಕಾರಕ್ಕೆ ಹೆದ್ದಾರಿಗಳ ನಿರ್ಮಾಣ, ನಿರ್ವಹಣೆ, ಅಭಿವೃದ್ಧಿ ಅಥವಾ ಮೇಲ್ಪಾಟನ್ನು ಕೈಗೊಳ್ಳುವುದು ಕಾನೂನು ಸಮ್ಮತವಾಗಿರತಕ್ಕುದು.

**6. ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಮತ್ತು ನೌಕರರು.–** ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅವುಗಳ ಮೇರೆಗೆ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಲು ಮತ್ತು ಅದಕ್ಕೆ

ವಿಧಿಸಿದ ಕರ್ತವ್ಯಗಳನ್ನು ನಿರ್ವಹಿಸಲು ಹೆದ್ದಾರಿ ಪ್ರಾಧಿಕಾರವನ್ನು ಸಮರ್ಥಗೊಳಿಸುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಅಂಥ ಪ್ರಾಧಿಕಾರದ ಅಧೀನದಲ್ಲಿ ಕೆಲಸ ಮಾಡಲು ಅದು ಅವಶ್ಯವೆಂದು ಭಾವಿಸುವಂಥ ಅಧಿಕಾರಿಗಳು ಅಥವಾ ನೌಕರರನ್ನು ನೇಮಕ ಮಾಡಬಹುದು.

## ಅಧ್ಯಾಯ - III

## ಕಟ್ಟಡಗಳ ಬೆಳವಣಿಗೆಯ ಬಗ್ಗೆ ನಿರ್ಬಂಧ

**7. ಹೆದ್ದಾರಿಗಳ ಕಟ್ಟಡ ಮತ್ತು ನಿಯಂತ್ರಣ ರೇಖೆಗಳ ಗಡಿಯನ್ನು ನಿಗದಿಪಡಿಸಲು ಅಧಿಕಾರ.–** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರಲಾಗಿರುವಂಥ ಯಾವುದೇ ಪ್ರದೇಶದಲ್ಲಿ; ಮತ್ತು

(i) 3ನೇ ಪ್ರಕರಣದ ಮೇರೆಗೆ ಯಾವುದೇ ರಸ್ತೆ, ದಾರಿ ಅಥವಾ ಭೂಮಿಯನ್ನು ಹೆದ್ದಾರಿ ಎಂಬುದಾಗಿ ಘೋಷಿಸಲಾಗಿರುವಲ್ಲಿ, ಅಥವಾ

(ii) ಹೆದ್ದಾರಿಯ ನಿರ್ಮಾಣ ಅಥವಾ ಅಭಿವೃದ್ಧಿಯನ್ನು ಕೈಗೊಂಡಿರುವಲ್ಲಿ, ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಂಥ ಹೆದ್ದಾರಿಗೆ ಸಂಬಂಧಿಸಿದಂತೆ ಹೆದ್ದಾರಿಗಡಿ, ಕಟ್ಟಡ ರೇಖೆ ಮತ್ತು ನಿಯಂತ್ರಣ ರೇಖೆಯನ್ನು ನಿಗದಿಪಡಿಸಬಹುದು:

ಪರಂತು, ಹೆದ್ದಾರಿಯು ಇರುವ ಅಥವಾ ಅದರ ಅಗತ್ಯತೆಗಳು ಅಥವಾ ಹೆದ್ದಾರಿಯು ಹಾದುಹೋಗುವಂಥ ಸ್ಥಳೀಯ ಪ್ರದೇಶದ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ರಾಜ್ಯಸರ್ಕಾರಕ್ಕೆ,–

(i) ವಿವಿಧ ಕಟ್ಟಡ ಅಥವಾ ನಿಯಂತ್ರಣ ರೇಖೆಗಳನ್ನು ನಿಗದಿಪಡಿಸುವುದು, ಅಥವಾ

(ii) ಯಾವುದೇ ಹೆದ್ದಾರಿ ಅಥವಾ ಅದರ ಭಾಗಕ್ಕೆ ಸಂಬಂಧಿಸಿದಂತೆ ಕಟ್ಟಡ ಅಥವಾ ನಿಯಂತ್ರಣ ರೇಖೆಗಳನ್ನು ನಿಗದಿಪಡಿಸದೆ ಇರುವುದು

– ಕಾನೂನು ಸಮ್ಮತವಾಗಿರತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮುಂಚೆ ಅರವತ್ತು ದಿವಸಗಳಿಗೆ ಕಡಿಮೆ ಇಲ್ಲದಂತೆ ರಾಜ್ಯ ಸರ್ಕಾರವು (1)ನೇ ಉಪಪ್ರಕರಣದ ನಿಬಂಧನೆಗಳ ಮೇರೆಗೆ ಒಂದು ಅಧಿಸೂಚನೆಯನ್ನು ಹೊರಡಿಸಲು ಅದು ಉದ್ದೇಶಿಸಿದೆ ಎಂದು ತಿಳಿಸುವ ಮತ್ತು ಅದರಲ್ಲಿ ಅಂಥ ಅಧಿಸೂಚನೆಯ ಮೇರೆಗೆ ನಿಗದಿಪಡಿಸಬೇಕೆಂದು ಪ್ರಸ್ತಾಪಿಸಿದ ಹೆದ್ದಾರಿ ಗಡಿ ಮತ್ತು ನಿಯಂತ್ರಣ ರೇಖೆಯ ನಡುವೆ ಇರುವ ಎಲ್ಲಾ ಭೂಮಿಗಳನ್ನು ಮತ್ತು ಹೊಸ ಕಾಮಗಾರಿಗಳ ಸಂದರ್ಭದಲ್ಲಿ ಸಂದರ್ಭಾನುಸಾರ ಆ ಹೆದ್ದಾರಿಯ ನಿರ್ಮಾಣ ಅಥವಾ ಅಭಿವೃದ್ಧಿಯಿಂದ ಪ್ರಯೋಜನ ಪಡೆಯುವ ಭೂಮಿಗಳನ್ನು ಸಹ ನಿರ್ದಿಷ್ಟಪಡಿಸಿ, ಅಂಥ ಅಧಿಸೂಚನೆಯಿಂದ ಬಾಧಿತರಾದ ಎಲ್ಲ ವ್ಯಕ್ತಿಗಳು ಅಂಥ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಸಂಬಂಧಿಸಿದಂತೆ ಯಾವುವೇ ಆಕ್ಷೇಪಣೆಗಳು ಅಥವಾ ಸೂಚನೆಗಳನ್ನು ಮಾಡಲು ಇಚ್ಛಿಸಿದರೆ ಎಲ್ಲಾ ವ್ಯಕ್ತಿಗಳನ್ನು ಸರ್ಕಾರಿ ರಾಜಪತ್ರದಲ್ಲಿ ಆ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಒಂದು ತಿಂಗಳೊಳಗೆ ಇವುಗಳಲ್ಲಿ ಯಾವ ಅವಧಿಯು ತರುವಾಯದಲ್ಲಿ ಮುಕ್ತಾಯವಾಗುವುದೋ ಆ ಅವಧಿಯೊಳಗೆ ಹೆದ್ದಾರಿ ಪ್ರಾಧಿಕಾರಕ್ಕೆ ಬರಹದಲ್ಲಿ ಅವರ ಆಕ್ಷೇಪಣೆಗಳು ಅಥವಾ ಸೂಚನೆಗಳನ್ನು ಒಪ್ಪಿಸಲು ಅಥವಾ ಅಂಥ ಪ್ರಾಧಿಕಾರದ ಮುಂದೆ ಹಾಜರಾಗಲು ಅಗತ್ಯಪಡಿಸುವ ನೋಟೀಸಿನೊಂದಿಗೆ ಅಧಿಸೂಚನೆಯನ್ನು ಸರ್ಕಾರಿ ರಾಜಪತ್ರದಲ್ಲಿ ಮತ್ತು ಗ್ರಾಮದಲ್ಲಿ ಮತ್ತು ಹೆದ್ದಾರಿಯು ಇರುವಂಥ ತಾಲೂಕಿನ ಕೇಂದ್ರ ಸ್ಥಳದಲ್ಲಿ ನಿಯಮಿಸಲಾದ ರೀತಿಯಲ್ಲಿ ಪ್ರಕಟಿಸುವಂತೆ ಮಾಡತಕ್ಕುದು.

(3) ಹೆದ್ದಾರಿ ಪ್ರಾಧಿಕಾರವು, ಅಂಥ ಎಲ್ಲಾ ಆಕ್ಷೇಪಣೆಗಳು ಮತ್ತು ಸೂಚನೆಗಳನ್ನು ಸಂದರ್ಭಾನುಸಾರ ಪರ್ಯಾಲೋಚಿಸಿದ ಅಥವಾ ಸುನಾವಣೆ ಮಾಡಿದ ತರುವಾಯ ಮತ್ತು ಅದು ಅವಶ್ಯವೆಂದು ಯೋಚಿಸುವಂಥ ಇನ್ನೂ ಹೆಚ್ಚಿನ ವಿಚಾರಣೆ ಯಾವುದಾದರೂ ಇದ್ದರೆ, ಅದನ್ನು ಮಾಡಿದ ತರುವಾಯ ರಾಜ್ಯ ಸರ್ಕಾರಕ್ಕೆ ಅದು ನಡೆಸಿದ ವ್ಯವಹರಣೆಗಳ ದಾಖಲೆಯ ಪ್ರತಿಯನ್ನು ಆಕ್ಷೇಪಣೆಗಳು ಅಥವಾ ಸೂಚನೆಗಳ ಬಗ್ಗೆ ಅದರ ಶಿಫಾರಸ್ಸುಗಳನ್ನು ನಿರೂಪಿಸುವ ವರದಿಯೊಂದಿಗೆ ಕಳುಹಿಸತಕ್ಕುದು.

(4) ಆಕ್ಷೇಪಣೆಗಳು ಅಥವಾ ಸೂಚನೆಗಳನ್ನು ದಾಖಲು ಮಾಡುವುದಕ್ಕಾಗಿ ಅಥವಾ ಅವುಗಳನ್ನು ಸುನಾವಣೆ ಮಾಡುವುದಕ್ಕಾಗಿ (2)ನೇ ಉಪಪ್ರಕರಣದ ಮೇರೆಗೆ ಅನುಮತಿಸಿದ ಕಾಲವು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಆಕ್ಷೇಪಣೆ ಅಥವಾ ಸೂಚನೆಯನ್ನು ಮಾಡಿರದಿದ್ದರೆ ರಾಜ್ಯ ಸರ್ಕಾರವು, (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಲು ಕೂಡಲೇ ಮುಂದುವರಿಯತಕ್ಕುದು. ಯಾವುದೇ ಅಂಥ ಆಕ್ಷೇಪಣೆ ಅಥವಾ ಸೂಚನೆಯನ್ನು ಮಾಡಿದ್ದರೆ, ರಾಜ್ಯ ಸರ್ಕಾರವು, (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ದಾಖಲೆ ಮತ್ತು ವರದಿಯನ್ನು ಪರ್ಯಾಲೋಚಿಸತಕ್ಕುದು; ಮತ್ತು

(ಎ) (1)ನೇ ಉಪಪ್ರಕರಣದ ಮೇರೆಗೆ ಆ ಅಧಿಸೂಚನೆಯನ್ನು ಹೊರಡಿಸುವ ಪ್ರಸ್ತಾವನೆಯನ್ನು ತ್ಯಜಿಸಬಹುದು; ಅಥವಾ

(ಬಿ) ಅದು ಸೂಕ್ತವೆಂದು ಯೋಚಿಸುವಂಥ ಮಾರ್ಪಾಟು ಯಾವುದಾದರೂ ಇದ್ದರೆ ಅದರೊಂದಿಗೆ (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಬಹುದು.

(5) ಆಕ್ಷೇಪಣೆಗಳು ಅಥವಾ ಸೂಚನೆಗಳನ್ನು ಪರ್ಯಾಲೋಚಿಸುವಲ್ಲಿ (1)ನೇ ಉಪಪ್ರಕರಣದ ಮೇರೆಗೆ ಆ ಅಧಿಸೂಚನೆಯನ್ನು ಹೊರಡಿಸುವ ಪ್ರಶ್ನೆಯ ಬಗ್ಗೆ ರಾಜ್ಯ ಸರ್ಕಾರದ ತೀರ್ಮಾನವು ಅಂತಿಮ ಮತ್ತು ನಿರ್ಣಾಯಕವಾಗಿರತಕ್ಕುದು.

**8. ನಕಾಶೆಯನ್ನು ಸಿದ್ಧಪಡಿಸತಕ್ಕುದು ಮತ್ತು ಇಡತಕ್ಕುದು.–** ಯಾವುದೇ ಹೆದ್ದಾರಿಗೆ ಸಂಬಂಧಿಸಿದಂತೆ, ಹೆದ್ದಾರಿ ಗಡಿ, ಕಟ್ಟಡ ರೇಖೆ ಮತ್ತು ನಿಯಂತ್ರಣ ರೇಖೆಯನ್ನು ನಿಗದಿಪಡಿಸಿ 7ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಪ್ರಕಟಪಡಿಸಿದ ದಿನಾಂಕದಿಂದ ಎರಡು ತಿಂಗಳೊಳಗೆ, ಹೆದ್ದಾರಿ ಪ್ರಾಧಿಕಾರವು, ಅಂಥ ಹೆದ್ದಾರಿಯು ಹಾದು ಹೋಗುವಂಥ ಪ್ರದೇಶದ ನಕಾಶೆಯನ್ನು ಮಾಡಿಸತಕ್ಕುದು, ಮತ್ತು ಅದರ ಮೇಲೆ ಹೆದ್ದಾರಿ ಗಡಿಗಳು ಮತ್ತು ಕಟ್ಟಡ ಮತ್ತು ನಿಯಂತ್ರಣ ರೇಖೆಗಳು ಮತ್ತು ಈ ಅಧಿನಿಯಮದ ಉದ್ದೇಶಕ್ಕಾಗಿ ಅವಶ್ಯವಾದ ಯಾವುದೇ ಇತರ ವಿವರಗಳನ್ನು ಗುರುತು ಮಾಡಿಸತಕ್ಕುದು ಮತ್ತು ಅದಕ್ಕೆ ಯಾವುದೇ ಬದಲಾವಣೆ ಅಥವಾ ಸೇರ್ಪಡೆಯನ್ನು ಮಾಡಿದ ದಿನಾಂಕದಿಂದ ಒಂದು ತಿಂಗಳೊಳಗೆ ಸದರಿ ನಕಾಶೆಯನ್ನು ಸರಿಪಡಿಸುವಂತೆ ಮಾಡಿಸತಕ್ಕುದು ಮತ್ತು ಹಾಗೆ ಅದನ್ನು ಕೊನೆಯ ಸಲ ಸರಿಪಡಿಸಿದ್ದಾಗ ಅದರ ಮೇಲೆ ತೋರಿಸಿದ ದಿನಾಂಕದೊಂದಿಗೆ ಅಂಥ ನಕಾಶೆಯನ್ನು ಹೆದ್ದಾರಿ ಪ್ರಾಧಿಕಾರದ ಕಚೇರಿಯಲ್ಲಿ ಇಡತಕ್ಕುದು. ಹೆದ್ದಾರಿ ಪ್ರಾಧಿಕಾರದ ಮೊಹರನ್ನು ಹೊಂದಿರತಕ್ಕ ಅಂಥ ನಕಾಶೆಯು ಪರಿಶೀಲನೆಗೆ ಮುಕ್ತವಾಗಿರತಕ್ಕುದು. ಅಂಥ ನಕಾಶೆಯ ಪ್ರತಿಯನ್ನು ನಿಯಮಿಸಬಹುದಾದಂಥ ಇತರ ಸ್ಥಳಗಳಲ್ಲಿ ಸಹ ಪರಿಶೀಲನೆಗಾಗಿ ಇಡತಕ್ಕುದು.

**9. ಹೆದ್ದಾರಿ ಗಡಿ ಮತ್ತು ಕಟ್ಟಡ ರೇಖೆಯ ನಡುವಣ ಮತ್ತು ಕಟ್ಟಡ ಮತ್ತು ನಿಯಂತ್ರಣ ರೇಖೆಗಳ ನಡುವಣ ಕಟ್ಟಡಗಳ ಮೇಲೆ ನಿರ್ಬಂಧಗಳು.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನು, ರೂಢಿ, ಒಪ್ಪಂದ ಅಥವಾ ಲಿಖಿತ ಪತ್ರದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಗೊತ್ತುಪಡಿಸಿದ ದಿವಸದಂದು ಅಥವಾ ಆ ತರುವಾಯ ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಈ ಕೆಳಕಂಡ ನಿರ್ಬಂಧಗಳು

ಜಾರಿಯಲ್ಲಿರತಕ್ಕುದು, ಹಾಗೆಂದರೆ ಹೆದ್ದಾರಿ ಪ್ರಾಧಿಕಾರದ ಬರಹದಲ್ಲಿನ ಪೂರ್ವಾನುಮತಿ ಇಲ್ಲದೆ, ಯಾವನೇ ವ್ಯಕ್ತಿಯು:-

(ಎ) ಸಂದರ್ಭಾನುಸಾರ 7ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನಿಗದಿಪಡಿಸಬೇಕೆಂದು ಪ್ರಸ್ತಾವಿಸಿದ ಅಥವಾ (1)ನೇ ಉಪಪ್ರಕರಣದ ಮೇರೆಗೆ ನಿಗದಿಪಡಿಸಿದ ಹೆದ್ದಾರಿ ಗಡಿ ಮತ್ತು ಕಟ್ಟಡ ರೇಖೆಯ ನಡುವೆ ಇರುವ ಯಾವುದೇ ಭೂಮಿಯ ಮೇಲೆ,-

(i) ಹೆದ್ದಾರಿಗೆ ಅಥವಾ ಅದರಿಂದ ಯಾವುದೇ ಪ್ರವೇಶ ಮಾರ್ಗವನ್ನು ನಿರ್ಮಿಸತಕ್ಕುದಲ್ಲ, ರೂಪಿಸತಕ್ಕುದಲ್ಲ ಅಥವಾ ರೂಪುರೇಖೆಗೊಳಿಸತಕ್ಕುದಲ್ಲ; ಅಥವಾ

(ii) ಯಾವುದೇ ಕಟ್ಟಡವನ್ನು ಕಟ್ಟತಕ್ಕುದಲ್ಲ; ಅಥವಾ

(iii) ಅಸ್ತಿತ್ವದಲ್ಲಿರುವ ಯಾವುದೇ ಕಟ್ಟಡವನ್ನು ಗಣನೀಯವಾಗಿ ಬದಲಾಯಿಸತಕ್ಕುದಲ್ಲ; ಅಥವಾ

(iv) ಯಾವುದೇ ಅಗೆತವನ್ನು ಮಾಡತಕ್ಕುದಲ್ಲ ಅಥವಾ ಅದನ್ನು ವಿಸ್ತರಿಸತಕ್ಕುದಲ್ಲ; ಅಥವಾ

(v) ಯಾವುದೇ ಕಾಮಗಾರಿಗಳನ್ನು ನಿರ್ಮಿಸತಕ್ಕುದಲ್ಲ, ರೂಪಿಸತಕ್ಕುದಲ್ಲ ಅಥವಾ ರೂಪುರೇಖೆಗೊಳಿಸತಕ್ಕುದಲ್ಲ; ಅಥವಾ

(ಬಿ) ಸಂದರ್ಭಾನುಸಾರ 7ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನಿಗದಿ ಪಡಿಸಬೇಕೆಂದು ಪ್ರಸ್ತಾವಿಸಿದ ಅಥವಾ (1)ನೇ ಉಪಪ್ರಕರಣದ ಮೇರೆಗೆ ನಿಗದಿಪಡಿಸಿದ ಕಟ್ಟಡ ರೇಖೆ ಮತ್ತು ನಿಯಂತ್ರಣ ರೇಖೆಯ ನಡುವೆ ಇರುವ ಯಾವುದೇ ಭೂಮಿಯ ಮೇಲೆ,-

(i) ಹೆದ್ದಾರಿಗೆ ಅಥವಾ ಅದರಿಂದ ಯಾವುದೇ ಪ್ರವೇಶ ಮಾರ್ಗವನ್ನು ನಿರ್ಮಿಸತಕ್ಕುದಲ್ಲ, ರೂಪಿಸತಕ್ಕುದಲ್ಲ ಅಥವಾ ರೂಪುರೇಖೆಗೊಳಿಸತಕ್ಕುದಲ್ಲ; ಅಥವಾ

(ii) ಯಾವುದೇ ಕಟ್ಟಡವನ್ನು ಕಟ್ಟತಕ್ಕುದಲ್ಲ; ಅಥವಾ

(iii) ಅಸ್ತಿತ್ವದಲ್ಲಿರುವ ಯಾವುದೇ ಕಟ್ಟಡವನ್ನು ಗಣನೀಯವಾಗಿ ಬದಲಾಯಿಸತಕ್ಕುದಲ್ಲ;

(ಸಿ) ಹೆದ್ದಾರಿ ಪ್ರಾಧಿಕಾರದ ಅಭಿಪ್ರಾಯದಲ್ಲಿ ಅಧಿನಿಯಮದ ಯಾವುದೇ ಉಪಬಂಧವನ್ನು ಯಾವುದೇ ರೀತಿಯಲ್ಲಿ ಉಲ್ಲಂಘಿಸುವ ಅಥವಾ ಅಂಥ ಕಟ್ಟಡವನ್ನು ಕಟ್ಟಿರುವಂಥ ಭೂಮಿಗೆ ಹೊಂದಿಕೊಂಡಿರುವ ಹೆದ್ದಾರಿಯ ಉಪಯೋಗಕ್ಕೆ ಅಡ್ಡಿಪಡಿಸುವಂಥ ರೀತಿಯಲ್ಲಿ ಯಾವುದೇ ಕಟ್ಟಡವನ್ನು ಉಪಯೋಗಿಸತಕ್ಕುದಲ್ಲ ಅಥವಾ ಈಗಾಗಲೇ ಕಟ್ಟಿರುವ ಯಾವುದೇ ಕಟ್ಟಡದ ಉಪಯೋಗವನ್ನು ಬದಲಾಯಿಸತಕ್ಕುದಲ್ಲ.

(2) (1)ನೇ ಉಪಪ್ರಕರಣದ ಮೇರೆಗೆ ಅಂಥ ಅನುಮತಿಯನ್ನು ಪಡೆಯಲಿಚ್ಛಿಸುವ ಪ್ರತಿಯೊಬ್ಬ ವ್ಯಕ್ತಿಯು, ಯಾವುದಕ್ಕೆ ಆ ಅರ್ಜಿಯು ಸಂಬಂಧಪಟ್ಟಿರುವುದೋ, ಸಂದರ್ಭಾನುಸಾರ ಆ ಕಟ್ಟಡ, ಬದಲಾವಣೆ, ಅಗೆತದ ಕಾಮಗಾರಿಗಳು ಅಥವಾ ಪ್ರವೇಶ ಮಾರ್ಗಕ್ಕೆ ಸಂಬಂಧಿಸಿದಂತೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಮಾಹಿತಿಗಳನ್ನೊಳಗೊಂಡ ಬರಹದಲ್ಲಿನ ಅರ್ಜಿಯನ್ನು ಹೆದ್ದಾರಿ ಪ್ರಾಧಿಕಾರಕ್ಕೆ ಮಾಡಿಕೊಳ್ಳತಕ್ಕುದು.

(3) ಅಂಥ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಹೆದ್ದಾರಿ ಪ್ರಾಧಿಕಾರವು, ಅದು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ವಿಚಾರಣೆಗಳನ್ನು ಮಾಡಿದ ತರುವಾಯ, ಬರಹದಲ್ಲಿನ ಆದೇಶದ ಮೂಲಕ,-

(ಎ) ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ, ಷರತ್ತುಗಳು ಯಾವುವಾದರೂ ಇದ್ದರೆ ಅವುಗಳಿಗೊಳಪಟ್ಟು ಅನುಮತಿಯನ್ನು ಕೊಡತಕ್ಕುದು; ಅಥವಾ

(ಬಿ) ಅಂಥ ಅನುಮತಿಯನ್ನು ಕೊಡಲು ನಿರಾಕರಿಸತಕ್ಕುದು:

ಪರಂತು,-

(i) ಯಾವುದೇ ಭೂಗತ ಗ್ರಾಮಸಾರ ಚರಂಡಿ, ಚರಂಡಿ, ವಿದ್ಯುಚ್ಛಕ್ತಿ ಮಾರ್ಗ, ಪೈಪು, ಕೊಳಾಯಿ ಅಥವಾ ಇತರ ಸಲಕರಣೆಗಳನ್ನು ದುರಸ್ತಿ ಮಾಡುವುದು, ನವೀಕರಿಸುವುದು, ವಿಸ್ತರಿಸುವುದು ಅಥವಾ ಇಟ್ಟುಕೊಂಡುಬರುವ ಉದ್ದೇಶಕ್ಕಾಗಿ ಯಾವುದೇ ಭೂಮಿಯಲ್ಲಿ ಯಾವುದೇ ಅಗೆತ ಅಥವಾ ನಿರ್ಮಾಣ, ರೂಪಣ ಅಥವಾ ರೂಪುರೇಖೆಗೊಳಿಸುವುದನ್ನು ಮಾಡಲು (1)ನೇ ಉಪಪ್ರಕರಣದ (ಎ) ಖಂಡದ ಮೇರೆಗಿನ ಅನುಮತಿಯನ್ನು ತಡೆಹಿಡಿಯತಕ್ಕುದಲ್ಲ ಅಥವಾ ಅದರ ಮೇಲೆ ರಸ್ತೆಯ ನಿರ್ಮಾಣ, ನಿರ್ವಹಣೆ, ಅಭಿವೃದ್ಧಿ ಅಥವಾ ಮೇಲ್ಪಾಟು, ಅದರಿಂದಾಗಿ ತಡೆಗಟ್ಟಲಾಗದಂತೆ ಅಥವಾ ಪ್ರತಿಕೂಲವಾಗಿ ಬಾಧಕವಾಗದಂಥ ರೀತಿಯಲ್ಲಿ ಮತ್ತು ಅಂಥ ಮಟ್ಟಗಳಲ್ಲಿ ಆ ಗ್ರಾಮಸಾರ ಚರಂಡಿ, ಚರಂಡಿ, ವಿದ್ಯುಚ್ಛಕ್ತಿ ಮಾರ್ಗ, ಪೈಪು, ಕೊಳಾಯಿ ಅಥವಾ ಇತರ ಸಲಕರಣೆಗಳನ್ನು ಜೋಡಿಸತಕ್ಕುದೆಂಬುದನ್ನು ಸುನಿಶ್ಚಿತ ಪಡಿಸಿಕೊಳ್ಳುವುದಕ್ಕಾಗಿ ಅವಶ್ಯವಾಗಿ ಬಹುದಾದಂಥವುಗಳನ್ನು ಹೊರತುಪಡಿಸಿ ಯಾವುವೇ ಷರತ್ತುಗಳಿಗೆ ಒಳಪಡಿಸತಕ್ಕುದಲ್ಲ;

(ii) ಸಾರ್ವಜನಿಕ ಆರೋಗ್ಯ ಮತ್ತು ಕಲ್ಯಾಣ ಮತ್ತು ಅದಕ್ಕೆ ಹೊಂದಿಕೊಂಡಿರುವ ರಸ್ತೆಯ ಮೇಲಿನ ಸಂಚಾರದ ಸುರಕ್ಷೆ ಮತ್ತು ಅನುಕೂಲತೆಯ ಅಗತ್ಯತೆಗಳಿಗೆ ಅನುಸಾರ ವಾಗಿರುವಂಥ ಕಟ್ಟಡದ ನಿರ್ಮಾಣ ಅಥವಾ ಬದಲಾವಣೆಗೆ ಅಥವಾ ಹೆದ್ದಾರಿಗೆ ಯಾವುದೇ ಪ್ರವೇಶ ಮಾರ್ಗವನ್ನು ರೂಪುರೇಖೆಗೊಳಿಸುವುದಕ್ಕೆ (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗಿನ ಅನುಮತಿಯನ್ನು ತಡೆಹಿಡಿಯತಕ್ಕುದಲ್ಲ ಅಥವಾ ಅದನ್ನು ಯುಕ್ತವಲ್ಲದ ಷರತ್ತುಗಳಿಗೆ ಒಳಪಡಿಸತಕ್ಕುದಲ್ಲ:

ಪರಂತು, ಕೃಷಿ ಉದ್ದೇಶಗಳಿಗಾಗಿ ಅಗತ್ಯವಾದ ಪ್ರವೇಶ ಮಾರ್ಗದ ಸಂದರ್ಭದಲ್ಲಿ, ಅಂಥ ಅನುಮತಿಯನ್ನು ತಡೆಹಿಡಿಯತಕ್ಕುದಲ್ಲ ಅಥವಾ ಆ ಪ್ರವೇಶ ಮಾರ್ಗವನ್ನು ಕೃಷಿ ಉದ್ದೇಶಗಳಿಗೆ ಮಾತ್ರವೇ ಉಪಯೋಗಿಸತಕ್ಕುದೆಂಬುದನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ ಅವಶ್ಯವಾಗಿರ ಬಹುದಾದಂಥದನ್ನು ಹೊರತುಪಡಿಸಿ ಯಾವುವೇ ಷರತ್ತುಗಳಿಗೆ ಒಳಪಡಿಸತಕ್ಕುದಲ್ಲ;

(iii) ಗೊತ್ತುಪಡಿಸಿದ ದಿವಸಕ್ಕೆ ಮುಂಚೆ ಅಸ್ತಿತ್ವದಲ್ಲಿದ್ದಂಥ ಕಟ್ಟಡದ ಪುನರ್‌ನಿರ್ಮಾಣ ಅಥವಾ ಬದಲಾವಣೆಗೆ (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗಿನ ಅನುಮತಿಯನ್ನು ತಡೆಹಿಡಿಯತಕ್ಕುದಲ್ಲ. ಅಥವಾ ಅಂಥ ಪುನರ್ ನಿರ್ಮಾಣ ಅಥವಾ ಬದಲಾವಣೆಯು ಆ ಕಟ್ಟಡದ ಹೊರ ನೋಟಕ್ಕೆ ಯಾವುದೇ ಗಣನೀಯ ಬದಲಾವಣೆಯನ್ನು ಒಳಗೊಂಡಿದ್ದ ಹೊರತು ಅದನ್ನು ನಿರ್ಬಂಧಗಳಿಗೆ ಒಳಪಡಿಸತಕ್ಕುದಲ್ಲ.

(4) ಹೆದ್ದಾರಿ ಪ್ರಾಧಿಕಾರವು ಅನುಮತಿಯನ್ನು ನಿರಾಕರಿಸಿದಾಗ, ಅದಕ್ಕಾಗಿನ ಕಾರಣಗಳನ್ನು ದಾಖಲು ಮಾಡತಕ್ಕುದು ಮತ್ತು ಅರ್ಜಿದಾರನಿಗೆ ತಿಳಿಸತಕ್ಕುದು:

ಪರಂತು, ಇಲ್ಲಿ ಅಡಕವಾಗಿರುವುದು ಯಾವುದೂ, ಯಾವ ಕಾರಣದಿಂದಾಗಿ ಅಂಥ ಅನುಮತಿಯನ್ನು ನಿರಾಕರಿಸಲಾಗಿತ್ತೋ ಆ ಕಾರಣದ ಮೇಲೆ ಹಿಂದೆ ಹೇಳಿದಂತೆ ಅವನಿಗೆ ತಿಳಿಸಲಾದ ಆಕ್ಷೇಪಾರ್ಹ ಅಂಶಗಳನ್ನು ಅದರಿಂದ ಲೋಪಿಸಿದ ತರುವಾಯ ಹೊಸ ಅರ್ಜಿಯನ್ನು ಮಾಡಿಕೊಳ್ಳುವುದಕ್ಕಾಗಿ ಆ ವ್ಯಕ್ತಿಯನ್ನು ಅನರ್ಹಗೊಳಿಸತಕ್ಕುದಲ್ಲ.

(5) ಅರ್ಜಿದಾರನ ಹೆಸರು ಮತ್ತು ವಿಳಾಸವನ್ನು ನಿರ್ದಿಷ್ಟಪಡಿಸಿ ಅಂಥ ಅನುಮತಿಗಾಗಿ ಹೆದ್ದಾರಿ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿದ ತರುವಾಯ ಮೂರು ತಿಂಗಳುಗಳ ಅವಧಿಯು ಮುಕ್ತಾಯವಾದ ಅಥವಾ ಹೆದ್ದಾರಿ ಪ್ರಾಧಿಕಾರವು ಅಧಿಸೂಚಿಸಬಹುದಾದಂತೆ ಮೂರು ತಿಂಗಳುಗಳನ್ನು ಮೀರದಂಥ ಇನ್ನೂ ಹೆಚ್ಚಿನ ಅವಧಿಯು ಮುಕ್ತಾಯವಾದಲ್ಲಿ ಮತ್ತು ಯಾವುದೇ ತೀರ್ಮಾನವನ್ನು ಬರಹದಲ್ಲಿ

ತಿಳಿಸದಿದ್ದರೆ ಅಥವಾ ಆ ವಿಳಾಸದಲ್ಲಿ ಅರ್ಜಿದಾರನಿಗೆ ಅಂಚೆಗೆ ಹಾಕಿಲ್ಲದಿದ್ದರೆ ಅಥವಾ ತಲುಪುವಂತೆ ಮಾಡದಿದ್ದರೆ, ಆಗ (ಹೆದ್ದಾರಿ ಪ್ರಾಧಿಕಾರ ಮತ್ತು ಅರ್ಜಿದಾರನ ನಡುವೆ ಬರಹದಲ್ಲಿ ಅನ್ಯಥಾ ಒಪ್ಪಬಹುದಾದಂತೆ ಹೊರತು) ಹೆದ್ದಾರಿ ಪ್ರಾಧಿಕಾರವು ಯಾವುದೇ ಷರತ್ತುಗಳನ್ನು ವಿಧಿಸದೆ ಅನುಮತಿಯನ್ನು ಕೊಟ್ಟಿರುವುದಾಗಿ ಭಾವಿಸತಕ್ಕುದು.

(6) ಹೆದ್ದಾರಿ ಪ್ರಾಧಿಕಾರವು, ಅದು ಈ ಪ್ರಕರಣದ ಮೇರೆಗೆ ಕೊಟ್ಟ ಅಥವಾ ನಿರಾಕರಿಸಿದ ಎಲ್ಲಾ ಅನುಮತಿಗಳ ಸಾಕಷ್ಟು ವಿವರಗಳೊಂದಿಗೆ ರಿಜಿಸ್ಟರನ್ನು ಇಟ್ಟುಕೊಂಡು ಬರತಕ್ಕುದು ಮತ್ತು ಆ ರಿಜಿಸ್ಟರು ಹಿತಾಸಕ್ತಿಯುಳ್ಳ ಎಲ್ಲಾ ವ್ಯಕ್ತಿಗಳಿಗೆ ಉಚಿತವಾಗಿ ಪರಿಶೀಲನೆಗಾಗಿ ಲಭ್ಯವಾಗಿರತಕ್ಕುದು ಮತ್ತು ಅಂಥ ವ್ಯಕ್ತಿಗಳು ಅದರಿಂದ ಉದ್ಧೃತ ಭಾಗವನ್ನು ತೆಗೆದುಕೊಳ್ಳಲು ಹಕ್ಕುಳ್ಳವರಾಗಿರತಕ್ಕುದು.

**ವಿವರಣೆ.–** ಈ ಪ್ರಕರಣದ ಉದ್ದೇಶಕ್ಕಾಗಿ ಯಾವುದೇ ಹೆದ್ದಾರಿ ಗಡಿ, ಕಟ್ಟಡ ರೇಖೆ, ನಿಯಂತ್ರಣ ರೇಖೆಗೆ ಸಂಬಂಧಿಸಿದಂತೆ "ಗೊತ್ತುಪಡಿಸಿದ ದಿವಸ" ಎಂದರೆ,–

(i) ಅಂಥ ಹೆದ್ದಾರಿ ಗಡಿ, ಕಟ್ಟಡ ರೇಖೆ ಅಥವಾ ನಿಯಂತ್ರಣ ರೇಖೆಯನ್ನು ನಿಗದಿಪಡಿಸಲು ಪ್ರಸ್ತಾಪಿಸಿ 7ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯನ್ನು ಪ್ರಕಟಿಸಿದಂಥ ದಿವಸ; ಮತ್ತು

(ii) ಅಂಥ ಹೆದ್ದಾರಿ ಗಡಿ, ಕಟ್ಟಡ ರೇಖೆ ಅಥವಾ ನಿಯಂತ್ರಣ ರೇಖೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಿದ್ದರೆ, ಅಂಥ ಹೆದ್ದಾರಿ ಗಡಿ, ಕಟ್ಟಡ ರೇಖೆ ಅಥವಾ ನಿಯಂತ್ರಣ ರೇಖೆಯನ್ನು ನಿಗದಿಪಡಿಸಿ 7ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಪ್ರಕಟಿಸಿದಂಥ ದಿವಸ.

**10. ಅಪೀಲು.–** (1) ಅನುಮತಿಯನ್ನು ತಡೆಹಿಡಿದು ಅಥವಾ ಯಾವುದೇ ಷರತ್ತನ್ನು ವಿಧಿಸಿ, 9ನೇ ಪ್ರಕರಣದ ಮೇರೆಗೆ ಹೆದ್ದಾರಿ ಪ್ರಾಧಿಕಾರವು ಮಾಡಿದ ತೀರ್ಮಾನದಿಂದ ಯಾವನೇ ಅರ್ಜಿದಾರನು ಬಾಧಿತನಾದರೆ ಅವನು ಅಂಥ ತೀರ್ಮಾನವನ್ನು ಅವನಿಗೆ ತಿಳಿಸಿದಂಥ ದಿನಾಂಕದಿಂದ ಮೂವತ್ತು ದಿವಸಗಳೊಳಗೆ ನಿಯಮಿಸಿದ ಪ್ರಾಧಿಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು.

(2) ನಿಯಮಿಸಿದ ಪ್ರಾಧಿಕಾರವು, ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ ಅಪೀಲಿನ ಬಗ್ಗೆ ಅದು ಸೂಕ್ತವೆಂದು ಯೋಚಿಸುವಂಥ ಆದೇಶವನ್ನು ಮಾಡಬಹುದು ಮತ್ತು ಅದರ ತೀರ್ಮಾನವು ಅಂತಿಮವಾಗಿರತಕ್ಕುದು.

**11. ನಡೆಯುತ್ತಿರುವ ಕಾಮಗಾರಿಗಳಿಗಾಗಿ ವಿನಾಯಿತಿ, ಇತ್ಯಾದಿ.–** (1) 9ನೇ ಪ್ರಕರಣದ ಮೇರೆಗೆ ಜಾರಿಯಲ್ಲಿರುವ ಯಾವುದೇ ನಿರ್ಬಂಧವು 9ನೇ ಪ್ರಕರಣದಲ್ಲಿ ಉಲ್ಲೇಖಿಸಿದ, ಗೊತ್ತುಪಡಿಸಿದ ದಿವಸಕ್ಕೆ ಮುಂಚೆ ಪ್ರಾರಂಭಿಸಿದ್ದ ಕಟ್ಟಡದ ನಿರ್ಮಾಣ ಅಥವಾ ಅದನ್ನು ಮಾಡುವುದಕ್ಕೆ ಅಥವಾ ಅಗೆತ ಅಥವಾ ಯಾವುದೇ ಪ್ರವೇಶಮಾರ್ಗ ಅಥವಾ ಕಾಮಗಾರಿಗಳ ನಿರ್ಮಾಣ ಅಥವಾ ಅದನ್ನು ರೂಪಿಸುವುದು ಅಥವಾ ರೂಪುರೇಖೆಗೊಳಿಸುವುದು ಇವುಗಳಿಗೆ ಅನ್ವಯವಾಗತಕ್ಕುದಲ್ಲ.

(2) ಪ್ರವೇಶ ಮಾರ್ಗದ ನಿರ್ಮಾಣ, ರೂಪಿಸುವುದು ಅಥವಾ ರೂಪುರೇಖೆಗೊಳಿಸುವುದರ ಬಗೆಗಿನ ನಿರ್ಬಂಧವನ್ನು ಹೊರತುಪಡಿಸಿ 9ನೇ ಪ್ರಕರಣದ ಮೇರೆಗೆ ಜಾರಿಯಲ್ಲಿರುವ ಯಾವುದೇ ನಿರ್ಬಂಧವು ಈ ಅಧಿನಿಯಮವನ್ನು ಅಂಗೀಕರಿಸುವುದಕ್ಕೆ ಮುಂಚೆ ಅಂಥ ಉದ್ದೇಶಕ್ಕಾಗಿ ಉಪಯೋಗಿಸಲಾಗಿದ್ದ ಭೂಮಿಯಾಗಿದ್ದು ಸತ್ತವರ ವಿಲೆಗಾಗಿನ ಸ್ಮಶಾನ ಅಥವಾ ಸುಡುಗಾಡು ಅಥವಾ ಇತರ ಸ್ಥಳದ ಭಾಗವಾಗಿರುವ ಯಾವುದೇ ಭೂಮಿಗೆ ಅನ್ವಯವಾಗತಕ್ಕುದಲ್ಲ.

(3) 9ನೇ ಪ್ರಕರಣದ ಮೇರೆಗೆ ಜಾರಿಯಲ್ಲಿರುವ ಯಾವುದೇ ನಿರ್ಬಂಧವು, ಆ ನಿರ್ಬಂಧವು ಜಾರಿಗೆ ಬಂದಂಥ ದಿನಾಂಕಕ್ಕೆ ಮುಂಚೆ ಅಥವಾ ಆ ದಿನಾಂಕದಂದು ಅಥವಾ ಆ ತರುವಾಯ ಹೆದ್ದಾರಿ

ಪ್ರಾಧಿಕಾರದ ಸಮ್ಮತಿಯೊಂದಿಗೆ ಆ ಭೂಮಿಯಲ್ಲಿ ಅಥವಾ ಅದರ ಮೇಲೆ ನಿರ್ಮಿಸಿದ ಕೃಷಿ ಉದ್ದೇಶಗಳಿಗಾಗಿನ ಯಾವುದೇ ಚರಂಡಿಗಳು, ಕಂದಕಗಳು ಅಥವಾ ಇತರ ಚರಂಡಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅವಶ್ಯವಾದ ಯಾವುದೇ ಅಗೆತ ಅಥವಾ ಕಾಮಗಾರಿಗಳಿಗೆ ಅಥವಾ ಯಾವುದೇ ಗ್ರಾಮಸಾರ ಚರಂಡಿ, ಚರಂಡಿ, ವಿದ್ಯುಚ್ಛಕ್ತಿ ಮಾರ್ಗ, ಪೈಪು, ಕೊಳಾಯಿ ಅಥವಾ ಇತರ ಸಲಕರಣೆಗಳ ದುರಸ್ತಿ, ನವೀಕರಣ, ವಿಸ್ತರಣೆ ಅಥವಾ ನಿರ್ವಹಣೆಗೆ ಅವಶ್ಯವಾದ ಯಾವುವೇ ಕಾಮಗಾರಿಗಳಿಗೆ ಅನ್ವಯವಾಗತಕ್ಕುದಲ್ಲ.

**12 ಕಟ್ಟಡ ರೇಖೆಯ ಅಥವಾ ನಿಯಂತ್ರಣ ರೇಖೆಯ ಹಿಂದಕ್ಕೆ ಕಟ್ಟಡಗಳನ್ನು ನೆಲೆಗೊಳಿಸುವುದು.–** 9ನೇ ಪ್ರಕರಣದಲ್ಲಿ ಉಲ್ಲೇಖಿಸಿದ, ಗೊತ್ತುಪಡಿಸಿದ ದಿವಸಕ್ಕೆ ಮುಂಚೆ ನಿರ್ಮಿಸಿದ ಯಾವುದೇ ಕಟ್ಟಡ ಅಥವಾ ಅದರ ಯಾವುದೇ ಭಾಗವು ಕಟ್ಟಡ ರೇಖೆ ಮತ್ತು ಹೆದ್ದಾರಿಯ ನಡುವೆ ಇರುವಾಗಲೆಲ್ಲಾ ಹೆದ್ದಾರಿ ಪ್ರಾಧಿಕಾರವು ಯಾವುದೇ ಕಟ್ಟಡ ಅಥವಾ ಅದರ ಭಾಗವನ್ನು ಪೂರ್ಣವಾಗಿಯೇ ಆಗಲಿ ಅಥವಾ ಅದರ ಹೆಚ್ಚಿನ ಭಾಗವನ್ನೇ ಆಗಲಿ ಕೆಡವಿಹಾಕಿರುವಾಗಲೆಲ್ಲ, ಸುಟ್ಟುಹೋಗಿರುವಾಗಲೆಲ್ಲ, ಬಿದ್ದುಹೋಗಿರುವಾಗಲೆಲ್ಲ ನೋಟೀಸಿನ ಮೂಲಕ ಅಂಥ ಕಟ್ಟಡ ಅಥವಾ ಅದರ ಭಾಗವನ್ನು ಪುನರ್ನಿರ್ಮಿಸಿದಾಗ ಕಟ್ಟಡ ರೇಖೆ ಅಥವಾ ನಿಯಂತ್ರಣ ರೇಖೆಯ ಹಿಂದಕ್ಕೆ ನೆಲೆಗೊಳಿಸಲು ಅಗತ್ಯಪಡಿಸಬಹುದು.

**13. ಹೆದ್ದಾರಿಗೆ ಪ್ರವೇಶಾವಕಾಶದ ಹಕ್ಕನ್ನು ನಿಯಂತ್ರಿಸುವುದು ಅಥವಾ ಪಲ್ಲಟಿಸುವುದು.–** (1) ಹೆದ್ದಾರಿ ಪ್ರಾಧಿಕಾರವು, ಸಂಚಾರದ ಸುರಕ್ಷೆ ಅಥವಾ ಅನುಕೂಲತೆಯ ಹಿತಾಸಕ್ತಿಯಲ್ಲಿ ಅದು ಅತ್ಯವಶ್ಯವೆಂದು ಪರಿಗಣಿಸಿದರೆ ಪ್ರವೇಶಾವಕಾಶವನ್ನು ಹೆದ್ದಾರಿಗೆ ನಿಯಂತ್ರಣ ರೇಖೆ ಮತ್ತು ಹೆದ್ದಾರಿ ಗಡಿಯ ನಡುವೆ ಇರುವ ಭೂಮಿಗೆ ಅಡ್ಡಲಾಗಿ ನಿಯಂತ್ರಿಸಬಹುದು ಅಥವಾ ಪಲ್ಲಟಿಸಬಹುದು:

ಪರಂತು, ಅಸ್ತಿತ್ವದಲ್ಲಿರುವ ಪ್ರವೇಶಾವಕಾಶದ ಹಕ್ಕನ್ನು, ಪರ್ಯಾಯ ಪ್ರವೇಶಾವಕಾಶವನ್ನು ಕೊಡುವವರೆಗೆ ಪಲ್ಲಟಿಸತಕ್ಕುದಲ್ಲ.

(2) ಅಸ್ತಿತ್ವದಲ್ಲಿರುವ ಪ್ರವೇಶಾವಕಾಶದ ಹಕ್ಕನ್ನು ಪಲ್ಲಟಿಸುವಲ್ಲಿ ಹೆದ್ದಾರಿಗೆ ಪರ್ಯಾಯ ಪ್ರವೇಶಾವಕಾಶವನ್ನು ಕೊಟ್ಟಿರುವಂಥ ಸ್ಥಳವು ಅಸ್ತಿತ್ವದಲ್ಲಿರುವ ಪ್ರವೇಶಾವಕಾಶದ ಸ್ಥಳದಿಂದ ಯುಕ್ತವಲ್ಲದ ದೂರದಲ್ಲಿರತಕ್ಕುದಲ್ಲ.

(3) ಹೆದ್ದಾರಿ ಪ್ರಾಧಿಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಯಾವ ದಿನಾಂಕದಂದು ಅಸ್ತಿತ್ವದಲ್ಲಿರುವ ಪ್ರವೇಶಾವಕಾಶದ ಹಕ್ಕನ್ನು ಪಲ್ಲಟಗೊಳಿಸಲಾಗಿದೆಯೋ ಮತ್ತು ಪರ್ಯಾಯ ಪ್ರವೇಶಾವಕಾಶವನ್ನು ಕೊಡಲಾಗಿದೆಯೋ ಆ ದಿನಾಂಕವನ್ನು ಪ್ರಕಟಿಸತಕ್ಕುದು.

**14. ಮೋಜಣಿಗಳಿಗೆ ಸಂಬಂಧಿಸಿದಂತೆ ಹೆದ್ದಾರಿ ಪ್ರಾಧಿಕಾರ ಮತ್ತು 6ನೇ ಪ್ರಕರಣದ ಮೇರೆಗೆ ನೇಮಕಗೊಂಡ ಅಧಿಕಾರಿಗಳು ಮತ್ತು ನೌಕರರ ಅಧಿಕಾರಗಳು.–** ಈ ಅಧಿನಿಯಮದ ಯಾವುದೇ ಉಪಬಂಧವನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ, ಹೆದ್ದಾರಿ ಪ್ರಾಧಿಕಾರ ಮತ್ತು 6ನೇ ಪ್ರಕರಣದ ಮೇರೆಗೆ ನೇಮಕಗೊಂಡ ಅಧಿಕಾರಿಗಳು ಮತ್ತು ನೌಕರರು,–

(ಎ) ಯಾವುದೇ ಭೂಮಿಯ ಮೇಲೆ ಪ್ರವೇಶಿಸಬಹುದು, ಮೋಜಣಿ ಮಾಡಬಹುದು ಮತ್ತು ಅಳತೆಗಳನ್ನು ಮತ್ತು ಮಟ್ಟಗಳನ್ನು ತೆಗೆದುಕೊಳ್ಳಬಹುದು;

(ಬಿ) ಅಂಥ ಮಟ್ಟಗಳನ್ನು ಗುರುತು ಮಾಡಬಹುದು, ಯಾವುದೇ ಭೂಮಿಯನ್ನು ಅಗೆಯಬಹುದು ಅಥವಾ ಅದರ ಒಳಮಣ್ಣಿನೊಳಕ್ಕೆ ರಂಧ್ರ ಕೊರೆಯಬಹುದು;

(ಸಿ) ಕಲ್ಲುಗಳು ಅಥವಾ ಗುರುತುಗಳಿಗೆ ಹೊಂದಿಕೊಂಡಿರುವ ಕಾಲ್ಪನಿಕ ರೇಖೆಯ ರಸ್ತೆಯ ಗಡಿಯನ್ನು ಸರಿಯಾಗಿ ತೋರಿಸುವಂಥ ರೀತಿಯಲ್ಲಿ ಇಡಿ ಹೆದ್ದಾರಿಯಗುಂಟ ಅಂತರಗಳಲ್ಲಿ

ಕಲ್ಲುಗಳನ್ನು ನೆಡುವ ಅಥವಾ ಬಾಳಿಕೆ ಬರುವ ಸ್ವರೂಪದ ವಿವಿಧ ಬಣ್ಣಗಳಲ್ಲಿ ಇತರ ಸೂಕ್ತ ಗುರುತುಗಳನ್ನು ನೆಡುವ ಮೂಲಕ ಹೆದ್ದಾರಿಯ ಗಡಿಗಳನ್ನು ಗುರುತುಮಾಡಬಹುದು;

(ಡಿ) ರಸ್ತೆ ಗಡಿಯ ಮೇಲೆ ತಿರುವುಗಳು ಅಥವಾ ತಿರಿಚುಗಳು ಇರುವಲ್ಲಿ ಕಲ್ಲು ಅಥವಾ ವಿವಿಧ ಬಣ್ಣಗಳಲ್ಲಿನ ಗುರುತುಗಳನ್ನು, ಅವುಗಳನ್ನು ನೇರ ರೇಖೆಗಳಿಂದ ಕೂಡಿಸಿದರೆ ಆ ಗಡಿಯ ಸರಿಯಾದ ಆಕಾರವನ್ನು ಕೊಡುವ ಹಾಗೆ ನೆಲೆಗೊಳಿಸಬಹುದು;

(ಇ) ಅಂಥ ಗಡಿ ಕಲ್ಲುಗಳು ಅಥವಾ ಗುರುತುಗಳಿಗೆ ಅನುಕ್ರಮವಾದ ಸಂಖ್ಯೆಗಳನ್ನು ಕೊಡಬಹುದು ಮತ್ತು ಭೂಮಿಯ ಮೇಲೆ ಅವುಗಳು ಆ ಹೆದ್ದಾರಿಯ ಭಾಗವಾಗಿದ್ದಿದ್ದರೆ ಹೇಗೋ ಹಾಗೆ ಅವುಗಳನ್ನು ಇಟ್ಟುಕೊಂಡು ಬರಬಹುದು;

(ಎಫ್) ವಿವಿಧ ಬಣ್ಣಗಳಲ್ಲಿ ಗುರುತುಗಳನ್ನು ಮಾಡುವ ಮತ್ತು ಕಂದಕಗಳನ್ನು ತೋಡುವ ಮೂಲಕ ಕಟ್ಟಡ ಮತ್ತು ನಿಯಂತ್ರಣ ರೇಖೆಗಳನ್ನು ರೂಪುರೇಖೆಗೊಳಿಸಬಹುದು;

(ಜಿ) ಮೋಜಣಿಯನ್ನು ಅನ್ಯಥಾ ಮಾಡಲಾಗದಿದ್ದರೆ ಅಥವಾ ಅಳತೆಗಳನ್ನು ಅಥವಾ ಮಟ್ಟಗಳನ್ನು ತೆಗೆದುಕೊಳ್ಳಲಾಗದಿದ್ದರೆ ಅಥವಾ ಗಡಿಗಳನ್ನು ಗುರುತಿಸಲಾಗದಿದ್ದರೆ ಮತ್ತು ರೇಖೆಗಳನ್ನು ರೂಪುರೇಖೆಗೊಳಿಸಲಾಗದಿದ್ದರೆ, ಯಾವುದೇ ಬೆಳೆದಿರುವ ಫಸಲು, ಮರ, ಬೇಲಿ, ಕಾಡು ಅಥವಾ ಅದರ ಯಾವುದೇ ಭಾಗವನ್ನು ಕತ್ತರಿಸಿ ಹಾಕಬಹುದು ಮತ್ತು ತೆಗೆದುಹಾಕಬಹುದು;

(ಹೆಚ್) ಈ ಬಗ್ಗೆ ಅವಶ್ಯವಾದ ಎಲ್ಲಾ ಇತರ ಕಾರ್ಯಗಳನ್ನು ಮಾಡಬಹುದು:

ಪರಂತು, ಹೆದ್ದಾರಿ ಪ್ರಾಧಿಕಾರವು, ಅದರ ಅಧಿಭೋಗದಾರನ ಸಮ್ಮತಿಯಿಂದ ಹೊರತು ಹಾಗೆ ಮಾಡುವ ಅದರ ಉದ್ದೇಶದ ಬಗ್ಗೆ ಕನಿಷ್ಠ ಪಕ್ಷ ಇಪ್ಪತ್ತನಾಲ್ಕು ಗಂಟೆಗಳ ಬರಹದಲ್ಲಿನ ನೋಟೀಸನ್ನು ಅಂಥ ಅಧಿಭೋಗದಾರನಿಗೆ ಮೊದಲು ಕೊಡದೆ ಯಾವುದೇ ಆವರಣವನ್ನು ಪ್ರವೇಶಿಸತಕ್ಕುದಲ್ಲ ಅಥವಾ ಪ್ರವೇಶಿಸಲು ಯಾವನೇ ಅಧಿಕಾರಿ ಅಥವಾ ನೌಕರನಿಗೆ ಅನುಮತಿಸತಕ್ಕುದಲ್ಲ.

**15. ಭೂಮಿ ಅಥವಾ ಭೂಮಿಯಲ್ಲಿನ ಹಕ್ಕು ಅಥವಾ ಹಿತಾಸಕ್ತಿಯ ಆರ್ಜನೆ.–** ಹೆದ್ದಾರಿ ಪ್ರಾಧಿಕಾರದ ಅರ್ಜಿಯ ಮೇಲೆ ಯಾವುದೇ ಕಾಲದಲ್ಲಿ ಹೆದ್ದಾರಿಯ ಉದ್ದೇಶಗಳಿಗಾಗಿ ಅಗತ್ಯವಾಗಿರುವ ಯಾವುದೇ ಭೂಮಿ ಅಥವಾ ಸದರಿ ಉದ್ದೇಶಗಳಿಗಾಗಿ, ಅಗತ್ಯವಾಗಿರುವ ಯಾವುದೇ ಭೂಮಿಯಲ್ಲಿನ ಯಾವನೇ ವ್ಯಕ್ತಿಯ ಯಾವುದೇ ಹಕ್ಕು ಅಥವಾ ಹಿತಾಸಕ್ತಿಯನ್ನು ಸಂದರ್ಭಾನುಸಾರ ಕಡ್ಡಾಯವಾಗಿ ಆರ್ಜಿಸಿಕೊಳ್ಳತಕ್ಕುದು ಅಥವಾ ಅಂತ್ಯಗೊಳಿಸತಕ್ಕುದೆಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ, ಸರ್ಕಾರಿ ರಾಜ್ಯಪತ್ರದಲ್ಲಿ ಆ ಬಗ್ಗೆ ಅಧಿಸೂಚನೆಯನ್ನು ಪ್ರಕಟಿಸುವುದು ರಾಜ್ಯ ಸರ್ಕಾರಕ್ಕೆ ಕಾನೂನು ಸಮ್ಮತವಾಗಿರತಕ್ಕುದು. ಅಂಥ ಅಧಿಸೂಚನೆಯನ್ನು ನಿಯಮಿಸಬಹುದಾದಂಥ ಇತರ ರೀತಿಯಲ್ಲಿಯೂ ಸಹ ಪ್ರಕಟಿಸತಕ್ಕುದು. ಹಾಗೆ ಪ್ರಕಟಿಸಿದ ಅಧಿಸೂಚನೆಯನ್ನು ಸಂದರ್ಭಾನುಸಾರ ಆ ಭೂಮಿಯು ಆ ಹೆದ್ದಾರಿಯ ಉದ್ದೇಶಗಳಿಗಾಗಿ ಬೇಕಾಗಿದೆ ಅಥವಾ ಆ ಹಕ್ಕು ಅಥವಾ ಹಿತಾಸಕ್ತಿಯನ್ನು ಅಂತ್ಯಗೊಳಿಸುವುದು ಅಗತ್ಯವಾಗಿದೆ ಎಂಬ ಘೋಷಣೆಯಾಗಿರುವುದಾಗಿ ಭಾವಿಸತಕ್ಕುದು; ಮತ್ತು ಅಂಥ ಘೋಷಣೆಯು, ಆ ಭೂಮಿಯು ಹಾಗೆ ಬೇಕಾಗಿದೆ ಅಥವಾ ಆ ಹಕ್ಕು ಅಥವಾ ಹಿತಾಸಕ್ತಿಯನ್ನು ಹಾಗೆ ಅಂತ್ಯಗೊಳಿಸುವುದು ಅಗತ್ಯವಾಗಿದೆ ಎಂಬ ಬಗ್ಗೆ ನಿರ್ಣಯಕವಾಗಿರತಕ್ಕುದು.

**16. ಭೂಮಿಯನ್ನು ಗುರುತು ಮಾಡುವಂತೆ ಮತ್ತು ಅಳೆಯುವಂತೆ ಅಗತ್ಯಪಡಿಸುವುದು.–** ಹೆದ್ದಾರಿ ಪ್ರಾಧಿಕಾರ ಅಥವಾ ಹೆದ್ದಾರಿ ಪ್ರಾಧಿಕಾರದಿಂದ ಅಧಿಕೃತವಾದ ಯಾವನೇ ಅಧಿಕಾರಿ ಅಥವಾ ನೌಕರನು ಆ ತರುವಾಯ ಆ ಭೂಮಿಯನ್ನು ಗುರುತು ಮಾಡುವಂತೆ ಮಾಡತಕ್ಕುದು. ಅದು ಅದನ್ನು ಅಳತೆ ಮಾಡಿಸುವಂತೆಯೂ ಮತ್ತು ಅದರ ಯಾವುದೇ ನಕ್ಷೆಯನ್ನು ತಯಾರಿಸಿರದಿದ್ದರೆ, ಅದರ ನಕ್ಷೆಯನ್ನು ತಯಾರಿಸುವಂತೆಯೂ ಮಾಡತಕ್ಕುದು.

**17 ಆರ್ಜನೆಗಾಗಿನ ಅಂಥ ಅಗತ್ಯತೆಗಳ ಬಗ್ಗೆ ಸಾರ್ವಜನಿಕ ನೋಟೀಸು ಮತ್ತು ಇತರ ನೋಟೀಸುಗಳು.–** (1) ಹೆದ್ದಾರಿ ಪ್ರಾಧಿಕಾರವು ಆಗ ಅಂಥ ಭೂಮಿಯ ಮೇಲೆ ಅಥವಾ ಅದಕ್ಕೆ ಸಮಿಪದಲ್ಲಿ ಅನುಕೂಲಕರವಾದ ಸ್ಥಳಗಳಲ್ಲಿ, ರಾಜ್ಯಸರ್ಕಾರವು ಆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಅಥವಾ ಸಂದರ್ಭಾನುಸಾರ ಆ ಭೂಮಿಯಲ್ಲಿನ ಯಾವುದೇ ಹಕ್ಕು ಅಥವಾ ಹಿತಾಸಕ್ತಿಯನ್ನು ಅಂತ್ಯಗೊಳಿಸಲು ಉದ್ದೇಶಿಸಿದೆ ಎಂದು ಮತ್ತು ಅಂಥ ಭೂಮಿಯಲ್ಲಿನ ಎಲ್ಲಾ ಹಿತಾಸಕ್ತಿಯ ಅಥವಾ ಅಂತ್ಯಗೊಳಿಸಲಿರುವ ಭೂಮಿಯಲ್ಲಿನ ಯಾವುದೇ ಹಕ್ಕು ಅಥವಾ ಹಿತಾಸಕ್ತಿಯ ಬಗ್ಗೆ ನಷ್ಟಪರಿಹಾರದ ಕ್ಲೇಮುಗಳನ್ನು ಹೆದ್ದಾರಿ ಪ್ರಾಧಿಕಾರವು ಹೆಸರಿಸಬಹುದಾದಂಥ ಅಧಿಕಾರಿ ಸಲ್ಲಿಸಬಹುದು ಎಂದು ತಿಳಿಸುವ ಸಾರ್ವಜನಿಕ ನೋಟೀಸನ್ನು ಕೊಡುವಂತೆ ಮಾಡತಕ್ಕುದು.

(2) ಅಂಥ ನೋಟೀಸು, ಹಾಗೆ ಬೇಕಾಗಿರುವ ಭೂಮಿಯ ಅಥವಾ ಅಂತ್ಯಗೊಳಿಸಲಿರುವ ಭೂಮಿಯಲ್ಲಿನ ಹಕ್ಕು, ಅಥವಾ ಹಿತಾಸಕ್ತಿಯ ವಿವರಗಳನ್ನು ನಿರೂಪಿಸತಕ್ಕುದು ಮತ್ತು ಅದು ಆ ಭೂಮಿಯಲ್ಲಿ ಅಥವಾ ಅಂತ್ಯಗೊಳಿಸಲಿರುವ ಆ ಹಕ್ಕು ಅಥವಾ ಹಿತಾಸಕ್ತಿಯಲ್ಲಿ ಹಿತಾಸಕ್ತರಾದ ಎಲ್ಲಾ ವ್ಯಕ್ತಿಗಳನ್ನು ಅದರಲ್ಲಿ ನಮೂದಿಸಿದ ಕಾಲದಲ್ಲಿ ಅಂಥ ಕಾಲವು (ಆ ನೋಟೀಸು ಪ್ರಕಟವಾದ ದಿನಾಂಕದ ತರುವಾಯ ಹದಿನೈದು ದಿವಸಗಳಿಗಿಂತ ಮುಂಚಿನದಾಗಿರದೆ) ಹೆಸರಿಸಬಹುದಾದಂಥ ಅಧಿಕಾರಿಯ ಮುಂದೆ ಖುದ್ದಾಗಿ ಅಥವಾ ಏಜೆಂಟನ ಮೂಲಕ ಹಾಜರಾಗಲು ಮತ್ತು ಸಂದರ್ಭಾನುಸಾರ ಆ ಭೂಮಿಯಲ್ಲಿನ ಅವರ ಕ್ರಮಾನುಗತ ಹಕ್ಕು ಅಥವಾ ಹಿತಾಸಕ್ತಿ ಅಥವಾ ಅಂತ್ಯಗೊಳಿಸಲಿರುವ ಹಕ್ಕು ಅಥವಾ ಹಿತಾಸಕ್ತಿಯ ಸ್ವರೂಪವನ್ನು ಮತ್ತು ಅಂಥ ಹಕ್ಕು ಅಥವಾ ಹಿತಾಸಕ್ತಿ ಅಥವಾ ಅವೆರಡರ ಬಗೆಗಿನ ನಷ್ಟ ಪರಿಹಾರದ ಮೊಬಲಗು ಮತ್ತು ಅದರ ಬಗ್ಗೆ ಅವರ ಕ್ಲೇಮುಗಳ ವಿವರಗಳನ್ನು ಮತ್ತು 16ನೇ ಪ್ರಕರಣದ ಮೇರೆಗೆ ಮಾಡಿದ ಅಳತೆಗಳಿಗೆ ಅವರ ಆಕ್ಷೇಪಣೆಗಳು ಯಾವುದಾದರೂ ಇದ್ದರೆ ಅವುಗಳನ್ನು ತಿಳಿಸಲು ಅಗತ್ಯಪಡಿಸತಕ್ಕುದು. ಹೆದ್ದಾರಿ ಪ್ರಾಧಿಕಾರವು, ಯಾವುದೇ ಸಂದರ್ಭದಲ್ಲಿ ಅಂಥ ವಿವರಪತ್ರಗಳನ್ನು ಬರಹದಲ್ಲಿ ಮಾಡುವಂತೆ ಮತ್ತು ಪಕ್ಷಕಾರನು ಅಥವಾ ಅವನ ಏಜೆಂಟನು ಅವುಗಳಿಗೆ ರುಜು ಮಾಡುವಂತೆ ಅಗತ್ಯಪಡಿಸಬಹುದು.

(3) ಹೆದ್ದಾರಿ ಪ್ರಾಧಿಕಾರವು, ಅಂಥ ಭೂಮಿಯ ಅಧಿಭೋಗದಾರನಿಗೆ ಮತ್ತು ಆ ಭೂಮಿಯು, ಇರುವ ಜಿಲ್ಲೆಯೊಳಗೆ ವಾಸವಾಗಿರುವ ಅಥವಾ ಅವರ ಪರವಾಗಿ ನೋಟೀಸಿನ ಜಾರಿಯನ್ನು ಸ್ವೀಕರಿಸಲು ಅಧಿಕೃತರಾದ ಏಜೆಂಟರನ್ನು ಹೊಂದಿರುವ, ಅದರಲ್ಲಿ ಹಿತಾಸಕ್ತಿ ಉಳ್ಳವರೆಂದು ಅಥವಾ ಹಾಗೆ ಹಿತಾಸಕ್ತಿಯುಳ್ಳ ವ್ಯಕ್ತಿಗಳಿಗಾಗಿ ಕಾರ್ಯ ನಿರ್ವಹಿಸಲು ಹಕ್ಕುಳ್ಳವರೆಂದು ತಿಳಿದು ಬಂದ ಅಥವಾ ನಂಬಲಾದಂಥ ಎಲ್ಲಾ ವ್ಯಕ್ತಿಗಳಿಗೆ ಸಹ ಆ ಬಗ್ಗೆ ನೋಟೀಸನ್ನು ಜಾರಿಮಾಡತಕ್ಕುದು.

(4) ಹಾಗೆ ಹಿತಾಸಕ್ತಿಯುಳ್ಳ ಯಾವನೇ ವ್ಯಕ್ತಿಯು ಬೇರೆ ಕಡೆ ವಾಸವಾಗಿರುವ ಸಂದರ್ಭದಲ್ಲಿ, 71ನೇ ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ನೋಟೀಸನ್ನು ಜಾರಿ ಮಾಡತಕ್ಕುದು.

**18. ಹಿತಾಸಕ್ತಿಯನ್ನು ಹೊಂದಿರುವ ಇತರ ವ್ಯಕ್ತಿಗಳ ಬಗ್ಗೆ ಹೇಳಿಕೆಗಳನ್ನು ಕೊಡುವಂತೆ ವ್ಯಕ್ತಿಗಳನ್ನು ಅಗತ್ಯಪಡಿಸುವುದು.–** (1) ಹೆದ್ದಾರಿ ಪ್ರಾಧಿಕಾರವು ಅಥವಾ ಅದು ಅಧಿಕೃತಗೊಳಿಸಿದ ಅಧಿಕಾರಿಯು, ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ, ಆ ಭೂಮಿಯಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಅಥವಾ ಸಂದರ್ಭಾನುಸಾರ ಅಂತ್ಯಗೊಳಿಸಲಿರುವ ಭೂಮಿಯಲ್ಲಿನ ಯಾವುದೇ ಹಕ್ಕು ಅಥವಾ ಹಿತಾಸಕ್ತಿಯಲ್ಲಿ ಸಹ ಮಾಲೀಕನಾಗಿ, ಉಪ ಮಾಲೀಕ, ಅಡಮಾನದಾರ, ಗೇಣಿದಾರನಾಗಿ ಅಥವಾ ಅನ್ಯಥಾ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ, ಪ್ರತಿಯೊಬ್ಬ ಇತರ ವ್ಯಕ್ತಿಯ ಹೆಸರು ಮತ್ತು ಅಂಥ ಹಿತಾಸಕ್ತಿಯ ಸ್ವರೂಪ, ಮತ್ತು ಅಂಥ ವಿವರಪತ್ರದ ದಿನಾಂಕಕ್ಕೆ ನಿಕಟಪೂರ್ವದ ಮೂರು ವರ್ಷಗಳಿಗೆ ಸಂಬಂಧಿಸಿದಂತೆ ಆ ಬಗ್ಗೆ ಸ್ವೀಕರಿಸಿದ ಅಥವಾ ಸ್ವೀಕರಿಸಬಹುದಾದ ಗೇಣಿಗಳು ಮತ್ತು ಲಾಭಗಳು, ಯಾವುವಾದರೂ ಇದ್ದರೆ, ಅವುಗಳನ್ನು ಒಳಗೊಂಡ ವಿವರಪತ್ರವನ್ನು, ಕಡ್ಡಾಯ ಕೋರಿಕೆಯ ದಿನಾಂಕದ ತರುವಾಯ ಹದಿನೈದು ದಿವಸಗಳಿಗಿಂತ ಮುಂಚಿತವಲ್ಲದ ಕಾಲದಲ್ಲಿ ಅದಕ್ಕೆ ಅಥವಾ

ಅವನಿಗೆ ಸಲ್ಲಿಸುವಂತೆ ಅಥವಾ ತಲುಪಿಸುವಂತೆ ಯಾವನೇ ಅಂಥ ವ್ಯಕ್ತಿಯನ್ನು ಸಹ ಅಗತ್ಯಪಡಿಸಬಹುದು.

(2) ಈ ಪ್ರಕರಣದ ಮೇರೆಗೆ ಅಥವಾ 17ನೇ ಪ್ರಕರಣದ ಮೇರೆಗೆ ವಿವರಪತ್ರವನ್ನು ಸಲ್ಲಿಸಲು ಅಥವಾ ತಲುಪಿಸಲು ಅಗತ್ಯಪಡಿಸಲಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ಭಾರತ ದಂಡ ಸಂಹಿತೆಯ 175 ಮತ್ತು 176ನೇ ಪ್ರಕರಣಗಳ ಅರ್ಥ ವ್ಯಾಪ್ತಿಯೊಳಗೆ ಹಾಗೆ ಮಾಡಲು ಕಾನೂನು ಸಮ್ಮತವಾಗಿ ಬದ್ಧನಾಗಿರುವುದಾಗಿ ಭಾವಿಸತಕ್ಕುದು.

**19. ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು.–** 15ನೇ ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಪ್ರಕಟಿಸಿದ ತರುವಾಯ ಯಾವುದೇ ಕಾಲದಲ್ಲಿ, ರಾಜ್ಯ ಸರ್ಕಾರವು, ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಭೂಮಿಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳತಕ್ಕುದು ಅಥವಾ ಸಂದರ್ಭಾನುಸಾರ ಅದರಲ್ಲಿ ನಿರ್ದಿಷ್ಟಪಡಿಸಿದ ಹಕ್ಕು ಅಥವಾ ಹಿತಾಸಕ್ತಿಯನ್ನು ಅಂತ್ಯಗೊಳಿಸತಕ್ಕುದೆಂದು ನಿರ್ದೇಶಿಸಬಹುದು. ಅಂಥ ದಿನಾಂಕದಿಂದ ಸದರಿ ಭೂಮಿಯು, ಎಲ್ಲಾ ಪೂರ್ವಾಧಿಗಳಿಂದ ಮುಕ್ತವಾಗಿ, ರಾಜ್ಯ ಸರ್ಕಾರದಲ್ಲಿ ನಿರುಪಾಧಿಕವಾಗಿ ನಿಹಿತವಾಗತಕ್ಕುದು ಅಥವಾ ಸಂದರ್ಭಾನುಸಾರ ಅದರಲ್ಲಿನ ಅಂಥ ಹಕ್ಕು ಅಥವಾ ಹಿತಾಸಕ್ತಿಯು ಅಂತ್ಯಗೊಳ್ಳತಕ್ಕುದು.

## [1][ಅಧ್ಯಾಯ III–ಎ

## ಒಪ್ಪಂದ ಮಾಡಿಕೊಳ್ಳಲು ಅಧಿಕಾರ ಮತ್ತು ಕಿಡಿಗೇಡಿ ಕೃತ್ಯಕ್ಕೆ ದಂಡನೆ

**19ಎ. ಹೆದ್ದಾರಿಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಒಪ್ಪಂದ ಮಾಡಿಕೊಳ್ಳಲು ರಾಜ್ಯ ಸರ್ಕಾರದ ಅಧಿಕಾರ.–** (1) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮದಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು, ಇಡೀ ಹೆದ್ದಾರಿಯನ್ನು ಅಥವಾ ಅದರ ಯಾವುದೇ ಭಾಗವನ್ನು ನಿರ್ಮಿಸುವ, ಅಭಿವೃದ್ಧಿಪಡಿಸುವ ಮತ್ತು ಸುಸ್ಥಿತಿಯಲ್ಲಿಟ್ಟುಕೊಂಡು ಬರುವ ಸಂಬಂಧದಲ್ಲಿ ಯಾರೇ ವ್ಯಕ್ತಿಯೊಂದಿಗೆ ಒಪ್ಪಂದ ಮಾಡಿಕೊಳ್ಳಬಹುದು.

(2) ಅಂಥ ನಿರ್ಮಾಣ, ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಸುಗಮ ಮಾಡಲು ಅಥವಾ ಸುನಿಶ್ಚಿತಗೊಳಿಸಲು ಅಂಥ ಒಪ್ಪಂದವು, ನಿಯಮಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು, ಅಂಥ ಒಪ್ಪಂದದ ಅವಧಿಯಲ್ಲಿ ಗುತ್ತಿಗೆಯ ಮೂಲಕ ಅಥವಾ ಅನ್ಯಥಾ, ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ, ರಾಜ್ಯ ಸರ್ಕಾರಕ್ಕೆ ಸೇರಿದ ಅಥವಾ ರಾಜ್ಯ ಸರ್ಕಾರವು ಸ್ವಾಧೀನಪಡಿಸಿಕೊಳ್ಳಲಿರುವ ಯಾವುದೇ ಭೂಮಿಯನ್ನು ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮದ ಮೇರೆಗೆ ವರ್ಗಾವಣೆ ಮಾಡಲು ಉಪಬಂಧ ಕಲ್ಪಿಸಬಹುದು.

(3) 48ಎ ಪ್ರಕರಣದಲ್ಲಿ ಏನೇ ಇದ್ದರೂ, (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ವ್ಯಕ್ತಿಯು, ಅವನು ಸಲ್ಲಿಸಿದ ಸೇವೆ ಅಥವಾ ಸೌಲಭ್ಯಗಳಿಗಾಗಿ, ಭೂಮಿಯ ಸ್ವಾಧೀನ ಮತ್ತು ಹೆದ್ದಾರಿಯ ನಿರ್ಮಾಣ, ಅಭಿವೃದ್ಧಿ ಮತ್ತು ನಿರ್ವಹಣೆಗೆ ತಗುಲಿದ ವೆಚ್ಚವನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸಿ ನಿರ್ದಿಷ್ಟಪಡಿಸ ಬಹುದಾದಂಥ ದರ ಅಥವಾ ದರಗಳಲ್ಲಿ ಶುಲ್ಕವನ್ನು ಸಂಗ್ರಹಿಸಲು ಮತ್ತು ಅದನ್ನು ಇಟ್ಟುಕೊಳ್ಳಲು ಅವನು ಹಕ್ಕು ಹೊಂದಿರುತ್ತಾನೆ.

(4) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ವ್ಯಕ್ತಿಯು, ಅಂಥ ಒಪ್ಪಂದದ ವಸ್ತು ವಿಷಯವಾದ ಹೆದ್ದಾರಿಯ ಯುಕ್ತ ನಿರ್ವಹಣೆಗಾಗಿ, ಮೋಟಾರು ವಾಹನಗಳ ಅಧಿನಿಯಮ, 1988

(1988ರ ಕೇಂದ್ರ ಅಧಿನಿಯಮ 59)ರ VIIIನೇ ಅಧ್ಯಾಯದಲ್ಲಿ ಒಳಗೊಂಡಿರುವ ಉಪಬಂಧಗಳಿಗೆ ಅನುಸಾರವಾಗಿ ಆ ಹೆದ್ದಾರಿಯಲ್ಲಿ ಸಂಚಾರವನ್ನು ವಿನಿಯಮಿಸಲು ಮತ್ತು ನಿಯಂತ್ರಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

**19ಬಿ. ಹೆದ್ದಾರಿಗೆ ಹಾನಿಮಾಡುವ ಕಿಡಿಗೇಡಿ ಕೃತ್ಯಕ್ಕೆ ದಂಡನೆ.–** 19ಎ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಹೆದ್ದಾರಿಯನ್ನು, ಪ್ರಯಾಣದ ಅಥವಾ ಸ್ವತ್ತು ಸಾಗಣೆಯ ವಾಹನಗಳು ಹಾದುಹೋಗಲಾಗದಂತೆ ಅಥವಾ ಕಡಿಮೆ ಸುರಕ್ಷಿತವಾಗಿರುವಂತೆ ಮಾಡುವ ಅಥವಾ ಅದಕ್ಕೆ ಹಾಗೆ ಅಗುವಂತೆ ಮಾಡುವ ಸಂಭವವಿದೆಯೆಂದು ತನಗೆ ತಿಳಿದಿರುವ ಯಾವುದೇ ಕಿಡಿಗೇಡಿ ಕೃತ್ಯವನ್ನು ಎಸಗುವ ಯಾರನ್ನೇ ಆಗಲಿ ಒಂದು ವರ್ಷದವರೆಗೆ ವಿಸ್ತರಿಸಬಹುದಾದಂಥ ಅವಧಿಗೆ, ಎರಡರಲ್ಲಿ ಒಂದು ರೀತಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿಸತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಕ್ಕಾಗಿ, 'ಕಿಡಿಗೇಡಿ ಕೃತ್ಯ' ಎಂಬ ಪದವು, ಯಾವುದೇ ಹೆದ್ದಾರಿಯ ಮೇಲೆ ನ್ಯಾಯಸಮ್ಮತ ಬೇಡಿಕೆಯನ್ನು ಈಡೇರಿಸುವಂತೆ ಒತ್ತಾಯಪಡಿಸುವ ಯಾರೇ ವ್ಯಕ್ತಿಯು ಅಥವಾ ವ್ಯಕ್ತಿಗಳ ಗುಂಪು ನಡೆಸುವ ಯಾವುದೇ ಶಾಂತಿಯುತ ಪ್ರದರ್ಶನ ಅಥವಾ ಚಳುವಳಿಯನ್ನು ಒಳಗೊಳ್ಳತಕ್ಕದ್ದಲ್ಲ.][1]

1. 1998ರ ಅಧಿನಿಯಮ ಸಂಖ್ಯೆ 35ರ ಮೂಲಕ 23.12.1998ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

## ಅಧ್ಯಾಯ - IV

## ಹೆದ್ದಾರಿಯ ಅನಧಿಕೃತ ಅಧಿಭೋಗ ಮತ್ತು ಅದರ ಮೇಲಿನ ಒತ್ತುವರಿಯನ್ನು ತಡೆಗಟ್ಟುವುದು ಮತ್ತು ಒತ್ತುವರಿಯನ್ನು ತೆಗೆದುಹಾಕುವುದು

**20. ಹೆದ್ದಾರಿಯ ಭಾಗವಾಗಿರುವ ಭೂಮಿಗಳನ್ನು ಸರ್ಕಾರಿ ಸ್ವತ್ತೆಂದು ಭಾವಿಸತಕ್ಕದು.–** ಈಗಾಗಲೇ ರಾಜ್ಯಸರ್ಕಾರದಲ್ಲಿ ನಿಹಿತವಾಗಿರದಂಥ ಹೆದ್ದಾರಿಯ ಭಾಗವಾದ ಎಲ್ಲಾ ಭೂಮಿಗಳನ್ನು, ಈ ಅಧ್ಯಾಯದ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರದ ಸ್ವತ್ತೆಂಬುದಾಗಿ ಭಾವಿಸತಕ್ಕುದು.

**21. ಹೆದ್ದಾರಿಯ ಅನಧಿಕೃತ ಅಧಿಭೋಗವನ್ನು ತಡೆಗಟ್ಟುವುದು.–** (1) ಯಾವನೇ ವ್ಯಕ್ತಿಯು, ಹೆದ್ದಾರಿ ಪ್ರಾಧಿಕಾರ ಅಥವಾ ಈ ಬಗ್ಗೆ ಹೆದ್ದಾರಿ ಪ್ರಾಧಿಕಾರವು ಅಧಿಕೃತಗೊಳಿಸಿದ ಅಧಿಕಾರಿಯ ಬರಹದಲ್ಲಿನ ಪೂರ್ವಾನುಮತಿಯನ್ನು ಪಡೆಯದೆ ಹೆದ್ದಾರಿ ಗಡಿಯೊಳಗಿನ ಯಾವುದೇ ಹೆದ್ದಾರಿಯನ್ನು ಆಕ್ರಮಿಸತಕ್ಕುದಲ್ಲ ಅಥವಾ ಅದರ ಮೇಲೆ ಒತ್ತುವರಿಯನ್ನು ಮಾಡತಕ್ಕುದಲ್ಲ.

(2) ಹೆದ್ದಾರಿ ಪ್ರಾಧಿಕಾರವು ಅಥವಾ ಈ ಬಗ್ಗೆ ಹೆದ್ದಾರಿ ಪ್ರಾಧಿಕಾರವು ಅಧಿಕೃತಗೊಳಿಸಿದ ಅಧಿಕಾರಿಯು, ಸಂಚಾರದ ಸುರಕ್ಷೆ ಮತ್ತು ಅನುಕೂಲತೆಗೆ ಯುಕ್ತ ಗಮನವನ್ನು ಕೊಟ್ಟು ಮತ್ತು ರಾಜ್ಯ ಸರ್ಕಾರವು ವಿಧಿಸಬಹುದಾದಂಥ ಷರತ್ತುಗಳು ಮತ್ತು ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು ಮತ್ತು ಅಂಥ ನಿಯಮಗಳ ಮೇರೆಗೆ ನಿಯಮಿಸಬಹುದಾದಂಥ ಬಾಡಿಗೆ ಅಥವಾ ಇತರ ಖರ್ಚುಗಳನ್ನು ಸಂದಾಯ ಮಾಡಿದ ಮೇಲೆ ಯಾವನೇ ವ್ಯಕ್ತಿಯನ್ನು,-

(i) ಅವನ ಒಡೆತನದಲ್ಲಿರುವ ಯಾವುದೇ ಕಟ್ಟಡದ ಎದುರಿಗಿರುವ ಯಾವುದೇ ಹೆದ್ದಾರಿಯ ಮೇಲೆ ತಾತ್ಕಾಲಿಕ ಒತ್ತುವರಿಯನ್ನು ಮಾಡಿಕೊಳ್ಳಲು ಅಥವಾ ಆ ಹೆದ್ದಾರಿಯ ಮೇಲೆ ಚಾಚಿಕೊಳ್ಳುವ ತಾತ್ಕಾಲಿಕ ಕಟ್ಟಡವನ್ನು ನಿರ್ಮಿಸಲು; ಅಥವಾ

(ii) ಯಾವುದೇ ಹೆದ್ದಾರಿಯ ಮೇಲೆ ತಾತ್ಕಾಲಿಕ ಗುಡಾರ ಅಥವಾ ಟೆಂಟು, ಪೆಂಡಾಲು ಅಥವಾ ಇತರ ಅಂಥದೇ ನಿರ್ಮಾಣ ಅಥವಾ ತಾತ್ಕಾಲಿಕ ಮಳಿಗೆ ಅಥವಾ ಸಾರುವೆಯನ್ನು ಕಟ್ಟಲು; ಅಥವಾ

(iii) ಯಾವುದೇ ಹೆದ್ದಾರಿಯಲ್ಲಿ ಕಟ್ಟಡ ಸಾಮಗ್ರಿಗಳು, ಮಾರಾಟಕ್ಕಾಗಿನ ಸರಕುಗಳು ಅಥವಾ ಇತರೆ ವಸ್ತುಗಳನ್ನು ಶೇಖರಿಸಿಡಲು ಅಥವಾ ಶೇಖರಿಸಿ ಇಡುವಂತೆ ಮಾಡಲು; ಅಥವಾ

(iv) ಲಗತ್ತಾಗಿರುವ ಕಟ್ಟಡಗಳಿಗೆ ಯಾವುದೇ ದುರಸ್ತಿಗಳು ಅಥವಾ ಮೇಲ್ಪಾಟುಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ತಾತ್ಕಾಲಿಕ ಅಗೆತವನ್ನು ಮಾಡಲು

- ಅನುಮತಿಸಬಹುದು:

ಪರಂತು, ಅಂಥ ಅನುಮತಿಯನ್ನು, ಹೆದ್ದಾರಿ ಪ್ರಾಧಿಕಾರ ಅಥವಾ ಅಧಿಕೃತಗೊಳಿಸಿದ ಅಧಿಕಾರಿಯು ವ್ಯಕ್ತವಾಗಿ ನವೀಕರಿಸದ ಹೊರತು ಒಂದು ವರ್ಷ ಅವಧಿಯನ್ನು ಮೀರಿ ಸಿಂಧುವಾಗಿದೆ ಎಂದು ಭಾವಿಸತಕ್ಕುದಲ್ಲ.

(3) ಹಾಗೆ ಕೊಟ್ಟ ಅನುಮತಿಯು ಆ ಹೆದ್ದಾರಿಯನ್ನು ಆ ವ್ಯಕ್ತಿಯು ಯಾವ ದಿನಾಂಕದವರೆಗೆ ಸ್ವಾಧೀನದಲ್ಲಿಟ್ಟುಕೊಂಡಿರಲು ಅವನನ್ನು ಅಧಿಕೃತಗೊಳಿಸಲಾಗಿದೆಯೋ ಆ ದಿನಾಂಕ, ಅಧಿಭೋಗವನ್ನು ಅಧಿಕೃತಗೊಳಿಸಲಾಗಿರುವ ಅವಧಿಗಳು, ಮತ್ತು ಸ್ವಾಧೀನದಲ್ಲಿಟ್ಟುಕೊಂಡಿರಲು ಅನುಮತಿಸಲಾಗಿರುವ ಹೆದ್ದಾರಿಯ ಖಚಿತ ಭಾಗವನ್ನು ಸ್ಪಷ್ಟವಾಗಿ ನಿರ್ದಿಷ್ಟಪಡಿಸತಕ್ಕುದು ಮತ್ತು ಅವಶ್ಯವಾದರೆ ಹೆದ್ದಾರಿಯ ಆ ಭಾಗದ ನಕ್ಷೆ ಅಥವಾ ರೂಪುರೇಖೆಯು ಸಹ ಅದರೊಂದಿಗೆ ಇರತಕ್ಕುದು.

(4) ಯಾವ ವ್ಯಕ್ತಿಗೆ ಅಂಥ ಅನುಮತಿಯನ್ನು ಕೊಡಲಾಗಿದೆಯೋ ಆ ವ್ಯಕ್ತಿಯು ಹೆದ್ದಾರಿ ಪ್ರಾಧಿಕಾರ ಅಥವಾ ಆ ಬಗ್ಗೆ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಶಕ್ತಗೊಳಿಸಲಾದ ಯಾವನೇ ಅಧಿಕಾರಿಯು ಹಾಗೆ ಮಾಡಬೇಕೆಂದು ಕೋರಿದಾಗ ಪರಿಶೀಲನೆಗಾಗಿ ಅನುಮತಿ ಪತ್ರವನ್ನು ಹಾಜರುಪಡಿಸತಕ್ಕುದು ಮತ್ತು ಅನುಮತಿ ಪತ್ರದಲ್ಲಿ ನಿರ್ದಿಷ್ಟಪಡಿಸಲಾದ ಅವಧಿಯು ಮುಕ್ತಾಯವಾದ ತರುವಾಯ, ಸ್ವಾಧೀನದಲ್ಲಿದ್ದ ಆ ಭೂಮಿಯನ್ನು ಸ್ವಾಧೀನತೆಗೆ ಮುಂಚೆ ಇದ್ದಂಥದೇ ಸ್ಥಿತಿಗೆ ತಂದ ತರುವಾಯ ಬಿಡುಗಡೆ ಮಾಡತಕ್ಕುದು.

(5) ಅನುಮತಿಯನ್ನು ಕೊಡುವ ಹೆದ್ದಾರಿ ಪ್ರಾಧಿಕಾರ ಅಥವಾ ಅಧಿಕಾರಿಯು, ಕೊಟ್ಟಿರುವ ಅಂಥ ಅನುಮತಿಗಳ ಬಗ್ಗೆ ಸಂಪೂರ್ಣ ದಾಖಲೆಯನ್ನು ಇಡತಕ್ಕುದು, ಮತ್ತು ಅಧಿಭೋಗವನ್ನು ಅಧಿಕೃತಗೊಳಿಸಲಾಗಿರುವ ಅವಧಿಯು ಮುಕ್ತಾಯವಾದ ಮೇಲೆ ಪ್ರತಿಯೊಂದು ಸಂದರ್ಭದಲ್ಲಿ ಆ ಭೂಮಿಯನ್ನು ವಾಸ್ತವವಾಗಿ ತೆರವು ಮಾಡಲಾಗಿದೆ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳುವ ಸಲುವಾಗಿ ತನಿಖೆಯನ್ನು ನಡೆಸುವಂತೆ ಸಹ ಮಾಡತಕ್ಕುದು.

**22. ಅನುಮತಿ ಪತ್ರವನ್ನು ರದ್ದುಗೊಳಿಸುವ ಅಧಿಕಾರ.–** (1) ಹೆದ್ದಾರಿ ಪ್ರಾಧಿಕಾರವು, 21ನೇ ಪ್ರಕರಣದ ಮೇರೆಗೆ ಕೊಟ್ಟ ಯಾವುದೇ ಅನುಮತಿಯನ್ನು,-

(ಎ) ಯಾವುದೇ ಬಾಡಿಗೆ ಅಥವಾ ಚಾರ್ಜನ್ನು ಕ್ರಮಬದ್ಧವಾಗಿ ಸಂದಾಯ ಮಾಡಿರದಿದ್ದರೆ;

(ಬಿ) ಯಾವ ಉದ್ದೇಶಕ್ಕಾಗಿ ಅನುಮತಿಯನ್ನು ಕೊಡಲಾಗಿತ್ತೋ ಆ ಉದ್ದೇಶವು ಅಸ್ತಿತ್ವದಲ್ಲಿರುವುದು ಕೊನೆಗೊಂಡಿದ್ದರೆ;

(ಸಿ) ಅಂಥ ಅನುಮತಿಯ ಧಾರಕನು, ಅಂಥ ಅನುಮತಿಯ ಯಾವುದೇ ನಿಬಂಧನೆಗಳು ಅಥವಾ ಷರತ್ತುಗಳ ಯಾವುದೇ ಉಲ್ಲಂಘನೆಯನ್ನು ಮಾಡಿರುವ ಸಂದರ್ಭದಲ್ಲಿ;

(ಡಿ) ಅಂಥ ಒತ್ತುವರಿಯನ್ನು ಯಾವ ಭೂಮಿಯ ಮೇಲೆ ಮಾಡಲಾಗಿದೆಯೋ ಆ ಭೂಮಿಯು ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಾಗಿದ್ದರೆ ಅಥವಾ ಅಂಥ ಒತ್ತುವರಿಯು ಸಂಚಾರಕ್ಕೆ ಅಡಚಣೆ ಅಥವಾ ಅಪಾಯವನ್ನುಂಟು ಮಾಡುತ್ತಿದ್ದರೆ

- ರದ್ದುಗೊಳಿಸಬಹುದು.

(2) (1)ನೇ ಉಪಪ್ರಕರಣದ (ಬಿ) ಅಥವಾ (ಡಿ) ಖಂಡದ ಮೇರೆಗೆ ಆ ಅನುಮತಿಯನ್ನು ರದ್ದುಗೊಳಿಸಲಾಗಿರುವಲ್ಲಿ ಮುಂಗಡವಾಗಿ ಸಂದಾಯ ಮಾಡಿದ ಯಾವುದೇ ಬಾಡಿಗೆ ಅಥವಾ ಚಾರ್ಜನ್ನು ಅಂಥ ಅನುಮತಿಯ ಧಾರಕನಿಗೆ, ರಾಜ್ಯ ಸರ್ಕಾರಕ್ಕೆ ಯಾವುದೇ ಮೊಬಲಗು ಬಾಕಿ ಇದ್ದರೆ ಅದನ್ನು ಕಳೆದು, ಉಳಿದ ಮೊಬಲಗನ್ನು ಮರುಪಾವತಿ ಮಾಡತಕ್ಕುದು.

**23. ಒತ್ತುವರಿಯನ್ನು ತಡೆಗಟ್ಟುವುದು.–** (1) ಹೆದ್ದಾರಿ ಗಡಿಗಳ ತನಿಖೆಯ ಪರಿಣಾಮವಾಗಿ ಅಥವಾ ಅನ್ಯಥಾ, ಹೆದ್ದಾರಿಯ ಮೇಲೆ ಒತ್ತುವರಿಯನ್ನು ಮಾಡಲಾಗಿದೆ ಎಂದು ತಿಳಿದುಬಂದಾಗ, ಹೆದ್ದಾರಿ ಪ್ರಾಧಿಕಾರ ಅಥವಾ 21ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಧಿಕೃತಗೊಳಿಸಲಾಗಿರುವ ಅಧಿಕಾರಿಯು, ಒತ್ತುವರಿಗೆ ಹೊಣೆಗಾರನಾದ ವ್ಯಕ್ತಿಗೆ ಅಥವಾ ಅವನ ಪ್ರತಿನಿಧಿಗೆ, ಅಂಥ ಒತ್ತುವರಿಯನ್ನು ತೆಗೆದುಹಾಕಬೇಕೆಂದು ಮತ್ತು ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಒತ್ತುವರಿಗೆ ಮುಂಚೆ ಆ ಭೂಮಿಯು ಇದ್ದ ಮೂಲ ಸ್ಥಿತಿಗೆ ಅದನ್ನು ಪುನಃ ತರಬೇಕೆಂದು ಅಗತ್ಯಪಡಿಸಿ ನೋಟೀಸನ್ನು ಜಾರಿಗೊಳಿಸತಕ್ಕುದು.

(2) ಆ ನೋಟೀಸು, ಒತ್ತುವರಿ ಮಾಡಲಾಗಿರುವ ಭೂಮಿ ಮತ್ತು ಅಂಥ ಒತ್ತುವರಿಯನ್ನು ತೆಗೆದುಹಾಕತಕ್ಕ ಕಾಲಮಿತಿಯನ್ನು ನಿರ್ದಿಷ್ಟಪಡಿಸತಕ್ಕುದು ಮತ್ತು ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ಅದನ್ನು ಪಾಲಿಸಲು ತಪ್ಪಿದಲ್ಲಿ ಆ ವ್ಯಕ್ತಿಯು ಪ್ರಾಸಿಕ್ಯೂಷನ್ನು ಮತ್ತು ಕ್ಷಿಪ್ರ ಹೊರಹಾಕುವಿಕೆಗೆ ಸಹ ಹೊಣೆಗಾರನಾಗತಕ್ಕುದು ಎಂದೂ ಸಹ ತಿಳಿಸತಕ್ಕುದು.

(3) ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಕಾಲಮಿತಿಯೊಳಗಾಗಿ ಆ ಒತ್ತುವರಿಯನ್ನು ತೆಗೆದುಹಾಕದಿದ್ದರೆ ಮತ್ತು ಅನನುಪಾಲನೆಯ ಬಗ್ಗೆ ಯಾವುದೇ ಸಮಂಜಸ ಕಾರಣವನ್ನು ತೋರಿಸದಿದ್ದರೆ, ಹೆದ್ದಾರಿ ಪ್ರಾಧಿಕಾರ ಅಥವಾ (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಅಧಿಕೃತನಾದ ಅಧಿಕಾರಿಯು, ಅವನು ಆ ಒತ್ತುವರಿಯನ್ನು ಮಾಡಿರುವುದಕ್ಕಾಗಿ ಅಥವಾ ಮಾಡಿಸಿರುವುದಕ್ಕಾಗಿ ಮತ್ತು ನಿರ್ದಿಷ್ಟಪಡಿಸಿದ ಕಾಲದೊಳಗೆ ಅದನ್ನು ತೆಗೆದುಹಾಕಲು ಅವನು ತಪ್ಪಿದ್ದಕ್ಕಾಗಿ ಅಂಥ ವ್ಯಕ್ತಿಯನ್ನು ಪ್ರಾಸಿಕ್ಯೂಟ್ ಮಾಡಬಹುದು.

(4) ವಸ್ತುಗಳನ್ನು ಮಾರಾಟಕ್ಕಾಗಿ ತೆರೆದಿಡುವ, ಮಾರಾಟಕ್ಕಾಗಿ ತಾತ್ಕಾಲಿಕ ಬೂತುಗಳನ್ನು ತೆರೆಯುವ ಉದ್ದೇಶಕ್ಕಾಗಿ ಅಥವಾ ಅಂಥದೇ ಇತರ ಲಘು ಸ್ವರೂಪದ ಉದ್ದೇಶಕ್ಕಾಗಿ ಒತ್ತುವರಿಯನ್ನು ಮಾಡಿರುವಲ್ಲಿ, ಹೆದ್ದಾರಿ ಪ್ರಾಧಿಕಾರ ಅಥವಾ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅಧಿಕೃತ ಅಧಿಕಾರಿಯು ಅವಶ್ಯವಿದ್ದರೆ ಪೋಲೀಸರ ಸಹಾಯದಿಂದ (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ನೋಟೀಸನ್ನು ಜಾರಿಮಾಡದೆಯೇ ಅಂಥ ಒತ್ತುವರಿಯನ್ನು ಕ್ಷಿಪ್ರವಾಗಿ ತೆಗೆದುಹಾಕಬಹುದು ಅಥವಾ ಒತ್ತುವರಿಯನ್ನು ತೆಗೆದುಹಾಕುವುದರ ಬದಲಾಗಿ ಒತ್ತುವರಿಗೆ ಜವಾಬ್ದಾರನಾಗಿರುವ ವ್ಯಕ್ತಿಗೆ, ಒತ್ತುವರಿ ಮಾಡಿದ ಪ್ರದೇಶದ ಸಲುವಾಗಿ ಬಾಡಿಗೆ ಸಂದಾಯ ಮಾಡಿದ ಮೇಲೆ ಹೆದ್ದಾರಿ ಪ್ರಾಧಿಕಾರದ ಹೆಸರಿನಲ್ಲಿ ಒಂದು ಬಾಡಿಗೆ ಪತ್ರವನ್ನು ಬರೆದುಕೊಡುವ ಆಯ್ಕೆಯ ಅವಕಾಶವನ್ನು ಕೊಡಬಹುದು.

(5) ಒತ್ತುವರಿಯು ತಾತ್ಕಾಲಿಕ ಸ್ವರೂಪದ್ದಾಗಿರುವಲ್ಲಿ ಮತ್ತು ಸುಲಭವಾಗಿ ತೆಗೆದುಹಾಕಬಹುದಾಗಿರುವಲ್ಲಿ, ಆದರೆ (4)ನೇ ಉಪಪ್ರಕರಣದ ಅರ್ಥವ್ಯಾಪ್ತಿಯೊಳಗೆ ಅದು ಲಘುವೆಂದು ವಿವರಿಸಲು ಬಾರದಂಥದ್ದಾಗಿರುವಲ್ಲಿ, ಹೆದ್ದಾರಿ ಪ್ರಾಧಿಕಾರ, ಅಥವಾ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ

ಅಧಿಕೃತ ಅಧಿಕಾರಿಯು, (3)ನೇ ಉಪಪ್ರಕರಣದ ಮೇರೆಗೆ ಒತ್ತುವರಿಗಾಗಿ ಜವಾಬ್ದಾರನಾಗಿರುವ ವ್ಯಕ್ತಿಯನ್ನು ಪ್ರಾಸಿಕ್ಯೂಟ್ ಮಾಡುವುದರ ಜೊತೆಗೆ ಅಥವಾ ಅದಕ್ಕೆ ಬದಲಾಗಿ ಅವಶ್ಯವಿದ್ದರೆ ಪೋಲೀಸರ ಸಹಾಯದಿಂದ, ಒತ್ತುವರಿಯನ್ನು ಕ್ಷಿಪ್ರವಾಗಿ ತೆಗೆದುಹಾಕುವಂತೆ ಮಾಡಬಹುದು.

(6) ಒತ್ತುವರಿಯು, ಹೆದ್ದಾರಿಯ ಮೇಲೆ ಸಂಚಾರದ ಸುರಕ್ಷತೆಯ ಹಿತದೃಷ್ಟಿಯಿಂದ ಅಥವಾ ಹೆದ್ದಾರಿಯ ಭಾಗವಾಗಿರುವ ಯಾವುದೇ ರಚನೆಯ ಸುರಕ್ಷತೆಯ ಹಿತದೃಷ್ಟಿಯಿಂದ ಕೂಡಲೇ ತೆಗೆದುಹಾಕಬೇಕೆಂದು ಪರ್ಯಾಲೋಚಿಸಲಾಗಿರುವಂಥ ಸ್ವರೂಪದ ಒತ್ತುವರಿಯಾಗಿರುವಲ್ಲಿ ಹೆದ್ದಾರಿ ಪ್ರಾಧಿಕಾರ ಅಥವಾ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅಧಿಕಾರಿಯು, (3)ನೇ ಉಪ-ಪ್ರಕರಣದ ಮೇರೆಗೆ ಆ ವ್ಯಕ್ತಿಯನ್ನು ಪ್ರಾಸಿಕ್ಯೂಟ್ ಮಾಡುವುದರ ಜೊತೆಗೆ,-

(i) ಹೆದ್ದಾರಿಯ ಮೇಲಿನ ಸಂಚಾರಕ್ಕೆ ಆದಷ್ಟು ಅಪಾಯ ಆಗದ ಹಾಗೆ ಯುಕ್ತ ವೆಚ್ಚದಲ್ಲಿ ಸುಲಭ ಸಾಧ್ಯವಾಗಬಹುದಾದಂಥ ಸಂರಕ್ಷಕ ಕಾರ್ಯವನ್ನು ನಿರ್ವಹಿಸಬಹುದು; ಅಥವಾ

(ii) ಅವಶ್ಯವಿದ್ದರೆ, ಪೋಲೀಸರ ಸಹಾಯದಿಂದ ಒತ್ತುವರಿಯನ್ನು ತೆಗೆದುಹಾಕಬಹುದು.

**24. 23ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಜಾರಿಗೊಳಿಸಿದ ನೋಟೀಸಿನ ವಿರುದ್ಧ ಅಪೀಲು.-** ಯಾವ ವ್ಯಕ್ತಿಗೆ 23ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಒತ್ತುವರಿಯನ್ನು ತೆಗೆದುಹಾಕಲು ನೋಟೀಸನ್ನು ಜಾರಿ ಗೊಳಿಸಲಾಗಿದೆಯೋ ಆ ವ್ಯಕ್ತಿಯು, ಯಾವ ಭೂಮಿಯ ಬಗ್ಗೆ ಒತ್ತುವರಿಯನ್ನು ಆರೋಪಿಸಲಾಗಿದೆಯೋ ಆ ಭೂಮಿಯು ಅವನ ಸ್ವತ್ತೆಂದು ಅಥವಾ ಪ್ರತಿಕೂಲ ಸ್ವಾಧೀನತೆಯ ಕಾರಣದಿಂದಾಗಿ ಅಥವಾ ಅನ್ಯಥಾ ಅದರ ಮೇಲೆ ಹಕ್ಕನ್ನು ಆರ್ಜಿಸಿರುವನೆಂದು ಸಾಧಿಸುವಲ್ಲಿ ಅವನು, ಒತ್ತುವರಿಯನ್ನು ತೆಗೆದುಹಾಕುವುದಕ್ಕಾಗಿ ನೋಟೀಸಿನಲ್ಲಿ ನಿಯಮಿಸಿದ ಕಾಲಪರಿಮಿತಿಯೊಳಗಾಗಿ, ಹೆದ್ದಾರಿ ಪ್ರಾಧಿಕಾರ ಅಥವಾ ಸಂದರ್ಭಾನುಸಾರ 21ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಧಿಕೃತ ಅಧಿಕಾರಿಗೆ ತಿಳಿಸಿ, ಡೆಪ್ಯೂಟಿ ಕಮೀಷನರ್‌ಗೆ ಅಪೀಲು ಮಾಡಿಕೊಳ್ಳತಕ್ಕದು. ಡೆಪ್ಯುಟಿ ಕಮೀಷನರನು, ಸೂಕ್ತ ವಿಚಾರಣೆಯ ತರುವಾಯ ಬರಹದಲ್ಲಿ ಅವನ ತೀರ್ಮಾನವನ್ನು ದಾಖಲು ಮಾಡತಕ್ಕದು ಮತ್ತು ಅದನ್ನು ಅಪೀಲುದಾರನಿಗೆ ಮತ್ತು ಹೆದ್ದಾರಿ ಪ್ರಾಧಿಕಾರ ಅಥವಾ ಅಂಥ ಅಧಿಕಾರಿಗೆ ತಿಳಿಸತಕ್ಕದು. ಹೆದ್ದಾರಿ ಪ್ರಾಧಿಕಾರ ಅಥವಾ ಅಂಥ ಅಧಿಕಾರಿಯು, ಅಲ್ಲಿಯವರೆಗೆ ಆ ವಿಷಯದಲ್ಲಿ ಮುಂದಿನ ಕ್ರಮ ಕೈಕೊಳ್ಳುವುದನ್ನು ಬಿಟ್ಟುಬಿಡತಕ್ಕದು.

**25. ಒತ್ತುವರಿಯನ್ನು ತೆಗೆದುಹಾಕುವುದರ ವೆಚ್ಚದ ವಸೂಲಿ.-** (1) ಹೆದ್ದಾರಿ ಪ್ರಾಧಿಕಾರ ಅಥವಾ 21ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಧಿಕೃತ ಅಧಿಕಾರಿಯು, 23ನೇ ಪ್ರಕರಣದ ಉಪಬಂಧದ ಮೇರೆಗೆ, ಯಾವುದೇ ಒತ್ತುವರಿಯನ್ನು ತೆಗೆದುಹಾಕಿರುವಾಗ ಅಥವಾ ಯಾವುದೇ ಒತ್ತುವರಿಗೆ ಸಂಬಂಧಿಸಿದಂತೆ ಯಾವುವೇ ಸಂರಕ್ಷಕ ಕಾರ್ಯಗಳನ್ನು ನಿರ್ವಹಿಸಿರು ವಾಗಲೆಲ್ಲ ಅದಕ್ಕೆ ತಗುಲಿದ ವೆಚ್ಚವನ್ನು ಒತ್ತುವರಿಗೆ ಜವಾಬ್ದಾರನಾದ ವ್ಯಕ್ತಿಯಿಂದ ಇದರಲ್ಲಿ ಇನ್ನುಮುಂದೆ ಉಪಬಂಧಿಸಿರುವ ರೀತಿಯಲ್ಲಿ ವಸೂಲು ಮಾಡತಕ್ಕದು.

(2) ವಹಿಸಿದ ವೆಚ್ಚವನ್ನು ತೋರಿಸುವ ಬಿಲ್ಲನ್ನು, ಹೆದ್ದಾರಿ ಪ್ರಾಧಿಕಾರ ಅಥವಾ (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಅಧಿಕೃತ ಅಧಿಕಾರಿಯು, ಒತ್ತುವರಿಗೆ ಜವಾಬ್ದಾರನಾದ ವ್ಯಕ್ತಿಗೆ ಅಥವಾ ಅವನ ಪ್ರತಿನಿಧಿಗೆ, ಆ ಬಿಲ್ಲಿನಲ್ಲಿ ನಮೂದಿಸಿದ ಪ್ರಾಧಿಕಾರಕ್ಕೆ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಆ ಮೊಬಲಗನ್ನು ಸಂದಾಯ ಮಾಡಬೇಕೆಂಬ ನಿರ್ದೇಶನದೊಂದಿಗೆ ಜಾರಿ ಮಾಡತಕ್ಕದು.

(3) ಆ ಬಿಲ್ಲಿನೊಂದಿಗೆ, ಆ ಬಿಲ್ಲಿನಲ್ಲಿ ಸೂಚಿಸಿದ ವೆಚ್ಚದ ಮೊಬಲಗು ವಹಿಸಿದ ವೆಚ್ಚವನ್ನು ತೋರಿಸುತ್ತದೆ ಎಂಬುದಾಗಿ ಹೆದ್ದಾರಿ ಪ್ರಾಧಿಕಾರ ಅಥವಾ (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಅಧಿಕೃತ ಅಧಿಕಾರಿಯು ಕೊಟ್ಟಿರುವ ಪ್ರಮಾಣಪತ್ರವು ಇರತಕ್ಕದು ಮತ್ತು ಅಂಥ ಪ್ರಮಾಣಪತ್ರವು ಆ ವೆಚ್ಚವನ್ನು ವಾಸ್ತವವಾಗಿ ವಹಿಸಲಾಗಿರುವ ಬಗ್ಗೆ ನಿರ್ಣಾಯಕ ರುಜುವಾತಾಗಿರತಕ್ಕದು.

(4) ಯಾವುದೇ ಒತ್ತುವರಿಯನ್ನು ತೆಗೆದುಹಾಕುವುದರ ಪರಿಣಾಮವಾಗಿ ಪಡೆದುಕೊಂಡ ಸಾಮಗ್ರಿ, ಯಾವುದಾದರೂ ಇದ್ದರೆ, ಅದನ್ನು ಒತ್ತುವರಿಗೆ ಜವಾಬ್ದಾರನಾದ ವ್ಯಕ್ತಿಗೆ, ಅವನು ಬಿಲ್ಲಿನ ಮೊಬಲಗನ್ನು ಸಂದಾಯ ಮಾಡಿದ ಮೇಲೆ ಕೊಡತಕ್ಕುದು, ಆದರೆ, ನಿರ್ದಿಷ್ಟಪಡಿಸಿದ ಅವಧಿಯೊಳಗೆ ಆ ಮೊಬಲಗನ್ನು ಅವನು ಸಂದಾಯ ಮಾಡಲು ತಪ್ಪಿದ ಸಂದರ್ಭದಲ್ಲಿ, ಆ ಸಾಮಗ್ರಿಗಳನ್ನು ಹರಾಜು ಹಾಕಬಹುದು ಮತ್ತು ಬಿಲ್ಲಿನ ಮೊಬಲಗನ್ನು ಹುಟ್ಟುವಳಿಯಿಂದ ಕಳೆದ ತರುವಾಯ ಶಿಲ್ಕು ಯಾವುದಾದರೂ ಇದ್ದರೆ ಅದನ್ನು ಅಂಥ ವ್ಯಕ್ತಿಗೆ ಸಂದಾಯ ಮಾಡತಕ್ಕುದು.

(5) ಹರಾಜು ಮಾರಾಟದ ಹುಟ್ಟುವಳಿಯು, ಬಿಲ್ಲಿನಲ್ಲಿ ತೋರಿಸಿರುವ ಒಟ್ಟು ಮೊಬಲಗಿಗೆ ಸರಿದೂಗದಿದ್ದರೆ, ಆ ಸಾಮಗ್ರಿಗಳ ಮಾರಾಟದ ಮೂಲಕ ವಸೂಲಾದ ಮೊಬಲಗಿಗಿಂತ ಹೆಚ್ಚುವರಿಯಾದ ಮೊಬಲಗನ್ನು, ವಿಲೆಮಾಡಲು ಸಾಮಗ್ರಿಗಳಿಲ್ಲದಿದ್ದರೆ ಮತ್ತು ಒತ್ತುವರಿಗೆ ಜವಾಬ್ದಾರನಾದ ವ್ಯಕ್ತಿಯು ಬಿಲ್ಲಿನಲ್ಲಿ ತೋರಿಸಿದ ಮೊಬಲಗನ್ನು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸಂದಾಯ ಮಾಡಿರದಿದ್ದರೆ, ಬಿಲ್ಲಿನ ಇಡೀ ಮೊಬಲಗನ್ನು ಅಂಥ ವ್ಯಕ್ತಿಯಿಂದ ಭೂಕಂದಾಯದ ಬಾಕಿಯಂತೆ ವಸೂಲು ಮಾಡತಕ್ಕುದು.

## ಅಧ್ಯಾಯ - V

## ನಷ್ಟ ಪರಿಹಾರ

**26. ಕೆಲವು ಸಂದರ್ಭಗಳಲ್ಲಿ ಕನಿಷ್ಟ ಹಾನಿಯನ್ನು ಉಂಟುಮಾಡುವುದು ಮತ್ತು ನಷ್ಟ ಪರಿಹಾರ.–** ಹೆದ್ದಾರಿ ಪ್ರಾಧಿಕಾರ, ಅಥವಾ 6ನೇ ಪ್ರಕರಣದ ಮೇರೆಗೆ ನೇಮಕಗೊಂಡ ಯಾವನೇ ಅಧಿಕಾರಿ ಅಥವಾ ನೌಕರನು ಅಥವಾ ರಾಜ್ಯ ಸರ್ಕಾರವು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಧಿಕೃತಗೊಳಿಸಿದ ಯಾವನೇ ಇತರ ವ್ಯಕ್ತಿಯು, ಈ ಕೆಳಕಂಡ ಉಪಬಂಧಗಳ ಮೇರೆಗಿನ ಅಧಿಕಾರಗಳನ್ನು ಚಲಾಯಿಸಿ, ಸಾಧ್ಯವಾದಷ್ಟು ಕಡಿಮೆ ಹಾನಿಯನ್ನು ಮಾಡತಕ್ಕುದು ಮತ್ತು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ನಿಯಮಿಸಲಾದ ರೀತಿಯಲ್ಲಿ ನಷ್ಟ ಪರಿಹಾರವನ್ನು ಅಂಥ ಅಧಿಕಾರಗಳ ಚಲಾವಣೆಯ ಪರಿಣಾಮವಾಗಿ ಹಾನಿಗೊಳಗಾದ ಯಾವನೇ ವ್ಯಕ್ತಿಗೆ ಸಂದಾಯ ಮಾಡತಕ್ಕುದು, ಎಂದರೆ:-

(ಎ) 9ನೇ ಪ್ರಕರಣದ ಮೇರೆಗೆ ನಿರ್ಬಂಧವನ್ನು ವಿಧಿಸುವುದು;

(ಬಿ) 12ನೇ ಪ್ರಕರಣದ ಮೇರೆಗೆ ಯಾವುದೇ ಕಟ್ಟಡ ಅಥವಾ ಅದರ ಭಾಗವನ್ನು ಹಿಂದಕ್ಕೆ ನೆಲೆಗೊಳಿಸುವುದು;

(ಸಿ) 13ನೇ ಪ್ರಕರಣದ ಮೇರೆಗೆ ಹೆದ್ದಾರಿಗೆ ಯಾವುದೇ ಪ್ರವೇಶಾವಕಾಶದ ಹಕ್ಕನ್ನು ನಿಯಮಿಸುವುದು ಅಥವಾ ಪಲ್ಲಟಿಸುವುದು;

(ಡಿ) 14ನೇ ಪ್ರಕರಣದ ಮೇರೆಗೆ ಯಾವುದೇ ಭೂಮಿಯ ಮೇಲೆ ಪ್ರವೇಶ, ಅದರ ಮೋಜಣಿ, ಅಳತೆ ಮತ್ತು ಯಾವುದೇ ಕೆಲಸವನ್ನು ಮಾಡುವುದು;

(ಇ) 15ನೇ ಪ್ರಕರಣದ ಮೇರೆಗೆ, ಯಾವುದೇ ಭೂಮಿಯ ಆರ್ಜನೆ ಅಥವಾ ಅದರಲ್ಲಿನ ಯಾವುದೇ ಹಕ್ಕು ಅಥವಾ ಹಿತಾಸಕ್ತಿಯನ್ನು ಅಂತ್ಯಗೊಳಿಸುವುದು;

(ಎಫ್) 52ನೇ ಪ್ರಕರಣದ ಮೇರೆಗೆ ಯಾವುದೇ ಹೆದ್ದಾರಿ ಅಥವಾ ಅದರ ಭಾಗವನ್ನು ಮುಚ್ಚುವುದು.

**27. ಒಪ್ಪಂದದ ಮೂಲಕ ನಷ್ಟ ಪರಿಹಾರದ ಮೊಬಲಗಿನ ನಿರ್ಧರಣೆ.–** 26ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ನಷ್ಟ ಪರಿಹಾರದ ಮೊಬಲಗನ್ನು ಯಾವ ವ್ಯಕ್ತಿಗಳಿಗೆ ಅದನ್ನು ಸಂದಾಯ ಮಾಡತಕ್ಕದೆಂಬುದನ್ನು ಮತ್ತು ಅದರಲ್ಲಿ ಹಿತಾಸಕ್ತರಾದ ವ್ಯಕ್ತಿಗಳಿಗೆ ಅಂಥ ಮೊಬಲಗಿನ ಹಂಚಿಕೆಯನ್ನು ಹೆದ್ದಾರಿ ಪ್ರಾಧಿಕಾರ ಅಥವಾ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾವನೇ ಅಧಿಕಾರಿ ಮತ್ತು ಅದರಲ್ಲಿ ಹಿತಾಸಕ್ತಿಯನ್ನು ಕ್ಲೇಮುಮಾಡುವ ವ್ಯಕ್ತಿ ಅಥವಾ ವ್ಯಕ್ತಿಗಳ ನಡುವಣ ಒಪ್ಪಂದದ ಮೂಲಕ ನಿರ್ಧರಿಸತಕ್ಕುದು.

**28. ಒಪ್ಪಂದವಾಗದಿದ್ದಲ್ಲಿ ನಷ್ಟ ಪರಿಹಾರದ ಮೊಬಲಗಿನ ನಿರ್ಧರಣೆ.–** (1) 27ನೇ ಪ್ರಕರಣದ ಮೇರೆಗೆ ಯಾವುದೇ ಒಪ್ಪಂದವಿಲ್ಲದಿರುವಲ್ಲಿ, ಹೆದ್ದಾರಿ ಪ್ರಾಧಿಕಾರ ಅಥವಾ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿಯು, ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ವಿಚಾರಣೆಯನ್ನು ನಡೆಸಿದ ತರುವಾಯ–

(ಎ) ಆರ್ಜಿಸಿದ ಭೂಮಿ, ಯಾವುದಾದರೂ ಇದ್ದರೆ ಅದರ ಸರಿಯಾದ ಪ್ರದೇಶ;

(ಬಿ) 26ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ನಷ್ಟ ಪರಿಹಾರದ ಮೊಬಲಗು;

(ಸಿ) ಅದಕ್ಕೆ ಹಕ್ಕುಳ್ಳವರೆಂದು ತಿಳಿದುಬಂದ ಅಥವಾ ನಂಬಲಾದ ಎಲ್ಲಾ ವ್ಯಕ್ತಿಗಳಿಗೆ ಅಂಥ ನಷ್ಟ ಪರಿಹಾರದ ಮೊಬಲಗಿನ ಹಂಚಿಕೆ ಮಾಡುವುದಿದ್ದರೆ ಆ ಹಂಚಿಕೆ

– ಇವುಗಳನ್ನು ನಿರ್ಧರಿಸಿ ಐತೀರ್ಪನ್ನು ಕೊಡತಕ್ಕುದು.

(2) ನಷ್ಟಪರಿಹಾರದ ಮೊಬಲಗನ್ನು ನಿರ್ಧರಿಸುವಲ್ಲಿ ಈ ಅಧಿನಿಯಮದ ಅನುಸೂಚಿಯ ಮೂಲಕ ತಿದ್ದುಪಡಿಯಾದಂತೆ, ಭೂ ಆರ್ಜನೆ ಅಧಿನಿಯಮ, 1894 ಇದರ 23 ಮತ್ತು 24ನೇ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ವಿಷಯವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳತಕ್ಕುದು.

**29. ಇತರ ಯಾವುದೇ ಕಾನೂನಿನ ಮೇರೆಗೆ ಅಂಥದೇ ನಿರ್ಬಂಧಗಳು ಜಾರಿಯಲ್ಲಿರುವಲ್ಲಿ ಅಥವಾ ನಷ್ಟಪರಿಹಾರವನ್ನು ಈಗಾಗಲೇ ಸ್ವೀಕರಿಸಿರುವಲ್ಲಿ ಯಾವುದೇ ನಷ್ಟಪರಿಹಾರವಿರತಕ್ಕುದಲ್ಲ.–**

(i) ಈ ಅಧಿನಿಯಮದ ಮೂಲಕ ನಿರ್ಬಂಧಗಳನ್ನು ವಿಧಿಸಿದ ದಿನಾಂಕದಿಂದ ಜಾರಿಯಲ್ಲಿದ್ದ ಇತರ ಕಾನೂನಿನ ಮೇರೆಗೆ ಜಾರಿಯಲ್ಲಿರುವ ಅಂಥವೇ ನಿರ್ಬಂಧಗಳಿಗೆ ಭೂಮಿಯು ಗಣನೀಯವಾಗಿ ಒಳಪಟ್ಟಿದ್ದರೆ ಮತ್ತು ಅಷ್ಟರಮಟ್ಟಿಗೆ;

(ii) ಈ ಅಧಿನಿಯಮದ ಮೇರೆಗೆ ವಿಧಿಸಿದ ಅಂಥದೇ ನಿರ್ಬಂಧಗಳಿಗೆ ಅಥವಾ ಇತರ ಯಾವುದೇ ಕಾನೂನಿನ ಮೇರೆಗೆ ಜಾರಿಯಲ್ಲಿರುವ ಗಣನೀಯವಾಗಿ ಅಂಥವೇ ನಿರ್ಬಂಧಗಳಿಗೆ ಸಂಬಂಧಿಸಿದಂತೆ ಕ್ಲೇಮುದಾರನಿಗಾಗಲಿ ಅಥವಾ ಕ್ಲೇಮುದಾರನ ಹಿತಾಸಕ್ತಿಯಲ್ಲಿನ ಯಾವನೇ ಪೂರ್ವಾಧಿಕಾರಿಗೆ ಆ ಭೂಮಿಗೆ ಸಂಬಂಧಿಸಿದಂತೆ ಈಗಾಗಲೇ ನಷ್ಟ ಪರಿಹಾರವನ್ನು ಸಂದಾಯ ಮಾಡಿದರೆ

– ಯಾವುದೇ ನಷ್ಟಪರಿಹಾರವನ್ನು ಕೊಡತಕ್ಕುದಲ್ಲ.

**30. ನಿರ್ಮಿಸಲು ಅನುಮತಿ ನಿರಾಕರಿಸಿದಾಗ ಕೊಡಬೇಕಾದ ನಷ್ಟ ಪರಿಹಾರವು, ಹಾಗೆ ನಿರಾಕರಿಸಿದ್ದಾಗ ಇದ್ದ ಮತ್ತು ಮಂಜೂರು ಮಾಡಿದ್ದರೆ ಕೊಡಬಹುದಾಗಿದ್ದ ಮೌಲ್ಯ ಇವೆರಡರ ನಡುವಣ ವ್ಯತ್ಯಾಸವನ್ನು ಮೀರತಕ್ಕುದಲ.–** 9ನೇ ಅಥವಾ 10ನೇ ಪ್ರಕರಣದ ಮೇರೆಗೆ ಯಾವುದೇ ಕಟ್ಟಡವನ್ನು ನಿರ್ಮಿಸಲು ಅನುಮತಿಯನ್ನು ನಿರಾಕರಿಸಿದಾಗ, ನಷ್ಟಪರಿಹಾರದ ಮೊಬಲಗು, ಈ ಅಧಿನಿಯಮದ ಅನುಸೂಚಿಯ ಮೂಲಕ ತಿದ್ದುಪಡಿಯಾದಂತೆ ಭೂ ಆರ್ಜನಾ ಅಧಿನಿಯಮ, 1894ರ 23ನೇ ಅಥವಾ

24ನೇ ಪ್ರಕರಣದ ಮೂಲಕ ನಿರ್ಧರಿಸಿದ ಭೂಮಿಯ ಮೌಲ್ಯ ಮತ್ತು ಅನುಮತಿಯನ್ನು ಕೊಡಲಾಗಿದ್ದರೆ ಅದು ಹೊಂದಿರಬಹುದಾದಂಥ ಮೌಲ್ಯ ಇವೆರಡರ ನಡುವಣ ವ್ಯತ್ಯಾಸವನ್ನು ಮೀರತಕ್ಕುದಲ್ಲ. ಅಂಥ ಮೌಲ್ಯವನ್ನು ನಿರ್ಧರಿಸುವಲ್ಲಿ ಭೂಮಿಯ ಮೇಲೆ ಕಟ್ಟಡವನ್ನು ನಿರ್ಮಿಸಲು ಅಥವಾ ಅದನ್ನು ಅನ್ಯಥಾ ಉಪಯೋಗಿಸಲು, ಧಾರಣ ಮಾಡಲು ಅಥವಾ ವಿಲೆ ಮಾಡಲು ನಷ್ಟ ಪರಿಹಾರವನ್ನು ಕ್ಲೇಮು ಮಾಡುವ ವ್ಯಕ್ತಿಯ ಹಕ್ಕಿಗೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಭೂಮಿಯು ಯಾವ ನಿರ್ಬಂಧಗಳಿಗೆ ಒಳಪಟ್ಟಿರುವುದೋ ಅವುಗಳನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳತಕ್ಕುದು.

**31. ಪ್ರವೇಶ ಮಾರ್ಗದ ಪಲ್ಲಟಕ್ಕಾಗಿನ ನಷ್ಟಪರಿಹಾರವು ಪರ್ಯಾಯ ಪ್ರವೇಶ ಮಾರ್ಗದ ವೆಚ್ಚವನ್ನು ಮೀರತಕ್ಕುದಲ್ಲ.–** ಹೆದ್ದಾರಿಯ ಪ್ರವೇಶಾವಕಾಶದ ಹಕ್ಕನ್ನು ಅದರ ಪಲ್ಲಟ ಅಥವಾ ಮುಚ್ಚುವಿಕೆಯ ಪರಿಣಾಮವಾಗಿ ನಾಶಗೊಳಿಸಲಾಗಿರುವಲ್ಲಿ ಮತ್ತು ಪರ್ಯಾಯ ಪ್ರವೇಶಾವಕಾಶವನ್ನು ಒದಗಿಸಲಾಗಿರುವಲ್ಲಿ ನಷ್ಟಪರಿಹಾರದ ಮೊಬಲಗು, ಯಾವುದೇ ಸಂದರ್ಭದಲ್ಲಿ ಕ್ಲೇಮುದಾರನ ಸ್ವತ್ತಿನಿಂದ ಅಂಥ ಪರ್ಯಾಯ ಮಾರ್ಗಕ್ಕೆ ಹೊಸ ಪ್ರವೇಶ ಮಾರ್ಗವನ್ನು ರಚಿಸುವುದಕ್ಕೆ ತಗುಲಿದ ವೆಚ್ಚವನ್ನು ಮೀರತಕ್ಕುದಲ್ಲ.

**32. ಬೆಳೆದಿರುವ ಫಸಲುಗಳು, ಮರಗಳು ಇತ್ಯಾದಿಗಳನ್ನು ಕತ್ತರಿಸಿ ಹಾಕುವುದಕ್ಕಾಗಿ ನಷ್ಟಪರಿಹಾರ.–** (1) 14ನೇ ಪ್ರಕರಣದ ಮೇರೆಗೆ ಪ್ರವೇಶ, ಮೋಜಣಿ ಅಥವಾ ಅಳತೆ ಅಥವಾ ಯಾವುದೇ ಕೆಲಸವನ್ನು ಮಾಡುವ ಕಾಲದಲ್ಲಿ ಹಾಗೆ ಪ್ರವೇಶ, ಮೋಜಣಿ ಅಥವಾ ಅಳತೆ ಅಥವಾ ಯಾವುದೇ ಇತರೆ ಕೆಲಸವನ್ನು ಮಾಡುವ ಅಧಿಕಾರಿಯು ಆ ಭೂಮಿಯ ಮೇಲೆ ಬೆಳೆದಿರುವ ಫಸಲುಗಳು, ಮರಗಳನ್ನು ಕತ್ತರಿಸಿಹಾಕುವುದು ಅಥವಾ ಅದರ ಮೇಲಿನ ತಾತ್ಕಾಲಿಕ ಕಟ್ಟಡಗಳು ಯಾವುದಾದರೂ ಇದ್ದರೆ ಅವುಗಳನ್ನು ತೆಗೆದುಹಾಕುವುದು ಇವುಗಳನ್ನು ಒಳಗೊಂಡು ಅಂಥ ಪ್ರವೇಶ, ಮೋಜಣಿ, ಅಳತೆ ಅಥವಾ ಕಾರ್ಯನಿರ್ವಹಣೆಯ ಪರಿಣಾಮವಾಗಿ ಉಂಟಾದ ಎಲ್ಲಾ ಅವಶ್ಯಕ ಹಾನಿಗಾಗಿ ನಷ್ಟಪರಿಹಾರವನ್ನು ಹಕ್ಕುಳ್ಳ ಯಾವನೇ ವ್ಯಕ್ತಿಗೆ ಸಂದಾಯ ಮಾಡತಕ್ಕುದು ಅಥವಾ ಕೊಡಮಾಡತಕ್ಕುದು. ಹಾಗೆ ಸಂದಾಯ ಮಾಡಿದ ಅಥವಾ ಕೊಡಮಾಡಿದ ಮೊಬಲಗಿನ ಪರ್ಯಾಪ್ತತೆಯ ಬಗ್ಗೆ ವಿವಾದವಿದ್ದರೆ, ಸಂಬಂಧಪಟ್ಟ ಅಧಿಕಾರಿಯು ಆ ವಿವಾದವನ್ನು ಹೆದ್ದಾರಿ ಪ್ರಾಧಿಕಾರಕ್ಕೆ ತತ್‌ಕ್ಷಣ ಒಪ್ಪಿಸತಕ್ಕುದು ಮತ್ತು ಸದರಿ ಪ್ರಾಧಿಕಾರವು, ಸಾಧ್ಯವಿದ್ದಷ್ಟು ಕಡಿಮೆ ವಿಳಂಬದೊಂದಿಗೆ, ಆ ವಿವಾದವನ್ನು ತೀರ್ಮಾನಿಸತಕ್ಕುದು ಮತ್ತು ಹಕ್ಕುಳ್ಳ ವ್ಯಕ್ತಿಗೆ ನಷ್ಟಪರಿಹಾರವೆಂದು ನಿರ್ಧರಿಸಲಾದ ಮೊಬಲಗನ್ನು ಸಂದಾಯ ಮಾಡತಕ್ಕುದು. ಹೆದ್ದಾರಿ ಪ್ರಾಧಿಕಾರದ ತೀರ್ಮಾನವು ಅಂತಿಮವಾಗಿರತಕ್ಕುದು.

(2) 19ನೇ ಪ್ರಕರಣದ ಮೇರೆಗೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಕಾಲದಲ್ಲಿ ಆ ಭೂಮಿಯ ಮೇಲೆ ಯಾವುವೇ ಬೆಳೆದ ಫಸಲುಗಳು, ಮರಗಳು ಅಥವಾ ತಾತ್ಕಾಲಿಕ ಕಟ್ಟಡಗಳು ಇದ್ದರೆ, ಹೆದ್ದಾರಿ ಪ್ರಾಧಿಕಾರವು ಅಂಥ ಬೆಳೆದ ಫಸಲುಗಳು, ಮರಗಳು, ಅಥವಾ ತಾತ್ಕಾಲಿಕ ಕಟ್ಟಡಗಳಿಗಾಗಿ ನಷ್ಟಪರಿಹಾರದ ಮೊಬಲಗನ್ನು ಹಕ್ಕುಳ್ಳ ವ್ಯಕ್ತಿಗೆ ಸಂದಾಯ ಮಾಡತಕ್ಕುದು ಅಥವಾ ಕೊಡಮಾಡತಕ್ಕುದು. ಅಂಥ ಮೊಬಲಗಿನ ಪರ್ಯಾಪ್ತತೆಯ ಬಗ್ಗೆ ವಿವಾದವಿದ್ದರೆ, 28ನೇ ಪ್ರಕರಣದ ಮೇರೆಗೆ, ಆ ಭೂಮಿಯ ಬಗ್ಗೆ ನಷ್ಟಪರಿಹಾರ ಮೊಬಲಗನ್ನು ನಿರ್ಧರಿಸುವಲ್ಲಿ ಅಂಥ ಫಸಲುಗಳು, ಮರಗಳು ಅಥವಾ ತಾತ್ಕಾಲಿಕ ಕಟ್ಟಡಗಳ ಮೌಲ್ಯವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳತಕ್ಕುದು.

**33. ಅನಧಿಕೃತ ನಿರ್ಮಿತಿಗಳಿಗಾಗಿ ಯಾವುದೇ ನಷ್ಟಪರಿಹಾರ ಇರತಕ್ಕುದಲ್ಲ.–** ಯಾವನೇ ವ್ಯಕ್ತಿಯು, ಹೆದ್ದಾರಿಯ ಉದ್ದೇಶಕ್ಕಾಗಿ ಆರ್ಜಿಸಲಾಗಿರುವಂಥ ಯಾವುದೇ ಭೂಮಿಯ ಮೇಲೆ ಕಟ್ಟಡವನ್ನು ಅನಧಿಕೃತವಾಗಿ ನಿರ್ಮಿಸಿದರೆ, ಪುನರ್ ನಿರ್ಮಿಸಿದರೆ, ಅದಕ್ಕೆ ಸೇರಿಸಿದರೆ ಅಥವಾ ಅದನ್ನು ಮಾರ್ಪಾಡು ಮಾಡಿದರೆ, ಆಗ ಅಂಥ ನಿರ್ಮಾಣ, ಪುನರ್ ನಿರ್ಮಾಣ, ಸೇರ್ಪಡೆ ಅಥವಾ

ಬದಲಾವಣೆಗಾಗಿ ಭೂಮಿಯ ಮೌಲ್ಯದಲ್ಲಿ ಆದ ಯಾವುದೇ ಹೆಚ್ಚಳವನ್ನು ಭೂಮಿಯ ಮೌಲ್ಯವನ್ನು ಅಂದಾಜು ಮಾಡುವಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕುದಲ್ಲ.

**34. ಒತ್ತುವರಿಯನ್ನು ತೆಗೆದುಹಾಕುವುದಕ್ಕಾಗಿ ಯಾವುದೇ ನಷ್ಟಪರಿಹಾರವಿರತಕ್ಕುದಲ್ಲ.–** ಯಾವುದೇ ಒತ್ತುವರಿಯನ್ನು ತೆಗೆದುಹಾಕುವುದಕ್ಕಾಗಿ ಯಾವುದೇ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕುದಲ್ಲ.

**35. 28ನೇ ಪ್ರಕರಣದ ಮೇರೆಗೆ ಹೆದ್ದಾರಿ ಪ್ರಾಧಿಕಾರ ಅಥವಾ ಅಧಿಕೃತಗೊಳಿಸಿದ ಅಧಿಕಾರಿಯ ಐತೀರ್ಪನ್ನು ಪರಾಮರ್ಶೆಗೆ ಒಪ್ಪಿಸುವುದು.–** (1) 28ನೇ ಪ್ರಕರಣದ ಮೇರೆಗೆ ಹೆದ್ದಾರಿ ಪ್ರಾಧಿಕಾರ ಅಥವಾ ಅಧಿಕೃತಗೊಳಿಸಿದ ಅಧಿಕಾರಿಯ ಐತೀರ್ಪಿನಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಹೆದ್ದಾರಿ ಪ್ರಾಧಿಕಾರ ಅಥವಾ ಅಂಥ ಅಧಿಕಾರಿಗೆ ಬರಹದಲ್ಲಿ ಅರ್ಜಿ ಸಲ್ಲಿಸಿ ಯಾವ ಭೂಮಿಗೆ ಸಂಬಂಧಪಟ್ಟಂತೆ ಆ ಐತೀರ್ಪು ಮಾಡಲಾಗಿದೆಯೋ ಆ ಭೂಮಿಯು ಯಾರ ಅಧಿಕಾರ ವ್ಯಾಪ್ತಿಯ ಪರಿಮಿತಿಗಳೊಳಗಿರುವುದೋ ಆ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯಕ್ಕೆ ಪರಾಮರ್ಶೆಗಾಗಿ ಒಪ್ಪಿಸಲು ಅಗತ್ಯಪಡಿಸಬಹುದು.

(2) ಯಾವುದೇ ಅಂಥ ಅರ್ಜಿಯನ್ನು, ಆ ಐತೀರ್ಪನ್ನು ಮಾಡಿದ ದಿನಾಂಕದಿಂದ ಆರು ವಾರಗಳೊಳಗೆ ಮಾಡಿಕೊಳ್ಳತಕ್ಕುದು ಮತ್ತು ಅದು ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕುದು.

(3) ಭಾರತ ಕಾಲಪರಿಮಿತಿ ಅಧಿನಿಯಮ, 1963ರ 5,12 ಮತ್ತು 14ನೇ ಪ್ರಕರಣಗಳ ಉಪಬಂಧಗಳು, (2)ನೇ ಉಪ ಪ್ರಕರಣದ ಮೇರೆಗೆ ಪರಾಮರ್ಶೆಗಾಗಿ ನಿಗದಿಪಡಿಸಿದ ಕಾಲವನ್ನು ಲೆಕ್ಕಹಾಕುವುದಕ್ಕೆ ಅನ್ವಯವಾಗತಕ್ಕುದು.

(4) ಹೆದ್ದಾರಿ ಪ್ರಾಧಿಕಾರ ಅಥವಾ ಅಧಿಕೃತಗೊಳಿಸಿದ ಅಧಿಕಾರಿಯು ನಿಯಮಿಸ ಬಹುದಾದಂಥ ರೀತಿಯಲ್ಲಿ, ಪರಾಮರ್ಶೆಗಾಗಿ ಒಪ್ಪಿಸತಕ್ಕುದು.

**36. 35 ಮತ್ತು 44ನೇ ಪ್ರಕರಣದ ಮೇರೆಗೆ ಪರಾಮರ್ಶೆಗೆ ಬಂದವುಗಳನ್ನು ತೀರ್ಮಾನಿಸಲು ಶಕ್ತಗೊಳಿಸಿದ ಪ್ರಾಧಿಕಾರಿಗಳ ಪ್ರಕ್ರಿಯೆ ಮತ್ತು ಅಧಿಕಾರಗಳು.–** (1) 35 ಮತ್ತು 44ನೇ ಪ್ರಕರಣಗಳ ಮೇರೆಗೆ ಪರಾಮರ್ಶೆಗೆ ಬಂದವುಗಳನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ 141ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗಿನ ವ್ಯವಹರಣೆಗಳು ಆಗಿರುವುದಾಗಿ ಭಾವಿಸತಕ್ಕುದು ಮತ್ತು ಅವುಗಳ ಅಧಿವಿಚಾರಣೆಯಲ್ಲಿ, ಅಂಥವುಗಳನ್ನು ತೀರ್ಮಾನಿಸಲು ಶಕ್ತಗೊಳಿಸಿದ ಪ್ರಾಧಿಕಾರಿಗಳು ಆ ಸಂಹಿತೆಯ ಮೇರೆಗೆ ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಚಲಾಯಿಸಬಹುದು.

(2) 35 ಮತ್ತು 44ನೇ ಪ್ರಕರಣದ ಮೇರೆಗೆ ಪರಾಮರ್ಶೆಗೆ ಬಂದಿರುವುದರ ವಿಚಾರಣೆಯ ವ್ಯಾಪ್ತಿಯು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ (1)ನೇ ಉಪ ಪ್ರಕರಣದಲ್ಲಿ ಹೇಳಿರುವ ಪ್ರಾಧಿಕಾರಿಗಳಿಗೆ ಉಲ್ಲೇಖಿಸಿದ ವಿಷಯಗಳ ಪರ್ಯಾಲೋಚನೆಗೆ ಸೀಮಿತವಾಗಿರತಕ್ಕುದು.

**37. ಯಾವುದೇ ಒತ್ತುವರಿಯ ಬಿಟ್ಟುಕೊಡುವಿಕೆಯನ್ನು ಮತ್ತು ತೆಗದುಹಾಕುವಿಕೆಯನ್ನು ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟನು ಜಾರಿಗೊಳಿಸತಕ್ಕುದು.–** ಈ ಅಧಿನಿಯಮದ ಮೇರೆಗೆ ಹೆದ್ದಾರಿ ಪ್ರಾಧಿಕಾರ ಅಥವಾ ಯಾವನೇ ಅಧಿಕಾರಿ ಅಥವಾ ನೌಕರನಿಗೆ, ಯಾವುದೇ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ಅಥವಾ ಯಾವುದೇ ಕಾಮಗಾರಿಯನ್ನು ನಿರ್ವಹಿಸುವಲ್ಲಿ ಅಥವಾ ಯಾವುದೇ ಒತ್ತುವರಿಯನ್ನು ತೆಗೆದುಹಾಕುವಲ್ಲಿ ವಿರೋಧ ಅಥವಾ ಅಡಚಣೆಯುಂಟಾದರೆ ಸಂಬಂಧಪಟ್ಟ ಹೆದ್ದಾರಿ ಪ್ರಾಧಿಕಾರ ಅಥವಾ ಅಧಿಕಾರಿ ಅಥವಾ ನೌಕರನು, ಪೊಲೀಸ್ ಕಮೀಷನರ್, ಪೊಲೀಸ್ ಸೂಪರಿಂಟೆಂಡೆಂಟ್ ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ಶಕ್ತಗೊಳಿಸಬಹುದಾದಂಥ ಪೊಲೀಸ್ ಅಧಿಕಾರಿಗೆ ಅರ್ಜಿಸಲ್ಲಿಸತಕ್ಕುದು ಮತ್ತು ಪೊಲೀಸ್ ಕಮೀಷನರ್ ಅಥವಾ ಪೊಲೀಸ್

ಸೂಪರಿಂಟೆಂಡೆಂಟ್ ಅಥವಾ ಹಾಗೆ ಶಕ್ತಗೊಳಿಸಿದ ಅಧಿಕಾರಿಯು ಸಂದರ್ಭಾನುಸಾರ ಆ ಬಿಟ್ಟುಕೊಡುವಿಕೆ, ತೆಗೆದುಹಾಕುವಿಕೆ ಅಥವಾ ನಿರ್ವಹಣೆಯನ್ನು ಜಾರಿಗೊಳಿಸತಕ್ಕುದು.

**38. 35 ಮತ್ತು 44ನೇ ಪ್ರಕರಣದ ಮೇರೆಗಿನ ಪ್ರಾಧಿಕಾರಿಗಳ ತೀರ್ಮಾನಗಳನ್ನು ಸಿವಿಲ್ ನ್ಯಾಯಾಲಯದ ಡಿಕ್ರಿಗಳಂತೆ ಜಾರಿಗೊಳಿಸತಕ್ಕುದು.–** 35 ಮತ್ತು 44ನೇ ಪ್ರಕರಣಗಳ ಮೇರೆಗೆ ಪರಾಮರ್ಶೆಗೆ ಬಂದವುಗಳನ್ನು ತೀರ್ಮಾನಿಸಲು ಶಕ್ತಗೊಳಿಸಿದ ಪ್ರಾಧಿಕಾರಿಗಳ ತೀರ್ಮಾನಗಳನ್ನು ಸಿವಿಲ್ ನ್ಯಾಯಾಲಯದ ಡಿಕ್ರಿಯಂತೆ ಜಾರಿಗೊಳಿಸಬಹುದಾಗಿರತಕ್ಕುದು.

**39. ನಿರ್ಣಯಿಸಿದ ನಷ್ಟಪರಿಹಾರದ ಸಂದಾಯ.–** (i) 27ನೇ ಪ್ರಕರಣದ ಮೇರೆಗಿನ ಒಪ್ಪಂದದ ಮೂಲಕ ನಷ್ಟಪರಿಹಾರದ ನಿರ್ಧರಣೆಯು ಆದ ಮೇಲೆ; ಅಥವಾ

(ii) 28ನೇ ಪ್ರಕರಣದ ಮೇರೆಗೆ ಒಂದು ಐತೀರ್ಪನ್ನು ಮಾಡಿದ ಮೇಲೆ; ಅಥವಾ

(iii) ಆ ಪ್ರಕರಣದ ಮೇರೆಗೆ ಆ ಪ್ರಾಧಿಕಾರದ ತೀರ್ಮಾನದ ತರುವಾಯ, ಅಂಥ ಐತೀರ್ಪನ್ನು 35ನೇ ಪ್ರಕರಣದ ಮೇರೆಗೆ ಪರಾಮರ್ಶೆಗೆ ಒಪ್ಪಿಸಿದ್ದರೆ

– ಹೆದ್ದಾರಿ ಪ್ರಾಧಿಕಾರವು ಸಂದರ್ಭಾನುಸಾರ ಒಪ್ಪಂದ, ಅದರ ಐತೀರ್ಪಿನ ಅಥವಾ 35ನೇ ಪ್ರಕರಣದ ಮೇರೆಗೆ ಪರಾಮರ್ಶೆಗೆ ಬಂದದ್ದನ್ನು ತೀರ್ಮಾನಿಸಲು ಶಕ್ತಗೊಳಿಸಿದ ಪ್ರಾಧಿಕಾರದ ತೀರ್ಮಾನಕ್ಕೆ ಅನುಸಾರವಾಗಿ, ಅದಕ್ಕೆ ಅರ್ಹನಾದ ವ್ಯಕ್ತಿಗೆ, ನಿರ್ಣಯಿಸಿದ ನಷ್ಟ ಪರಿಹಾರದ ಸಂದಾಯವನ್ನು ಮಾಡತಕ್ಕುದು. ಭೂ ಸ್ವಾಧೀನ ಅಧಿನಿಯಮ, 1894ರ 31 ರಿಂದ 34ರ (ಎರಡನ್ನು ಒಳಗೊಂಡು) ವರೆಗಿನ ಪ್ರಕರಣಗಳ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅಂಥ ಸಂದಾಯಕ್ಕೆ ಅನ್ವಯವಾಗತಕ್ಕುದು.

**40. ಹೊಂದಾಣಿಕೆಯ ಮೂಲಕ ಸಂದಾಯ.–** ಈ ಅಧಿನಿಯಮದ ಮೇರೆಗೆ ಹೆದ್ದಾರಿ ಪ್ರಾಧಿಕಾರವು ನಷ್ಟಪರಿಹಾರದ ರೂಪದಲ್ಲಿ ಯಾವನೇ ವ್ಯಕ್ತಿಗೆ ಮಾಡಬೇಕಾದ ಎಲ್ಲಾ ಸಂದಾಯಗಳನ್ನು, ಸಾಧ್ಯವಾದಷ್ಟು ಮಟ್ಟಿಗೆ,VIನೇ ಅಧ್ಯಾಯದ ಮೇರೆಗೆ ಅಂಥ ವ್ಯಕ್ತಿಯು ಕೊಡಬೇಕಾದ ಪುರೋಭಿವೃದ್ಧಿ ವೆಚ್ಚಗಳು, ಯಾವುವಾದರೂ ಇದ್ದರೆ, ಅವುಗಳ ಬಗ್ಗೆ ಅಂಥ ವ್ಯಕ್ತಿಯ ಲೆಕ್ಕದಲ್ಲಿ ಹೊಂದಾಣಿಕೆ ಮಾಡುವ ಮೂಲಕ ಮಾಡತಕ್ಕುದು.

## ಅಧ್ಯಾಯ – VI

## ಪುರೋಭಿವೃದ್ಧಿ ವೆಚ್ಚಗಳನ್ನು ವಿಧಿಸುವುದು

**41. ಒಡೆಯರು ಅಥವಾ ಹಿತಾಸಕ್ತಿಯನ್ನು ಹೊಂದಿರುವ ವ್ಯಕ್ತಿಗಳಿಗೆ ನೋಟೀಸು.–** ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅವುಗಳ ಮೇರೆಗೆ ಯಾವ ಕಾಮಗಾರಿಯನ್ನು ಕೈಗೊಳ್ಳಲು ಹೆದ್ದಾರಿ ಪ್ರಾಧಿಕಾರವನ್ನು ಶಕ್ತಗೊಳಿಸಲಾಗಿದೆಯೋ ಆ ಯಾವುದೇ ಕಾಮಗಾರಿಯನ್ನು ಕೈಗೊಂಡಿರುವಲ್ಲಿ, ಈ ಬಗ್ಗೆ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿಯು, ಅಂಥ ಕಾಮಗಾರಿಯ ಮೂಲಕ ಪ್ರಯೋಜನ ಪಡೆದ ಭೂಮಿಗಳ ಒಡೆಯರು ಅಥವಾ ಅವುಗಳಲ್ಲಿ ಹಿತಾಸಕ್ತಿ ಉಳ್ಳವರೆಂದು ತಿಳಿದುಬಂದಿರುವ ಅಥವಾ ನಂಬಲಾಗಿರುವ ವ್ಯಕ್ತಿಗಳಿಗೆ, ಅಂಥ ಭೂಮಿಗಳ ಮೇಲೆ ಪುರೋಭಿವೃದ್ಧಿ ವೆಚ್ಚಗಳನ್ನು ವಿಧಿಸಲು ಮತ್ತು ಅವುಗಳನ್ನು ವಸೂಲು ಮಾಡುವುದಕ್ಕೆ ಅವರ ಆಕ್ಷೇಪಣೆಗಳು ಯಾವುವಾದರೂ ಇದ್ದರೆ, ಅವುಗಳನ್ನು ತಿಳಿಸಲು ಅದರಲ್ಲಿ ನಮೂದು ಮಾಡಿದ ಕಾಲ (ಅಂಥ ಕಾಲವು ನೋಟೀಸಿನ ದಿನಾಂಕದಿಂದ ಮೂವತ್ತು ದಿವಸಗಳಿಗಿಂತ ಮುಂಚಿನದು ಆಗಿಲ್ಲದ್ದು) ಮತ್ತು ಸ್ಥಳದಲ್ಲಿ ಖುದ್ದಾಗಿಯಾಗಲಿ ಅಥವಾ ಏಜೆಂಟನ ಮೂಲಕವೇ ಆಗಲಿ ಅವನ ಮುಂದೆ ಅವರು ಹಾಜರಾಗಬೇಕೆಂದು ಅಗತ್ಯಪಡಿಸಿ ನೋಟೀಸನ್ನು ಕೊಡತಕ್ಕುದು:

ಪರಂತು, ಯಾವುದೇ ಅಂಥ ನೋಟೀಸನ್ನು ಡೆಪ್ಯೂಟಿ ಕಮೀಷನರನು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಅಂಥ ಭೂಮಿಗಳ ಮೌಲ್ಯವು ಅಂಥ ಕಾಮಗಾರಿಯ ನಿರ್ಮಾಣದ ಕಾರಣದಿಂದಾಗಿ ಹೆಚ್ಚಾಗುವ ಸಂಭವವಿದೆ ಎಂದು ಅಥವಾ ಹೆಚ್ಚಾಗಿದೆ ಎಂದು ಘೋಷಿಸಿದ್ದ ಹೊರತು ಕೊಡತಕ್ಕುದಲ್ಲ.

**42. ವಿಚಾರಣೆ ಮತ್ತು ಆದೇಶ.–** 41ನೇ ಪ್ರಕರಣದ ಮೇರೆಗೆ ನಿಗದಿಪಡಿಸಿದ ದಿನಾಂಕ ದಂದು ಅಥವಾ ಆ ವಿಚಾರಣೆಯನ್ನು ಮುಂದೂಡಬಹುದಾದಂಥ ಇತರ ದಿನಾಂಕದಂದು, 41ನೇ ಪ್ರಕರಣದ ಮೇರೆಗೆ ಅಧಿಕೃತಗೊಳಿಸಿದ ಅಧಿಕಾರಿಯು ನಿಯಮಿಸಿದ ರೀತಿಯಲ್ಲಿ ವಿಚಾರಣೆಯನ್ನು ನಡೆಸಿದ ತರುವಾಯ ಮತ್ತು 41ನೇ ಪ್ರಕರಣದ ಮೇರೆಗೆ ನೋಟೀಸಿನ ಮೂಲಕ ಅಗತ್ಯಪಡಿಸಲಾದಂತೆ ವ್ಯಕ್ತಿಗಳು ಹೇಳಿದ ಆಕ್ಷೇಪಣೆಗಳು, ಯಾವುವಾದರೂ ಇದ್ದರೆ ಅವುಗಳನ್ನು ಸುನಾವಣೆ ಮಾಡಿದ ತರುವಾಯ ಆದೇಶವನ್ನು ಮಾಡತಕ್ಕುದು, ಆ ಆದೇಶವು,–

(ಎ) ಕಾಮಗಾರಿಯ ನಿರ್ಮಾಣದ ಮೂಲಕ ಅಂಥ ಪ್ರಯೋಜನವನ್ನು ಪಡೆಯುವ ಭೂಮಿಗಳು;

(ಬಿ) ಪ್ರಸ್ತಾವಿತ ನಿರ್ಮಾಣದಿಂದ ಅಂಥ ಭೂಮಿಗಳ ಮೌಲ್ಯದಲ್ಲಿನ ಹೆಚ್ಚಳ;

(ಸಿ) ಸದರಿ ಪ್ರತಿಯೊಂದು ಭೂಮಿಯ ಮೇಲೆ ವಿಧಿಸಬಹುದಾದ ಪುರೋಭಿವೃದ್ಧಿ ವೆಚ್ಚಗಳ ಮೊಬಲಗು;

(ಡಿ) ಯಾವ ದಿನಾಂಕದಿಂದ ಅಂಥ ಪುರೋಭಿವೃದ್ಧಿ ವೆಚ್ಚಗಳನ್ನು ವಿಧಿಸತಕ್ಕುದೋ ಆ ದಿನಾಂಕ

– ಇವುಗಳನ್ನು ನಿರ್ದಿಷ್ಟಪಡಿಸತಕ್ಕುದು:

ಪರಂತು, ಯಾವುವೇ ಪುರೋಭಿವೃದ್ಧಿ ವೆಚ್ಚಗಳನ್ನು,–

(i) ಕಟ್ಟಡದ ನಿವೇಶನವೆಂದು ಅಭಿವೃದ್ಧಿಪಡಿಸುವುದಕ್ಕಾಗಿ ಸೂಕ್ತವಲ್ಲದೆ ಇರುವ; ಅಥವಾ

(ii) ಎರಡೂ ಕಡೆ ಹೆದ್ದಾರಿಯ ಮಧ್ಯಭಾಗದಿಂದ ಒಂದು ಫರ್ಲಾಂಗಿನ ದೂರದಿಂದಾಚೆ ಇರುವ

– ಯಾವುದೇ ಭೂಮಿಗೆ ಸಂಬಂಧಿಸಿದಂತೆ ವಿಧಿಸತಕ್ಕುದಲ್ಲ.

**43. ಮೌಲ್ಯದಲ್ಲಿನ ಹೆಚ್ಚಳ ಮತ್ತು ಪುರೋಭಿವೃದ್ಧಿ ವೆಚ್ಚಗಳು.–** ಅಂಥ ಕಾಮಗಾರಿಯ ನಿರ್ಮಾಣದ ಕಾರಣದಿಂದಾಗಿ ಮೌಲ್ಯದಲ್ಲಿನ ಹೆಚ್ಚಳವು, ಯಾವ ಮೊಬಲಗಿನಿಂದ ಪ್ರಸ್ತಾವಿತ ಕಾಮಗಾರಿಯು ಪೂರ್ಣಗೊಂಡ ದಿನಾಂಕದಂದು ಆ ಭೂಮಿಯ ಮೌಲ್ಯವು ಹೆಚ್ಚಾಗುವ ಸಂಭವವಿರುವುದೋ ಅಥವಾ ಹೆಚ್ಚಾಗಿದೆಯೋ ಆ ಯಾವುದೇ ಮೊಬಲಗು ಆಗಿರತಕ್ಕುದು ಮತ್ತು ಪುರೋಭಿವೃದ್ಧಿ ವೆಚ್ಚಗಳು ಮೌಲ್ಯದಲ್ಲಿನ ಅಂಥ ಹೆಚ್ಚಳದ ಅರ್ಧದಷ್ಟಾಗಿರತಕ್ಕುದು.

**ವಿವರಣೆ.–** ಈ ಪ್ರಕರಣದ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ:–

(ಎ) ಯಾವುದೇ ಕಾಮಗಾರಿಯ ನಿರ್ಮಾಣದ ಪ್ರಾರಂಭದ ದಿನಾಂಕ;

(ಬಿ) ಅಂಥ ಕಾಮಗಾರಿಯು ಪೂರ್ಣಗೊಂಡ ದಿನಾಂಕ

– ಇವುಗಳನ್ನು ನಿರ್ದಿಷ್ಟಪಡಿಸತಕ್ಕುದು.

**44. 42ನೇ ಪ್ರಕರಣದ ಮೇರೆಗೆ ಅಧಿಕೃತಗೊಳಿಸಿದ ಅಧಿಕಾರಿಯ ಆದೇಶವನ್ನು ಪರಾಮರ್ಶೆಗೆ ಒಪ್ಪಿಸುವುದು.–** (1) ಪುರೋಭಿವೃದ್ಧಿ ವೆಚ್ಚಗಳನ್ನು ನಿಗದಿಪಡಿಸುವ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, 41ನೇ ಪ್ರಕರಣದ ಮೇರೆಗೆ ಅಧಿಕೃತಗೊಳಿಸಿದ ಅಧಿಕಾರಿಗೆ ಬರಹದಲ್ಲಿ

ಅರ್ಜಿಯನ್ನು ಸಲ್ಲಿಸಿ, ಯಾರ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗೆ ಆ ಭೂಮಿಯು ಇರುವುದೋ ಆ ಸಿವಿಲ್ ನ್ಯಾಯಾಧೀಶನಿಗೆ ಆ ವಿಷಯವನ್ನು ಪರಾಮರ್ಶೆಗೆ ಒಪ್ಪಿಸುವಂತೆ ಅಗತ್ಯಪಡಿಸಬಹುದು.

(2) ಯಾವುದೇ ಅಂಥ ಅರ್ಜಿಯನ್ನು, (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಅಧಿಕಾರಿಯ ಆದೇಶವನ್ನು ಅಂಥ ವ್ಯಕ್ತಿಗೆ ತಿಳಿಸಲಾದಂಥ ದಿನಾಂಕದಂದು ಆರು ವಾರಗಳ ಒಳಗೆ ಮಾಡಿಕೊಳ್ಳತಕ್ಕುದು ಮತ್ತು ಅದು ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕುದು.

(3) ಭಾರತ ಕಾಲ ಪರಿಮಿತಿ ಅಧಿನಿಯಮ, 1963ರ 5,12 ಮತ್ತು 14ನೇ ಪ್ರಕರಣಗಳ ಉಪಬಂಧಗಳು, (2)ನೇ ಉಪಪ್ರಕರಣದ ಮೇರೆಗೆ ಪರಾಮರ್ಶೆಗಾಗಿ ನಿಗದಿಪಡಿಸಿದ ಕಾಲವನ್ನು ಲೆಕ್ಕಹಾಕುವುದಕ್ಕೆ ಅನ್ವಯವಾಗತಕ್ಕುದು.

(4) 41ನೇ ಪ್ರಕರಣದ ಮೇರೆಗೆ ಅಧಿಕೃತಗೊಳಿಸಿದ ಅಧಿಕಾರಿಯು ನಿಯಮಿಸಬಹುದಾದಂಥ ರೀತಿಯಲ್ಲಿ ಪರಾಮರ್ಶೆಗಾಗಿ ಒಪ್ಪಿಸತಕ್ಕುದು.

**45. ಪುರೋಭಿವೃದ್ಧಿ ವೆಚ್ಚಗಳನ್ನು ನಿಗದಿಪಡಿಸುವ ಆದೇಶದ ಮತ್ತು ಅಭಿಪ್ರಾಯ ಕೋರಿಕೆಯ ತೀರ್ಮಾನದ ಅಂತಿಮತೆ.–** 44ನೇ ಪ್ರಕರಣದ ಮೇರೆಗೆ ಪ್ರಾಧಿಕಾರಕ್ಕೆ ಪರಾಮರ್ಶೆಗೆ ಒಪ್ಪಿಸುವುದಕ್ಕೊಳಪಟ್ಟು ಮತ್ತು 44ನೇ ಪ್ರಕರಣದ ಮೇರೆಗೆ ಪರಾಮರ್ಶೆಗೆ ಒಪ್ಪಿಸಿದಾಗ, ಆ ಪ್ರಾಧಿಕಾರದ ತೀರ್ಮಾನಕ್ಕೆ ಒಳಪಟ್ಟು, 42ನೇ ಪ್ರಕರಣದ ಮೇರೆಗೆ ಮಾಡಿದ ಪುರೋಭಿವೃದ್ಧಿ ವೆಚ್ಚಗಳನ್ನು ನಿಗದಿಪಡಿಸುವ ಆದೇಶವು ಅಂತಿಮವಾಗಿರತಕ್ಕುದು.

**46. ಪುರೋಭಿವೃದ್ಧಿ ವೆಚ್ಚಗಳು ಭೂಕಂದಾಯದ ನಂತರ ಭೂಮಿಯ ಮೇಲಣ ಮೊದಲನೇ ಋಣಭಾರವಾಗಿರತಕ್ಕುದು.–** ಪುರೋಭಿವೃದ್ಧಿ ವೆಚ್ಚಗಳನ್ನು ಯಾವ ದಿನಾಂಕದಿಂದ ವಿಧಿಸತಕ್ಕುದೋ ಆ ದಿನಾಂಕವೆಂದು ಅಂಥ ಪುರೋಭಿವೃದ್ಧಿ ವೆಚ್ಚಗಳನ್ನು ನಿಗದಿಪಡಿಸುವ ಆದೇಶದಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಅಥವಾ ಅಂಥ ವೆಚ್ಚಗಳನ್ನು ಯಾವ ದಿನಾಂಕದಿಂದ ವಿಧಿಸತಕ್ಕುದೋ ಆ ದಿನಾಂಕವೆಂದು 44ನೇ ಪ್ರಕರಣದ ಮೇರೆಗೆ ಪ್ರಾಧಿಕಾರವು ಅನ್ಯಥಾ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ, ಯಾವುದೇ ಭೂಮಿಗೆ ಸಂಬಂಧಿಸಿದಂತೆ ವಸೂಲಿಯಾಗಬಹುದಾದ ಪುರೋಭಿವೃದ್ಧಿ ವೆಚ್ಚಗಳು ಆ ಭೂಮಿ ಸಂಬಂಧ ಸರ್ಕಾರಕ್ಕೆ ಬರಬೇಕಾದ ಭೂಕಂದಾಯ ಯಾವುದಾದರೂ ಇದ್ದರೆ ಅದನ್ನು ಮುಂಚಿತವಾಗಿಯೇ ಸಂದಾಯ ಮಾಡುವುದಕ್ಕೆ ಒಳಪಟ್ಟು, ಅಂಥ ಪುರೋಭಿವೃದ್ಧಿ ವೆಚ್ಚಗಳನ್ನು ಯಾವ ಭೂಮಿಗೆ ಸಂಬಂಧಿಸಿದಂತೆ ವಿಧಿಸಲಾಗಿದೆಯೋ ಆ ಭೂಮಿಯ ಮೇಲೆ ಮೊದಲ ಋಣಭಾರವಾಗಿರತಕ್ಕುದು.

**47. ಪುರೋಭಿವೃದ್ಧಿ ವೆಚ್ಚಗಳ ಸಂದಾಯ.–** ಪುರೋಭಿವೃದ್ಧಿ ವೆಚ್ಚಗಳನ್ನು 72ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ನಿಯಮಗಳ ಮೇರೆಗೆ ನಿಗದಿಪಡಿಸಿದ ದಿನಾಂಕದಂದು ಸಂದಾಯ ಮಾಡತಕ್ಕುದು:

ಪರಂತು, ಯಾವ ಭೂಮಿಯ ಮೇಲೆ ವೆಚ್ಚಗಳನ್ನು ವಿಧಿಸಲಾಗಿದೆಯೋ ಆ ಭೂಮಿಯ ಒಡೆಯನು ನಿಯಮಿಸಬಹುದಾದಂಥ ದರದಲ್ಲಿ ಮತ್ತು ಅಂಥ ಅವಧಿಯೊಳಗೆ ಬಡ್ಡಿಯೊಂದಿಗೆ ವಾರ್ಷಿಕ ಕಂತುಗಳ ಮೂಲಕ ಅಂಥ ವೆಚ್ಚಗಳ ಮೊಬಲಗನ್ನು ಸಂದಾಯ ಮಾಡಲು ಒಪ್ಪಿಕೊಂಡು ರಾಜ್ಯ ಸರ್ಕಾರಕ್ಕೆ ಒಪ್ಪಂದವನ್ನು ಬರೆದುಕೊಡಬಹುದು.

**48. ಪುರೋಭಿವೃದ್ಧಿ ವೆಚ್ಚಗಳನ್ನು ಸಂದಾಯ ಮಾಡುವುದಕ್ಕೆ ಬದಲು ಭೂಮಿಯನ್ನು ಬಿಟ್ಟುಕೊಡುವುದು ಅಥವಾ ಅದನ್ನು ವಿನಿಮಯ ಮಾಡಿಕೊಳ್ಳುವುದು.–** 47ನೇ ಪ್ರಕರಣದಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು, ಯಾವ ಭೂಮಿಯ ಮೇಲೆ ಪುರೋಭಿವೃದ್ಧಿ ವೆಚ್ಚಗಳನ್ನು ಸಂದಾಯ ಮಾಡಬೇಕಾಗಿದೆಯೋ ಆ ಭೂಮಿಯ ಒಡೆಯನಿಗೆ ನಿಯಮಿಸಬಹುದಾದಂಥ ಷರತ್ತುಗಳ ಮೇಲೆ

ರಾಜ್ಯ ಸರ್ಕಾರಕ್ಕೆ ಆ ವೆಚ್ಚಗಳನ್ನು ಸಂದಾಯಮಾಡುವುದಕ್ಕೆ ಬದಲು ಆ ಇಡೀ ಭೂಮಿ ಅಥವಾ ಅದರ ಯಾವುದೇ ಭಾಗವನ್ನು ಬಿಟ್ಟುಕೊಡಲು ಅಥವಾ ವಿನಿಮಯವಾಗಿ ಅದನ್ನು ವಶಕ್ಕೊಪ್ಪಿಸಲು ಅನುಮತಿಸಬಹುದು:

ಪರಂತು, ಅಂಥ ಯಾವುದೇ ಬಿಟ್ಟುಕೊಡುವಿಕೆ ಅಥವಾ ವಿನಿಮಯವನ್ನು ಆ ಭೂಮಿಯು ಪೂರ್ವಾಧಿಗಳಿಂದ ಮುಕ್ತವಾಗಿದ್ದ ಹೊರತು ಅನುಮತಿಸತಕ್ಕುದಲ್ಲ.

## [1][ಅಧ್ಯಾಯ VI–ಎ

### [2][ ದಾರಿ ಸುಂಕವನ್ನು ವಿಧಿಸುವುದು ][2]

**48ಎ. ದಾರಿ ಸುಂಕವನ್ನು ವಿಧಿಸುವುದು.–** (1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಂಥ ಸೇತುವೆಗಳು, ಒಡ್ಡುದಾರಿಗಳು ಮತ್ತು ಸುರಂಗಗಳನ್ನು ಪ್ರವೇಶಿಸುವ ಎಲ್ಲಾ ಮೋಟಾರು ವಾಹನಗಳ ಮೇಲೆ, ಮತ್ತು ನಿಯಮಿಸಬಹುದಾದಂತೆ, ಪ್ರತಿ ವಾಹನಕ್ಕೆ ಹದಿನೈದು ರೂಪಾಯಿಗಳನ್ನು ಮೀರದಂಥ ದರದಲ್ಲಿ ದಾರಿಸುಂಕವನ್ನು ವಿಧಿಸಬಹುದು ಮತ್ತು ವಾಹನಗಳ ಬೇರೆ ಬೇರೆ ವರ್ಗಗಳಿಗಾಗಿ ಮತ್ತು ಸೇತುವೆಗಳು, ಒಡ್ಡುದಾರಿಗಳು ಮತ್ತು ಸುರಂಗಗಳ ಬೇರೆ ಬೇರೆ ವರ್ಗಗಳಿಗಾಗಿ ಬೇರೆ ಬೇರೆ ದರಗಳನ್ನು ನಿಯಮಿಸಬಹುದು:

ಪರಂತು, ರಾಜ್ಯ ಸರ್ಕಾರವು ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೆ ಮಾಡುವುದು ಅವಶ್ಯವೆಂದು ಅದು ಅಭಿಪ್ರಾಯಪಟ್ಟರೆ, ಅಧಿಸೂಚನೆಯ ಮೂಲಕ ಮತ್ತು ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಮೋಟಾರು ವಾಹನಗಳ ಯಾವುದೇ ವರ್ಗಕ್ಕೆ ಸಂಬಂಧಿಸಿದಂತೆ ಸಂದಾಯಮಾಡಬೇಕಾದ ದಾರಿ ಸುಂಕವನ್ನು ವಿನಾಯಿತಿಗೊಳಿಸಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಸಂದಾಯಮಾಡಬೇಕಾದ ದಾರಿ ಸುಂಕವನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ವಿಧಿಸತಕ್ಕುದು ಮತ್ತು ಸಂಗ್ರಹಿಸತಕ್ಕುದು.

(3) ಈ ಪ್ರಕರಣದ ಮೇರೆಗೆ ಸಂಗ್ರಹಿಸಿದ ಜಾರಿ ಸುಂಕವನ್ನು ಕರ್ನಾಟಕ ಮೋಟಾರು ವಾಹನಗಳ ತೆರಿಗೆ ವಿಧಿಸುವ ಅಧಿನಿಯಮ, 1957ರ 17ಎ ಪ್ರಕರಣದ ಮೇರೆಗೆ ರಚಿಸಲಾದ ಕರ್ನಾಟಕ ರಸ್ತೆಗಳು ಮತ್ತು ಸೇತುವೆಗಳ ನಿಧಿಗೆ ಜಮೆ ಮಾಡತಕ್ಕುದು.][1]

1. 1983ರ ಅಧಿನಿಯಮ ಸಂ.15ರ ಮೂಲಕ ಸೇರಿಸಲಾಗಿದೆ. ಅದನ್ನು ಜಾರಿಗೆ ತರಲಾದ ಅಧಿಸೂಚನೆ ಲಭ್ಯವಿಲ್ಲ.

2. 2000ದ ಅಧಿನಿಯಮ ಸಂಖ್ಯೆ 22ರ ಮೂಲಕ 29.11.2000ನೇ ದಿನಾಂಕದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

## ಅಧ್ಯಾಯ VII

### ಸಂಚಾರದ ಸುರಕ್ಷತೆಯನ್ನು ಸುನಿಶ್ಚಿತಪಡಿಸಿಕೊಳ್ಳಲು ಮತ್ತು ಹೆದ್ದಾರಿಗಳಿಗೆ ಹಾನಿಯನ್ನು ತಡೆಗಟ್ಟಲು ಪೂರಕ ಉಪಬಂಧಗಳು

**49. ಯಾವುದೇ ಹೆದ್ದಾರಿಯನ್ನು ಉಪಯೋಗಿಸುವ ವ್ಯಕ್ತಿಗಳ ದೃಷ್ಟಿಗೆ ಅಡ್ಡಿಯನ್ನು ತಡೆಗಟ್ಟುವುದು.–** (1) ವಿಶೇಷವಾಗಿ ಹೆದ್ದಾರಿಯ ಯಾವುದೇ ತಿರುವು ಅಥವಾ ಮೂಲೆಯಲ್ಲಿ ಯಾವುದೇ ಹೆದ್ದಾರಿಯನ್ನು ಉಪಯೋಗಿಸುವ ವ್ಯಕ್ತಿಗಳ ದೃಷ್ಟಿಗೆ ಅಡ್ಡಿಯನ್ನುಂಟುಮಾಡುವುದರಿಂದ ಉದ್ಭವಿಸುವ ಅಪಾಯವನ್ನು ತಡೆಗಟ್ಟುವುದಕ್ಕಾಗಿ ಅದು ಅವಶ್ಯವೆಂದು ಹೆದ್ದಾರಿ ಪ್ರಾಧಿಕಾರವು ಅಭಿಪ್ರಾಯಪಟ್ಟಾಗಲೆಲ್ಲ, ಅದು, 11ನೇ ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿರುವಂತೆ ಹೊರತು, ಅಂಥ ಹೆದ್ದಾರಿಯ ಗುಂಟ ಅಥವಾ ಅದರ ತಿರುವು ಅಥವಾ ಮೂಲೆಯಲ್ಲಿ ಇರುವ ಭೂಮಿಯ ಒಡೆಯ ಅಥವಾ ಅಧಿಭೋಗದಾರನಿಗೆ, ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಮತ್ತು ಅಂಥ ರೀತಿಯಲ್ಲಿ ಅಸ್ತಿತ್ವದಲ್ಲಿರುವ

ಯಾವುದೇ ಗೋಡೆ, ಒಂದು ಖಾಯಂ ರಚನೆಯ ಭಾಗವಾಗಿರುವ ಗೋಡೆ, ಬೇಲಿ, ಆವರಣ ಬೇಲಿ, ಮರ, ಜಾಹೀರಾತು ಕಂಬ, ಪ್ರಕಟಣೆ ಫಲಕ ಅಥವಾ ಅದರ ಮೇಲಿನ ಯಾವುದೇ ವಸ್ತುವಿನ ಎತ್ತರ ಅಥವಾ ಸ್ವರೂಪವನ್ನು ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅಗತ್ಯತೆಗಳಿಗೆ ಅವು ಅನುರೂಪವಾಗಿರುವಂತೆ ಮಾಡಲು, ಬದಲಾಯಿಸಲು ನೋಟೀಸನ್ನು ಜಾರಿಮಾಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಯಾರಿಗೆ ನೋಟೀಸನ್ನು ಜಾರಿ ಮಾಡಲಾಗಿದೆಯೋ ಆ ಯಾವನೇ ವ್ಯಕ್ತಿಯು ಅಂಥ ನೋಟೀಸಿನ ಯಾವುದೇ ಅಗತ್ಯತೆಯನ್ನು ಪಾಲಿಸಲು ಆಕ್ಷೇಪಿಸುವಂತಿದ್ದರೆ, ಅವನು ಅದನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ, ಅದರ ಬಗ್ಗೆ ಕಾರಣಗಳನ್ನು ನಿರೂಪಿಸಿ ಬರಹದಲ್ಲಿ ಅವನ ಆಕ್ಷೇಪಣೆಯನ್ನು ಹೆದ್ದಾರಿ ಪ್ರಾಧಿಕಾರಕ್ಕೆ ಕಳುಹಿಸಬಹುದು.

(3) ಹೆದ್ದಾರಿ ಪ್ರಾಧಿಕಾರವು, ಆ ಆಕ್ಷೇಪಣೆಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಮುಂದಿಟ್ಟ ಕಾರಣಗಳನ್ನು ಪರ್ಯಾಲೋಚಿಸತಕ್ಕುದು ಮತ್ತು ಬರಹದಲ್ಲಿನ ಆದೇಶದ ಮೂಲಕ ನೋಟೀಸನ್ನು ಹಿಂತೆಗೆದುಕೊಳ್ಳತಕ್ಕುದು ಅಥವಾ ಅದನ್ನು ತಿದ್ದುಪಡಿ ಮಾಡತಕ್ಕುದು ಅಥವಾ ಸ್ಥಿರೀಕರಿಸತಕ್ಕುದು.

(4) (3)ನೇ ಉಪ-ಪ್ರಕರಣದ ಮೇರೆಗೆ ಹೆದ್ದಾರಿ ಪ್ರಾಧಿಕಾರವು ಹೊರಡಿಸಿದ ಆದೇಶದಿಂದ ಯಾವನೇ ವ್ಯಕ್ತಿಯು ಬಾಧಿತನಾದರೆ, ಅವನು ಅಂಥ ಆದೇಶವನ್ನು ಅವನಿಗೆ ತಿಳಿಸಿದ ದಿನಾಂಕದಿಂದ ಹದಿನೈದು ದಿವಸಗಳೊಳಗೆ ಡೆಪ್ಯೂಟಿ ಕಮಿಷನರನಿಗೆ ಅಪೀಲನ್ನು ಸಲ್ಲಿಸಬಹುದು; ಆ ವಿಷಯದಲ್ಲಿ ಅವನ ತೀರ್ಮಾನವು ಅಂತಿಮವಾಗಿರತಕ್ಕುದು.

(5) (3)ನೇ ಉಪ-ಪ್ರಕರಣದ ಮೇರೆಗೆ ಸಂದರ್ಭಾನುಸಾರ ತಿದ್ದುಪಡಿಯಾದಂತೆ ಅಥವಾ ಸ್ಥಿರೀಕರಿಸಲಾದಂತೆ (1)ನೇ ಉಪ-ಪ್ರಕರಣದ ಮೇರೆಗೆ ಅವನಿಗೆ ಜಾರಿಮಾಡಿದ ನೋಟೀಸನ್ನು ಪಾಲಿಸಲು ಯಾವನೇ ವ್ಯಕ್ತಿಯು ತಪ್ಪಿದರೆ, ಹೆದ್ದಾರಿ ಪ್ರಾಧಿಕಾರವು, ಅದರದೇ ಆದ ವೆಚ್ಚದಲ್ಲಿ ದೃಷ್ಟಿಗೆ ಅಡ್ಡಿಯನ್ನುಂಟುಮಾಡುವ ವಸ್ತುವನ್ನು ಬದಲಾಯಿಸಲು ಕ್ರಮ ಕೈಗೊಳ್ಳಬಹುದು, ಮತ್ತು ಅಂಥ ವೆಚ್ಚವನ್ನು ಅವನ ವಿರುದ್ಧ ತೆಗೆದುಕೊಳ್ಳಬಹುದಾದಂಥ ಯಾವುದೇ ಇತರ ಕ್ರಮಕ್ಕೆ ಬಾಧಕವಾಗದಂತೆ 25ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಅಂಥ ವ್ಯಕ್ತಿಯಿಂದ ವಸೂಲು ಮಾಡತಕ್ಕುದು.

**50. ಹೆದ್ದಾರಿಯು ಸುರಕ್ಷಿತವಾಗಿಲ್ಲವೆಂದು ಘೋಷಿಸಿದಾಗ ಹೆದ್ದಾರಿ ಪ್ರಾಧಿಕಾರವು, ಸಂಚಾರವನ್ನು ನಿಯಂತ್ರಿಸಬಹುದು.–** ಹೆದ್ದಾರಿ ಪ್ರಾಧಿಕಾರಕ್ಕೆ ಅದರ ಪ್ರಭಾರದಲ್ಲಿರುವ ಯಾವುದೇ ಹೆದ್ದಾರಿ ಅಥವಾ ಅದರ ಯಾವುದೇ ಭಾಗವು ಹಾನಿಯ ಕಾರಣದಿಂದಾಗಿ ಅಥವಾ ಅನ್ಯಥಾ ವಾಹನ ಅಥವಾ ಪಾದಚಾರಿ ಸಂಚಾರಕ್ಕಾಗಿ ಸುರಕ್ಷಿತವಾಗಿಲ್ಲವೆಂದು ಅಥವಾ ಸುರಕ್ಷಿತವಾಗಿಲ್ಲದೆ ಹಾಗೆ ಆಗಿರುವುದೆಂದು ಯಾವುದೇ ಕಾಲದಲ್ಲಿ ಕಂಡುಬಂದರೆ ಅದು ಈ ಬಗ್ಗೆ ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ಎಲ್ಲಾ ಸಂಚಾರಕ್ಕೆ ಅಥವಾ ಯಾವುದೇ ವರ್ಗದ ಸಂಚಾರಕ್ಕೆ ಆ ಹೆದ್ದಾರಿ ಅಥವಾ ಅದರ ಭಾಗವನ್ನು ಮುಚ್ಚಬಹುದು, ಅಥವಾ ಆ ಹೆದ್ದಾರಿಯನ್ನು ಉಪಯೋಗಿಸುವ ವಾಹನಗಳ ಸಂಖ್ಯೆ ಮತ್ತು ವೇಗ ಅಥವಾ ಭಾರವನ್ನು ನಿಯಂತ್ರಿಸಬಹುದು.

**51. ಕೆಲವು ಹೆದ್ದಾರಿಗಳಲ್ಲಿ ಭಾರೀ ವಾಹನಗಳ ಉಪಯೋಗದ ನಿಷೇಧ.–** ಹೆದ್ದಾರಿ ಪ್ರಾಧಿಕಾರಕ್ಕೆ, ಯಾವುದೇ ಹೆದ್ದಾರಿ ಅಥವಾ ಅದರ ಭಾಗವು, ಅಥವಾ ಯಾವುದೇ ಹೆದ್ದಾರಿಯ ಮೇಲೆ ಅಥವಾ ಅದಕ್ಕೆ ಅಡ್ಡಲಾಗಿ ಕಟ್ಟಿರುವ ಯಾವುದೇ ಸೇತುವೆ, ಅಡಿಗಾಲುವೆ ಅಥವಾ ಒಡ್ಡುದಾರಿಯು, ಯಾವ ವಾಹನಗಳ ಹೇರಿದ ಭಾಗವು ಈ ಬಗ್ಗೆ ನಿಗದಿಪಡಿಸಬಹುದಾದಂಥ ಮಿತಿಯನ್ನು ಮೀರುವುದೋ ಆ ವಾಹನಗಳನ್ನು ವಿನ್ಯಾಸಗೊಳಿಸಿಲ್ಲವೆಂದು ಮನದಟ್ಟಾದಲ್ಲಿ ಅದು ಈ ಬಗ್ಗೆ ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ಅಂಥ ಹೆದ್ದಾರಿಯಲ್ಲಿ ಅಥವಾ ಆ ಹೆದ್ದಾರಿಯ ಅಂಥ ಭಾಗದಲ್ಲಿ ಅಥವಾ ಅಂಥ ಸೇತುವೆ, ಅಡಿಗಾಲುವೆ ಅಥವಾ ಒಡ್ಡುದಾರಿಯಲ್ಲಿ ಅಥವಾ ಅದರ ಮೇಲೆ ಅಂಥ ವಾಹನಗಳು ಓಡುವುದನ್ನು ನಿಷೇಧಿಸಬಹುದು ಅಥವಾ ನಿರ್ಬಂಧಿಸಬಹುದು.

**52. ಹೆದ್ದಾರಿ ಪ್ರಾಧಿಕಾರವು ಯಾವುದೇ ಹೆದ್ದಾರಿಯನ್ನು ಶಾಶ್ವತವಾಗಿ ಮುಚ್ಚಲು ಇಚ್ಛಿಸಿದಾಗ ಅನುಸರಿಸಬೇಕಾದ ಪ್ರಕ್ರಿಯೆ.–** (1) 50ನೇ ಪ್ರಕರಣದ ಮೂಲಕ ಅದಕ್ಕೆ ಪ್ರದಾನಮಾಡಿದ ಅಧಿಕಾರಗಳನ್ನು ಚಲಾಯಿಸಿ, ಹೆದ್ದಾರಿ ಪ್ರಾಧಿಕಾರವು, ಯಾವುದೇ ಹೆದ್ದಾರಿ ಅಥವಾ ಅದರ ಭಾಗವನ್ನು ಶಾಶ್ವತವಾಗಿ ಮುಚ್ಚಲು ಇಚ್ಛಿಸಿದಲ್ಲಿ, ಅದು ಹಾಗೆ ಮಾಡುವ ಅದರ ಉದ್ದೇಶದ ನೋಟೀಸನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಕೊಡತಕ್ಕುದು. ಆ ಅಧಿಸೂಚನೆಯನ್ನು ಹೆದ್ದಾರಿಯು ಇರುವಂಥ ಸ್ಥಳದಲ್ಲಿ ಪ್ರಸಾರವನ್ನು ಹೊಂದಿರುವಂಥ ಕನಿಷ್ಠಪಕ್ಷ ಎರಡು ಸುದ್ದಿ ಪತ್ರಿಕೆಗಳಲ್ಲಿ ಸಹ ಪ್ರಕಟಿಸತಕ್ಕುದು.

(2) ನೋಟೀಸು ಒದಗಿಸಲು ಪ್ರಸ್ತಾಪಿಸಲಾದ ಅಥವಾ ಈಗಾಗಲೇ ಅಸ್ತಿತ್ವದಲ್ಲಿರುವಂಥ ಪರ್ಯಾಯಮಾರ್ಗ ಯಾವುದಾದರೂ ಇದ್ದರೆ, ಅದನ್ನು ಸೂಚಿಸತಕ್ಕುದು, ಮತ್ತು ನಿರ್ದಿಷ್ಟ ಪಡಿಸಬಹುದಾದಂಥ ಕಾಲದೊಳಗೆ ಆ ಪ್ರಸ್ತಾವಕ್ಕೆ ಆಕ್ಷೇಪಣೆಗಳು ಯಾವುವಾದರೂ ಇದ್ದರೆ ಅವುಗಳನ್ನು ಒಪ್ಪಿಸುವಂತೆಯೂ ಸಹ ಆಹ್ವಾನಿಸತಕ್ಕುದು.

(3) ಹೆದ್ದಾರಿ ಪ್ರಾಧಿಕಾರವು, ನಿರ್ದಿಷ್ಟಪಡಿಸಿದ ಕಾಲದೊಳಗೆ ಸ್ವೀಕರಿಸಿದ ಆಕ್ಷೇಪಣೆಗಳು ಯಾವುವಾದರೂ ಇದ್ದರೆ ಅವುಗಳನ್ನು ಪರ್ಯಾಲೋಚಿಸಿದ ತರುವಾಯ ಯಾವುದೇ ಹೆದ್ದಾರಿ ಅಥವಾ ಅದರ ಭಾಗವನ್ನು ಮುಚ್ಚಲು ಅದರ ಪ್ರಸ್ತಾವವನ್ನು ಅಂತಿಮಗೊಳಿಸತಕ್ಕುದು ಮತ್ತು ಆ ಅಂತಿಮ ಪ್ರಸ್ತಾವವನ್ನು ಆ ಪ್ರಸ್ತಾವದ ವಿರುದ್ಧ ಸ್ವೀಕರಿಸಲಾಗಿರಬಹುದಾದಂಥ ಆಕ್ಷೇಪಣೆಗಳೊಂದಿಗೆ ಅನುಮೋದನೆಗಾಗಿ ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕುದು.

(4) ರಾಜ್ಯ ಸರ್ಕಾರವು ಮಾರ್ಪಾಟು ಸಹಿತ ಅಥವಾ ಮಾರ್ಪಾಟು ಇಲ್ಲದೆ ಪ್ರಸ್ತಾವವನ್ನು ಅನುಮೋದಿಸಬಹುದು ಅಥವಾ ಅದನ್ನು ತಿರಸ್ಕರಿಸಬಹುದು.

(5) ರಾಜ್ಯ ಸರ್ಕಾರವು ಪ್ರಸ್ತಾವವನ್ನು ಅನುಮೋದಿಸಿದಾಗ ಅದು ಅದರ ಆದೇಶಗಳನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕುದು.

(6) ರಾಜ್ಯ ಸರ್ಕಾರದ ಆದೇಶಗಳನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದಾಗ, ಆ ಹೆದ್ದಾರಿ ಪ್ರಾಧಿಕಾರವು ಅಂಥ ಹೆದ್ದಾರಿಯು ಇರುವಂಥ ಸ್ಥಳದಲ್ಲಿ ಪ್ರಸಾರವನ್ನು ಹೊಂದಿರುವ ಕನಿಷ್ಠಪಕ್ಷ ಎರಡು ಸುದ್ದಿಪತ್ರಿಕೆಗಳಲ್ಲಿ ಆ ಆದೇಶಗಳಿಗೆ ಇನ್ನೂ ಹೆಚ್ಚಿನ ಪ್ರಚಾರವನ್ನು ಕೊಡುವುದಕ್ಕಾಗಿ ವ್ಯವಸ್ಥೆ ಮಾಡತಕ್ಕುದು ಮತ್ತು ಆ ಹೆದ್ದಾರಿ ಅಥವಾ ಅದರ ಭಾಗವನ್ನು ಆ ತರುವಾಯ ಮುಚ್ಚತಕ್ಕುದು.

(7) ಯಾವುದೇ ಹೆದ್ದಾರಿ ಅಥವಾ ಅದರ ಯಾವುದೇ ಭಾಗವನ್ನು ಹಾಗೆ ಮುಚ್ಚಿರುವಾಗಲೆಲ್ಲ ಅವನ ಸ್ವತ್ತಿಗೆ ಅಥವಾ ಅದರಿಂದ ಪ್ರವೇಶ ಮಾರ್ಗವೆಂದು ಅಂಥ ಹೆದ್ದಾರಿ ಅಥವಾ ಅದರ ಭಾಗದ ಉಪಯೋಗಕ್ಕೆ ಕೇವಲ ಸಾರ್ವಜನಿಕ ಸದಸ್ಯನೆಂದು ಅಲ್ಲದೆ ಅನ್ಯಥಾ ಹಕ್ಕುಳ್ಳವನಾಗಿದ್ದ ಮತ್ತು ಅಂಥ ಮುಚ್ಚುವಿಕೆಯ ಮೂಲಕ ಹಾನಿಯನ್ನು ಅನುಭವಿಸಿರುವ ಪ್ರತಿಯೊಬ್ಬ ವ್ಯಕ್ತಿಗೆ ಯುಕ್ತ ನಷ್ಟಪರಿಹಾರವನ್ನು ಸಂದಾಯ ಮಾಡತಕ್ಕುದು.

**53. ಹೆದ್ದಾರಿಯ ಮೇಲೆ ಕೆಲವು ಕಾರ್ಯಗಳನ್ನು ಮಾಡಲು ಹೆದ್ದಾರಿ ಪ್ರಾಧಿಕಾರದ ಸಮ್ಮತಿಯು ಅಗತ್ಯವಾಗಿರತಕ್ಕುದು.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮಿತಿಯಲ್ಲಿ ಏನೇ ಇದ್ದರೂ, ಆದರೆ 73ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಹೆದ್ದಾರಿ ಪ್ರಾಧಿಕಾರವನ್ನು ಅಥವಾ ಅದು ಅಧಿಕೃತಗೊಳಿಸಿದ ಯಾವನೇ ವ್ಯಕ್ತಿಯನ್ನು ಹೊರತುಪಡಿಸಿ, ಯಾವನೇ ವ್ಯಕ್ತಿಯು, ಹೆದ್ದಾರಿ ಪ್ರಾಧಿಕಾರದ ಬರಹದಲ್ಲಿನ ಅನುಮತಿಯಿಂದ ಹೊರತು, ಯಾವುದೇ ಹೆದ್ದಾರಿಯ ಮೂಲಕ, ಅದಕ್ಕೆ ಅಡ್ಡಲಾಗಿ, ಅದರ ಕೆಳಗೆ ಅಥವಾ ಅದರ ಮೇಲೆ ಯಾವುದೇ ಕೇಬಲ್, ತಂತಿ, ಪೈಪು, ಚರಂಡಿ, ಗ್ರಾಮಸಾರ ಚರಂಡಿ ಅಥವಾ ಯಾವುದೇ ಬಗೆಯ ಕಾಲುವೆಯನ್ನು ನಿರ್ಮಿಸತಕ್ಕುದಲ್ಲ ಅಥವಾ ಒಯ್ಯತಕ್ಕುದಲ್ಲ.

(2) ಅದರ ಸಮ್ಮತಿಯನ್ನು ಕೊಡುವಲ್ಲಿ, ಹೆದ್ದಾರಿ ಪ್ರಾಧಿಕಾರವು, ಅದು ಅವಶ್ಯವೆಂದು ಭಾವಿಸಬಹುದಾದಂಥ ಷರತ್ತುಗಳನ್ನು ವಿಧಿಸಬಹುದು ಮತ್ತು ಪ್ರಸ್ತಾವಿತ ಕೆಲಸದಿಂದ ಆವರಿಸಿರುವ ಅಥವಾ ಅದಕ್ಕೆ ವಿನಿಯೋಗಿಸಿದ ಹೆದ್ದಾರಿಯ ಭಾಗವಾಗಿರುವ ಯಾವುದೇ ಭೂಮಿಗಾಗಿ ಬಾಡಿಗೆ ಅಥವಾ ಇತರ ಚಾರ್ಜನ್ನು ಸಹ ವಿಧಿಸಬಹುದು.

(3) ಯಾವನೇ ವ್ಯಕ್ತಿಯು, (1)ನೇ ಉಪ-ಪ್ರಕರಣವನ್ನು ಉಲ್ಲಂಘಿಸಿ ಯಾವುದೇ ಕಾಮಗಾರಿಯನ್ನು ನಿರ್ಮಿಸಿದರೆ ಅಥವಾ ಕಾರ್ಯಗತಗೊಳಿಸಿದರೆ ಆ ಹೆದ್ದಾರಿ ಪ್ರಾಧಿಕಾರವು 23ನೇ ಪ್ರಕರಣದ ಉಪಬಂಧಗಳನುಸಾರವಾಗಿ ಅಂಥ ಕಾಮಗಾರಿಯನ್ನು ತೆಗೆದುಹಾಕಲು ಮತ್ತು ಅಂಥ ಹೆದ್ದಾರಿಯನ್ನು ಪೂರ್ವಸ್ಥಿತಿಗೆ ತರುವುದಕ್ಕಾಗಿ ಹೆದ್ದಾರಿಯ ಮೇಲೆ ಆ ಕಾಮಗಾರಿಯು ಒತ್ತುವರಿ ಆಗಿದ್ದಿದ್ದರೆ ಹೇಗೋ ಹಾಗೆ ವ್ಯವಸ್ಥೆ ಮಾಡಬಹುದು ಮತ್ತು ಈ ಉದ್ದೇಶಕ್ಕಾಗಿ ಹೆದ್ದಾರಿ ಪ್ರಾಧಿಕಾರವು ವಹಿಸಬಹುದಾದಂಥ ವೆಚ್ಚಗಳನ್ನು ಅಂಥ ವ್ಯಕ್ತಿಯ ವಿರುದ್ಧ ಕೈಗೊಳ್ಳಬಹುದಾದ ಯಾವುದೇ ಇತರ ಕ್ರಮಕ್ಕೆ ಬಾಧಕವಾಗದಂತೆ 25ನೇ ಪ್ರಕರಣದಲ್ಲಿ ಉಪಬಂಧಿಸಿದ ಪ್ರಕ್ರಿಯೆಗೆ ಅನುಸಾರ ಆ ಪ್ರಕ್ರಿಯೆಯು ಅನ್ವಯವಾಗಬಹುದಾದಷ್ಟರಮಟ್ಟಿಗೆ ಅವನಿಂದ ವಸೂಲಿ ಮಾಡತಕ್ಕುದು.

**54. ಹೆದ್ದಾರಿಗೆ ಹಾನಿಯನ್ನು ತಡೆಗಟ್ಟುವುದು ಮತ್ತು ಅದನ್ನು ಸರಿಪಡಿಸುವುದು.–** (1) ಯಾವನೇ ವ್ಯಕ್ತಿಯು ಉದ್ದೇಶಪೂರ್ವಕವಾಗಿ ಯಾವುದೇ ಹೆದ್ದಾರಿಗೆ ಯಾವುದೇ ಹಾನಿಯನ್ನುಂಟುಮಾಡುತಕ್ಕುದಲ್ಲ ಅಥವಾ ಹಾಗೆ ಅವನ ಪ್ರಭಾರದಲ್ಲಿರುವ ಯಾವುದೇ ವಾಹನ ಅಥವಾ ಪ್ರಾಣಿಯು ಅದನ್ನು ಮಾಡಲು ಅವಕಾಶಕೊಡತಕ್ಕುದಲ್ಲ.

(2) (1)ನೇ ಉಪ-ಪ್ರಕರಣವನ್ನು ಉಲ್ಲಂಘಿಸಿ, ಯಾವುದೇ ಹೆದ್ದಾರಿಗೆ ಯಾವುದೇ ಹಾನಿಯನ್ನು ಉಂಟುಮಾಡಿರುವಲ್ಲಿ, ಹೆದ್ದಾರಿ ಪ್ರಾಧಿಕಾರವು ಹಾನಿಯನ್ನು ದುರಸ್ತಿಪಡಿಸತಕ್ಕುದು ಮತ್ತು ಅದಕ್ಕೆ ತಗುಲಿದ ವೆಚ್ಚಗಳನ್ನು (1)ನೇ ಉಪ-ಪ್ರಕರಣದ ಉಲ್ಲಂಘನೆಗಾಗಿ ಜವಾಬ್ದಾರನಾದ ವ್ಯಕ್ತಿಯ ವಿರುದ್ಧ ತೆಗೆದುಕೊಳ್ಳಬಹುದಾದ ಯಾವುದೇ ಇತರ ಕ್ರಮಕ್ಕೆ ಬಾಧಕವಾಗದಂತೆ 25ನೇ ಪ್ರಕರಣದಲ್ಲಿ ಉಪಬಂಧಿಸಿದ ಪ್ರಕ್ರಿಯೆಗೆ ಅನುಸಾರವಾಗಿ ಆ ಪ್ರಕ್ರಿಯೆಯು ಅನ್ವಯವಾಗುವಷ್ಟರ ಮಟ್ಟಿಗೆ ಅವನಿಂದ ವಸೂಲು ಮಾಡತಕ್ಕುದು.

## ಅಧ್ಯಾಯ VIII

## ದಂಡನೆಗಳು

**55. ಆದೇಶಗಳು, ಸೂಚನೆಗಳನ್ನು ಪಾಲಿಸದಿರುವುದು ಮತ್ತು ಮಾಹಿತಿಯನ್ನು ಕೊಡಲು ನಿರಾಕರಣೆ ಇತ್ಯಾದಿ.–** ನಿರ್ದೇಶನವನ್ನು ಕೊಡಲು ಈ ಅಧಿನಿಯಮದ ಮೇರೆಗೆ ಶಕ್ತಗೊಳಿಸಿದ ಯಾವನೇ ವ್ಯಕ್ತಿ ಅಥವಾ ಪ್ರಾಧಿಕಾರವು ಕಾನೂನು ಸಮ್ಮತವಾಗಿ ಕೊಟ್ಟ ಯಾವುದೇ ಅಂಥ ನಿರ್ದೇಶನವನ್ನು ಉದ್ದೇಶಪೂರ್ವಕವಾಗಿ ಪಾಲಿಸದಿರುವ ಅಥವಾ ಅಂಥ ವ್ಯಕ್ತಿ ಅಥವಾ ಪ್ರಾಧಿಕಾರವು ನಿರ್ವಹಿಸಲು ಈ ಅಧಿನಿಯಮದ ಮೇರೆಗೆ ಅಗತ್ಯಪಡಿಸಿದ ಅಥವಾ ಶಕ್ತಗೊಳಿಸಿದ ಯಾವುವೇ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಯಾವನೇ ವ್ಯಕ್ತಿ ಅಥವಾ ಪ್ರಾಧಿಕಾರಕ್ಕೆ ಅಡ್ಡಿಪಡಿಸುವ ಅಥವಾ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಯಾವುದೇ ಮಾಹಿತಿಯನ್ನು ಒದಗಿಸಲು ಅಗತ್ಯಪಡಿಸಿದ್ದು ಅಂಥ ಮಾಹಿತಿಯನ್ನು ತಡೆಹಿಡಿಯುವ ಅಥವಾ ಸುಳ್ಳೆಂದು ಅವನಿಗೆ ತಿಳಿದಿರುವಂಥ ಅಥವಾ ಅವನು ಸತ್ಯವೆಂದು ನಂಬದೆ ಇರುವಂಥ ಮಾಹಿತಿಯನ್ನು ಕೊಡುವ ಯಾರೇ ಆಗಲಿ ಅಪರಾಧವು ನಿರ್ಣಯವಾದ ಮೇಲೆ ಎರಡು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕುದು.

**56. ಯಾವುದೇ ಕಟ್ಟಡದ ಪ್ರವೇಶಾವಕಾಶಕ್ಕೆ ಅಥವಾ ಅದನ್ನು ನಿರ್ಮಿಸುವುದಕ್ಕೆ ಸಂಬಂಧಪಟ್ಟ ನಿರ್ಬಂಧಗಳ ಉಲ್ಲಂಘನೆ ಇತ್ಯಾದಿ.–** 9ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಕಟ್ಟಡವನ್ನು ನಿರ್ಮಿಸುವ, ಬದಲಾಯಿಸುವ ಅಥವಾ ವಿಸ್ತರಿಸುವ ಅಥವಾ ಯಾವುದೇ ಅಗೆತವನ್ನು ಮಾಡುವ ಅಥವಾ ಹೆದ್ದಾರಿಗೆ ಅಥವಾ ಅದರಿಂದ ಯಾವುದೇ ಪ್ರವೇಶ ಮಾರ್ಗವನ್ನು ನಿರ್ಮಿಸಿದರೆ ಅಥವಾ ಯಾವುದೇ ಇತರ ಕಾಮಗಾರಿಯನ್ನು ಮಾಡುವ, ಯಾರೇ ಆಗಲಿ ಅಪರಾಧವು ನಿರ್ಣಯವಾದ ಮೇಲೆ,–

(ಎ) ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ; ಮತ್ತು

(ಬಿ) ಕಾನೂನನ್ನು ಉಲ್ಲಂಘಿಸಿದ ರಚನೆ ಅಥವಾ ಕಾಮಗಾರಿಯನ್ನು ತೆಗೆದುಹಾಕದೆ, ಕೆಡವದೆ ಅಥವಾ ಖಾಲಿ ಮಾಡದೆ ಮತ್ತು ನಿವೇಶನವನ್ನು ಅದರ ಮೂಲಸ್ಥಿತಿಗೆ ತರದಂಥ ಅವಧಿಯಲ್ಲಿ ಅಂಥ ಅಪರಾಧ ನಿರ್ಣಯವಾದ ತರುವಾಯ ಪ್ರತಿ ದಿವಸಕ್ಕಾಗಿ ಒಂದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಇನ್ನೂ ಹೆಚ್ಚಿನ ಜುಲ್ಮಾನೆಯಿಂದ

– ದಂಡಿತನಾಗತಕ್ಕುದು.

**57. ಹೆದ್ದಾರಿಯ ಅನಧಿಕೃತ ಅಧಿಭೋಗ.–** ಯಾರೇ ಆಗಲಿ,–

(ಎ) 21ನೇ ಪ್ರಕರಣದ (1)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಹೆದ್ದಾರಿಯನ್ನು ಆಕ್ರಮಿಸಿದರೆ ಅಥವಾ ಅದರ ಮೇಲೆ ಯಾವುದೇ ಒತ್ತುವರಿಯನ್ನು ಮಾಡಿದರೆ; ಅಥವಾ

(ಬಿ) ಯಾವುದೇ ಸಮಂಜಸ ಕಾರಣವಿಲ್ಲದೆ 23ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಅವನಿಗೆ ಜಾರಿ ಮಾಡಿದ ನೋಟೀಸನ್ನು ಪಾಲಿಸಲು ತಪ್ಪಿದರೆ ಅವನು ಅಪರಾಧ ನಿರ್ಣಯದ ಮೇಲೆ,–

(i) ಮೊದಲನೇ ಅಪರಾಧಕ್ಕಾಗಿ ಎರಡುನೂರ ಐವತ್ತು ರೂಪಾಯಿಗಳಿಗೆ ವಿಸ್ತರಿಸ ಬಹುದಾದಂಥ ಜುಲ್ಮಾನೆಯಿಂದ;

(ii) ಅದೇ ಒತ್ತುವರಿಗೆ ಸಂಬಂಧಪಟ್ಟಂತೆ ತರುವಾಯದ ಅಪರಾಧಕ್ಕಾಗಿ ಐದುನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆ ಮತ್ತು ಆ ಹೆದ್ದಾರಿಯ ಅಂಥ ಆಕ್ರಮಣ ಅಥವಾ ಒತ್ತುವರಿಯು ಮುಂದುವರಿಯುವಂಥ ಪ್ರತಿ ದಿವಸಕ್ಕಾಗಿ ಐವತ್ತು ರೂಪಾಯಿಗಳನ್ನು ಮೀರದ ಇನ್ನು ಹೆಚ್ಚಿನ ಜುಲ್ಮಾನೆಯಿಂದ

– ದಂಡಿತನಾಗತಕ್ಕುದು.

**58. ಹೆದ್ದಾರಿಗಳಿಗೆ ಹಾನಿಯನ್ನುಂಟುಮಾಡುವುದು.–** 54ನೇ ಪ್ರಕರಣದ (1)ನೇ ಉಪ-ಪ್ರಕರಣವನ್ನು ಉಲ್ಲಂಘಿಸಿ ಯಾರೇ ಆಗಲಿ ಯಾವುದೇ ಹೆದ್ದಾರಿಗೆ ಉದ್ದೇಶಪೂರ್ವಕವಾಗಿ ಯಾವುದೇ ಹಾನಿಯನ್ನುಂಟು ಮಾಡಿದರೆ ಅಥವಾ ಯಾವುದೇ ಹಾನಿ ಉಂಟುಮಾಡುವುದಕ್ಕಾಗಿ ಅವನ ಪ್ರಭಾರದಲ್ಲಿರುವ ಯಾವುದೇ ವಾಹನಕ್ಕೆ ಅಥವಾ ಪ್ರಾಣಿಗೆ ಅವಕಾಶ ಕೊಟ್ಟರೆ ಅಪರಾಧ ನಿರ್ಣಯವಾದ ಮೇಲೆ ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕುದು.

[1][**58ಎ. ದಾರಿ ಸುಂಕವನ್ನು ಸಂದಾಯ ಮಾಡದೆ ಸೇತುವೆಗಳು ಇತ್ಯಾದಿಗಳ ಮೇಲೆ ಪ್ರವೇಶಿಸುವುದು.–** ಯಾರೇ ಆಗಲಿ, 48ಎ ಪ್ರಕರಣದ ಮೇರೆಗೆ ನಿಯಮಿಸಿದ ದಾರಿ ಸುಂಕವನ್ನು ಸಂದಾಯಮಾಡದೆ ಸೇತುವೆ, ಅಡಿಗಾಲುವೆ ಅಥವಾ ಸುರಂಗವನ್ನು ಪ್ರವೇಶಿಸಿದರೆ, ಅಪರಾಧವು ನಿರ್ಣಯವಾದ ಮೇಲೆ,–

(ಎ) ಮೊದಲನೇ ಅಪರಾಧಕ್ಕಾಗಿ ಒಂದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ;

(ಬಿ) ತರುವಾಯದ ಅಪರಾಧಕ್ಕಾಗಿ ನಾಲ್ಕುನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ

– ದಂಡಿತನಾಗತಕ್ಕುದು.][1]

1. 1983ರ ಅಧಿನಿಯಮ ಸಂಖ್ಯೆ 15ರ ಮೂಲಕ ಸೇರಿಸಲಾಗಿದೆ, ಅದನ್ನು ಜಾರಿಗೆ ತರಲಾದ ಅಧಿಸೂಚನೆ ಲಭ್ಯವಿಲ್ಲ.

**59. ಅಪರಾಧಗಳ ದಂಡನೆಗಾಗಿ ಸಾಮಾನ್ಯ ಉಪಬಂಧ.–** ಯಾರೇ ಆಗಲಿ, ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ನಿಯಮ ಅಥವಾ ಆದೇಶದ ಯಾವುವೇ ಉಪಬಂಧಗಳನ್ನು ಉಲ್ಲಂಘಿಸಿದರೆ ಆ ಅಪರಾಧಕ್ಕಾಗಿ ಯಾವುದೇ ಇತರ ದಂಡನೆಯನ್ನು ಉಪಬಂಧಿಸಿಲ್ಲದಿದ್ದರೆ ಅಪರಾಧವು ನಿರ್ಣಯವಾದ ಮೇಲೆ,–

(ಎ) ಮೊದಲನೇ ಅಪರಾಧಕ್ಕೆ ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ;

(ಬಿ) ತರುವಾಯದ ಅಪರಾಧಕ್ಕಾಗಿ ಎರಡು ನೂರು ರೂಪಾಯಿಗಳಿಗೆ ವಿಸ್ತರಿಸ ಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕುದು.

**60. ಅಪರಾಧಗಳನ್ನು ರಾಜಿ ಮಾಡಿಕೊಳ್ಳುವ ಅಧಿಕಾರ.–** ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಅಪರಾಧವನ್ನು ಹೆದ್ದಾರಿ ಪ್ರಾಧಿಕಾರವು ರಾಜಿ ಮಾಡಿಕೊಳ್ಳಬಹುದು ಮತ್ತು ಯಾವುದೇ ವ್ಯವಹರಣೆಗಳನ್ನು ಯಾವುದೇ ಕ್ರಿಮಿನಲ್ ನ್ಯಾಯಾಲಯದಲ್ಲಿ ಯಾವನೇ ವ್ಯಕ್ತಿಯ ವಿರುದ್ಧ ಹೂಡಲಾಗಿದ್ದರೆ, ಆಗ ರಾಜಿಯ ನಿಬಂಧನೆಗಳನ್ನು ಕಾರ್ಯಗತಗೊಳಿಸಿದ ಮೇಲೆ ಆ ರಾಜಿಯನ್ನು ಖುಲಾಸೆ ಎಂದು ಗ್ರಹಿಸತಕ್ಕುದು ಮತ್ತು ಯಾವುದೇ ಸಂದರ್ಭದಲ್ಲಿ ಅದೇ ಸಂಗತಿಗಳಿಗೆ ಸಂಬಂಧಿಸಿದಂತೆ ಅಂಥ ವ್ಯಕ್ತಿ ಅಥವಾ ಅಂಥ ವ್ಯಕ್ತಿಯ ಯಾವುದೇ ಸ್ವತ್ತಿನ ವಿರುದ್ಧ ಯಾವುದೇ ಹೆಚ್ಚಿನ ವ್ಯವಹರಣೆಗಳನ್ನು ತೆಗೆದುಕೊಳ್ಳತಕ್ಕುದಲ್ಲ.

## ಅಧ್ಯಾಯ IX

### ಸಂಕೀರ್ಣ

**61. ಪುನರೀಕ್ಷಣೆ.–** ರಾಜ್ಯಸರ್ಕಾರವು, ಡೆಪ್ಯುಟಿ ಕಮಿಷನರ್ ಅಥವಾ ಹೆದ್ದಾರಿ ಪ್ರಾಧಿಕಾರ ಅಥವಾ ಡೆಪ್ಯುಟಿ ಕಮಿಷನರ್ ಅಥವಾ ಹೆದ್ದಾರಿ ಪ್ರಾಧಿಕಾರಕ್ಕೆ ಅಧೀನನಾದ ಯಾವನೇ ಅಧಿಕಾರಿಯು ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಆದೇಶ ಅಥವಾ ತೆಗೆದುಕೊಂಡ ವ್ಯವಹರಣೆಗೆ ಸಂಬಂಧಪಟ್ಟ ದಾಖಲೆಗಳನ್ನು ಅಂಥ ಆದೇಶ ಅಥವಾ ವ್ಯವಹರಣೆಗಳು ಕಾನೂನು ಸಮ್ಮತತೆ ಅಥವಾ ಸರಿತನದ ಬಗ್ಗೆ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಯಾವುದೇ ಕಾಲದಲ್ಲಿ ತರಿಸಿಕೊಳ್ಳಬಹುದು ಮತ್ತು ಅವುಗಳನ್ನು ಪರೀಕ್ಷಿಸಬಹುದು ಮತ್ತು ಅದು ಸೂಕ್ತವೆಂದು ಯೋಚಿಸುವಂತೆ ಅದಕ್ಕೆ ಸಂಬಂಧಿಸಿದಂತೆ ಅಂಥ ಆದೇಶವನ್ನು ಮಾಡಬಹುದು:

ಪರಂತು, ಯಾವುದೇ ಆದೇಶವನ್ನು ಹಿತಾಸಕ್ತಿ ಹೊಂದಿರುವ ಪಕ್ಷಕಾರನಿಗೆ ನೋಟೀಸನ್ನು ಜಾರಿ ಮಾಡಿದ್ದ ಮತ್ತು ಅಹವಾಲು ಕೇಳುವುದಕ್ಕಾಗಿ ಅವನಿಗೆ ಅವಕಾಶ ಕೊಟ್ಟಿದ್ದ ಹೊರತು ಯಾವುದೇ ಮಾರ್ಪಾಟು ಮಾಡತಕ್ಕುದಲ್ಲ, ರದ್ದುಗೊಳಿಸತಕ್ಕುದಲ್ಲ ಅಥವಾ ವಿಪರ್ಯಯ ಗೊಳಿಸತಕ್ಕುದಲ್ಲ.

**62. ಪೊಲೀಸರ ಅಧಿಕಾರಗಳು ಮತ್ತು ಕರ್ತವ್ಯಗಳು.–** ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯು ತಕ್ಷಣ ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಕ್ಕೆ ವಿರುದ್ಧವಾಗಿ ಮಾಡಲಾಗಿರುವಂಥ ಅವನ ತಿಳುವಳಿಕೆಗೆ ಬರುವ ಯಾವುದೇ ಅಪರಾಧದ ಬಗ್ಗೆ ಮಾಹಿತಿಯನ್ನು ಅತಿ ಸಮೀಪದ ಹೆದ್ದಾರಿ ಪ್ರಾಧಿಕಾರ ಅಥವಾ ಹೆದ್ದಾರಿ ಪ್ರಾಧಿಕಾರಕ್ಕೆ ಅಧೀನನಾದ ಅತಿ ಸಮೀಪದಲ್ಲಿರುವ ಅಧಿಕಾರಿಗೆ ಒದಗಿಸತಕ್ಕುದು ಮತ್ತು ಅವನು ಕಾನೂನು ಸಮ್ಮತ ಅಧಿಕಾರವನ್ನು ಚಲಾಯಿಸುವಲ್ಲಿ ಹೆದ್ದಾರಿ ಪ್ರಾಧಿಕಾರ ಮತ್ತು ಅದರ ಅಧಿಕಾರಿಗಳು ಮತ್ತು ನೌಕರರಿಗೆ ಸಹಾಯ ಮಾಡಲು ಬದ್ಧನಾಗಿರತಕ್ಕುದು.

**63. ಗ್ರಾಮ ಅಧಿಕಾರಿಗಳ ಕರ್ತವ್ಯಗಳು.–** ಪ್ರತಿಯೊಬ್ಬ ಗ್ರಾಮದ ಮುಖ್ಯಸ್ಥ, ಗ್ರಾಮ ಲೆಕ್ಕಿಗ, ಗ್ರಾಮ ಕಾವಲುಗಾರ ಅಥವಾ ಯಾವುದೇ ಹೆಸರಿನಿಂದ ಕರೆಯಲಾಗುವ ಇತರ ಗ್ರಾಮ ಅಧಿಕಾರಿಯು, ತಕ್ಷಣವೇ ಯಾವುದೇ ಹೆದ್ದಾರಿಯ ಯಾವುದೇ ಮೋಜಣಿ ಗುರುತು ಅಥವಾ ಯಾವುದೇ ಗಡಿ ಗುರುತು ಅಥವಾ ಹೆದ್ದಾರಿಗೆ ಸಂಬಂಧಿಸಿದಂತೆ ನಿರ್ಧರಿಸಿದ ಕಟ್ಟಡ ಅಥವಾ ನಿಯಂತ್ರಣ ರೇಖೆಯನ್ನು ತೋರಿಸುವ ಯಾವುದೇ ಗುರುತನ್ನು ನಾಶಪಡಿಸಿರುವುದು, ಹಾನಿಗೊಳಿಸಿರುವುದು, ತೆಗೆದುಹಾಕಿರುವುದು, ಸ್ಥಳಾಂತರಿಸಿರುವುದು ಅಥವಾ ಅನ್ಯಥಾ ಕೆಡಿಸಿರುವುದು ಅಥವಾ ಯಾವುದೇ ಹೆದ್ದಾರಿಗೆ ಯಾವುದೇ ಹಾನಿ ಅಥವಾ ಯಾವುದೇ ಹೆದ್ದಾರಿಯ ಮೇಲೆ ಒತ್ತುವರಿಯನ್ನು ಮಾಡಲಾಗಿರುವುದು ಅವನಿಗೆ ತಿಳಿದುಬಂದಾಗಲೆಲ್ಲ ಅತಿ ಸಮೀಪದ ಪೊಲೀಸ್ ಠಾಣೆ ಅಥವಾ ಅತಿ ಸಮೀಪದ ಹೆದ್ದಾರಿ ಪ್ರಾಧಿಕಾರ ಅಥವಾ ಹೆದ್ದಾರಿ ಪ್ರಾಧಿಕಾರವು ಕ್ರಮಬದ್ಧವಾಗಿ ಅಧಿಕೃತಗೊಳಿಸಿದ ಯಾವನೇ ಅಧಿಕಾರಿಗೆ ತಿಳಿಸತಕ್ಕುದು.

**64. ರಸ್ತೆಯ ಉದ್ದೇಶಗಳಿಗಾಗಿ ಅಲ್ಲದೆ ಇತರ ಉದ್ದೇಶಗಳಿಗೆ ಹೆದ್ದಾರಿಯನ್ನು ಉಪಯೋಗಿಸುವ ಅಧಿಕಾರ.–** ಹೆದ್ದಾರಿ ಪ್ರಾಧಿಕಾರವು, ಸಂಚಾರ ಮಾಡುವುದಕ್ಕಾಗಿ ಕೂಡಲೇ ಅಗತ್ಯವಿಲ್ಲದೆ ಇರುವಂಥ ಹೆದ್ದಾರಿಯ ಭಾಗವಾಗಿರುವ ಭೂಮಿಯನ್ನು ರಸ್ತೆಯ ಉದ್ದೇಶಗಳಿಗಲ್ಲದೆ ಇತರ ಉದ್ದೇಶಗಳಿಗಾಗಿ ತಾತ್ಕಾಲಿಕವಾಗಿ ಉಪಯೋಗಿಸಬಹುದು.

**65. ಕ್ಷಿಪ್ರ ಹೊರಹಾಕುವಿಕೆ.–** ಯಾವನೇ ವ್ಯಕ್ತಿಯು, ಉದ್ದೇಶಪೂರ್ವಕವಾಗಿ,–

(ಎ) ಹೆದ್ದಾರಿಯ ಭಾಗವಾಗಿರುವಂಥ;

(ಬಿ) ಯಾವುದರ ಆಕ್ರಮಣವು ಈ ಅಧಿನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸುವುದೋ ಮತ್ತು ಸದರಿ ಉಪಬಂಧದಲ್ಲಿ ಅಂಥ ವ್ಯಕ್ತಿಯನ್ನು ಹೊರಹಾಕುವುದಕ್ಕಾಗಿ ಉಪಬಂಧಿಸಿಲ್ಲವೋ ಆ ಯಾವುದೇ ಭೂಮಿಯನ್ನು ಅಕ್ರಮವಾಗಿ ಆಕ್ರಮಿಸಿರುವ ಯಾವನೇ ವ್ಯಕ್ತಿಯನ್ನು ಹೆದ್ದಾರಿ ಪ್ರಾಧಿಕಾರವು ಅಥವಾ ರಾಜ್ಯ ಸರ್ಕಾರವು ಈ ಬಗ್ಗೆ ಅಧಿಕೃತಗೊಳಿಸಿದ ಯಾವನೇ ಅಧಿಕಾರಿಯು ಹಾಗೆ ಮಾಡಲು ಅಗತ್ಯಪಡಿಸಿದ ಮೇಲೆ ನಿಯಮಿಸಿದ ರೀತಿಯಲ್ಲಿ ಡೆಪ್ಯುಟಿ ಕಮಿಷನರ್‌ನು ಕ್ಷಿಪ್ರವಾಗಿ ಹೊರಹಾಕತಕ್ಕುದು.

**66. ವಿಚಾರಣೆಗಳು.–** (1) ಹೆದ್ದಾರಿ ಪ್ರಾಧಿಕಾರ ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿಯು, ಈ ಅಧಿನಿಯಮದ ಉದ್ದೇಶಗಳಿಗಾಗಿ ಯಾವುದೇ ವಿಚಾರಣೆಯನ್ನು ಮಾಡಲು ಅವನು ಇಚ್ಛಿಸಿದರೆ ನಿಯಮಿಸಿದ ರೀತಿಯಲ್ಲಿ ಆ ವಿಚಾರಣೆಯನ್ನು ಮಾಡತಕ್ಕುದು.

(2) ಹೆದ್ದಾರಿ ಪ್ರಾಧಿಕಾರ ಮತ್ತು ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರ ಅಥವಾ ಹೆದ್ದಾರಿ ಪ್ರಾಧಿಕಾರವು ಅಧಿಕೃತಗೊಳಿಸಿದ ಅಧಿಕಾರಿಯು, (1)ನೇ ಉಪ-ಪ್ರಕರಣದ ಮೇರೆಗಿನ ವಿಚಾರಣೆಯ ಉದ್ದೇಶಕ್ಕಾಗಿ ಪ್ರಮಾಣದ ಮೇಲೆ ಸಾಕ್ಷ್ಯವನ್ನು ತೆಗೆದುಕೊಳ್ಳಲು ಮತ್ತು ಪಕ್ಷಕಾರನನ್ನಾಗಿ ಪರೀಕ್ಷಿಸುವುದಕ್ಕೆ ಅಥವಾ ಸಾಕ್ಷಿದಾರನಾಗಿ ಸಾಕ್ಷ್ಯವನ್ನು ಕೊಡಲು ಅಥವಾ ದಸ್ತಾವೇಜುಗಳನ್ನು

ಹಾಜರುಪಡಿಸಲು ಯಾರ ಹಾಜರಾತಿಯನ್ನು ಅವನು ಅವಶ್ಯವೆಂದು ಪರ್ಯಾಲೋಚಿಸುವನೋ ಆ ಯಾವನೇ ವ್ಯಕ್ತಿಯನ್ನು ಕರೆಯಲು ಅಧಿಕಾರವನ್ನು ಹೊಂದಿರತಕ್ಕುದು.

(3) (2)ನೇ ಉಪ-ಪ್ರಕರಣದ ಮೇರೆಗೆ ಕರೆಯಲಾದ ಯಾವನೇ ವ್ಯಕ್ತಿಯು ಖುದ್ದಾಗಿಯೇ ಆಗಲಿ ಅಥವಾ ಸಮನಿನಲ್ಲಿ ನಿರ್ದೇಶಿಸಿದಂತೆ ಅಧಿಕೃತಗೊಳಿಸಿದ ಏಜೆಂಟನ ಮೂಲಕವೇ ಆಗಲಿ ಹಾಜರಾಗಲು ಬದ್ಧನಾಗಿರತಕ್ಕುದು:

ಪರಂತು, ಸಿವಿಲ್ ಪ್ರಕ್ರಿಯ ಸಂಹಿತೆಯ, 1908ರ 132ನೇ ಮತ್ತು 133ನೇ ಪ್ರಕರಣಗಳ ಮೇರೆಗಿನ ವಿನಾಯಿತಿಗಳು ಈ ಅಧಿನಿಯಮದ ಮೇರೆಗೆ ಹಾಜರಾತಿಗಾಗಿನ ಅಗತ್ಯತೆಗಳಿಗೆ ಅನ್ವಯವಾಗತಕ್ಕುದು.

(4) ಪಕ್ಷಕಾರನಾಗಿ ಪರೀಕ್ಷಿಸುವುದಕ್ಕಾಗಲಿ ಅಥವಾ ಸಾಕ್ಷಿದಾರನೆಂದು ಸಾಕ್ಷ್ಯವನ್ನು ಕೊಡಲು (2)ನೇ ಉಪ-ಪ್ರಕರಣದ ಮೇರೆಗೆ ಕರೆಯಲಾದ ಪ್ರತಿಯೊಬ್ಬ ವ್ಯಕ್ತಿಯು -

(i) ಯಾವ ವಿಷಯಕ್ಕೆ ಸಂಬಂಧಿಸಿದಂತೆ ಅವನನ್ನು ಪರೀಕ್ಷಿಸಲಾಗುವುದೋ ಅಥವಾ ಹೇಳಿಕೆಯನ್ನು ಮಾಡುತ್ತಾನೋ ಆ ಯಾವುದೇ ವಿಷಯದ ಬಗ್ಗೆ ಸತ್ಯವನ್ನು ಹೇಳಲು; ಅಥವಾ

(ii) ಅಗತ್ಯಪಡಿಸಬಹುದಾದಂಥ ದಸ್ತಾವೇಜುಗಳನ್ನು ಹಾಜರುಪಡಿಸಲು

- ಬದ್ಧನಾಗಿರತಕ್ಕುದು.

(5) ದಸ್ತಾವೇಜನ್ನು ಹಾಜರುಪಡಿಸಲು ಮಾತ್ರ ಕರೆಯಲಾದ ಯಾವನೇ ವ್ಯಕ್ತಿಯು, ಅದನ್ನು ಹಾಜರುಪಡಿಸಲು ಖುದ್ದಾಗಿ ಹಾಜರಾಗುವುದಕ್ಕೆ ಬದಲು ಅಂಥ ದಸ್ತಾವೇಜು ತಲುಪುವಂತೆ ಮಾಡಿದರೆ ಸಮನನ್ನು ಪಾಲಿಸಿರುವುದಾಗಿ ಭಾವಿಸತಕ್ಕುದು.

**67. 8ನೇ ಪ್ರಕರಣದ ಮೇರೆಗೆ ಮಾಡಿದ ನಕಾಶೆಯ ಬಗ್ಗೆ ನೋಂದಣಿಯು ಅಗತ್ಯವಿಲ್ಲ.–** (1) ಭಾರತ ನೋಂದಣಿ ಅಧಿನಿಯಮ, 1908 ರಲ್ಲಿ ಇರುವುದು ಯಾವುದೂ, 8ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ನಕಾಶೆಯ ನೋಂದಣಿಯನ್ನು ಅಗತ್ಯಪಡಿಸುವುದೆಂದು ಭಾವಿಸತಕ್ಕುದಲ್ಲ.

(2) ಎಲ್ಲಾ ಅಂಥ ನಕಾಶೆಗಳು ಭಾರತ ನೋಂದಣಿ ಅಧಿನಿಯಮ, 1908ರ 49 ಮತ್ತು 50ನೇ ಪ್ರಕರಣಗಳ ಉದ್ದೇಶಗಳಿಗಾಗಿ ಆ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ನೋಂದಾಯಿತವಾಗಿರುವುದಾಗಿ ಭಾವಿಸತಕ್ಕುದು:

ಪರಂತು, ಆ ನಕಾಶೆಗಳನ್ನು ನಿಯಮಿಸಿದ ರೀತಿಯಲ್ಲಿ ಸಾರ್ವಜನಿಕರು ನೋಡಲು ಅವಕಾಶವಿರತಕ್ಕುದು.

**68. ಕೆಲವು ವ್ಯಕ್ತಿಗಳು ಲೋಕ ನೌಕರರಾಗಿರತಕ್ಕುದು.–** ಹೆದ್ದಾರಿ ಪ್ರಾಧಿಕಾರ, ಈ ಅಧಿನಿಯಮದ ಮೇರೆಗೆ ಅಧಿಕೃತಗೊಳಿಸಿದ ಅಥವಾ ನೇಮಕಗೊಂಡ ಅಧಿಕಾರಿಗಳು ಮತ್ತು ಇತರ ವ್ಯಕ್ತಿಗಳು ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಲೋಕ ನೌಕರರಾಗಿರುವುದಾಗಿ ಭಾವಿಸತಕ್ಕುದು.

**69. ಅಧಿಕಾರ ವ್ಯಾಪ್ತಿಯ ಪ್ರತಿಷೇಧ.–** ಯಾವುದೇ ಸಿವಿಲ್ ನ್ಯಾಯಾಲಯವು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಹೆದ್ದಾರಿ ಪ್ರಾಧಿಕಾರ, ಡೆಪ್ಯುಟಿ ಕಮಿಷನರ್, ಈ ಅಧಿನಿಯಮದ ಮೇರೆಗೆ ಅಧಿಕೃತಗೊಳಿಸಿದ ಅಧಿಕಾರಿ ಅಥವಾ ವ್ಯಕ್ತಿ, 35ನೇ ಅಥವಾ 44ನೇ ಪ್ರಕರಣದ ಮೇರೆಗಿನ ಯಾವುದೇ ಪ್ರಾಧಿಕಾರ ಅಥವಾ ರಾಜ್ಯ ಸರ್ಕಾರವು ಇತ್ಯರ್ಥಪಡಿಸ ಬೇಕೆಂದು, ತೀರ್ಮಾನಿಸಬೇಕೆಂದು ಅಥವಾ ವ್ಯವಹರಿಸಬೇಕೆಂದು ಅಗತ್ಯಪಡಿಸಲಾಗಿರುವಂಥ ಯಾವುದೇ ಪ್ರಶ್ನೆಯನ್ನು ಇತ್ಯರ್ಥಪಡಿಸಲು, ತೀರ್ಮಾನಿಸಲು ಅಥವಾ ವ್ಯವಹರಿಸಲು ಯಾವುದೇ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕುದಲ್ಲ.

**70. ಸದ್ಭಾವನೆಯಿಂದ ಕಾರ್ಯ ನಿರ್ವಹಿಸುವ ವ್ಯಕ್ತಿಗಳ ಸಂರಕ್ಷಣೆ ಮತ್ತು ದಾವೆ ಅಥವಾ ಪ್ರಾಸ್ಯಿಕ್ಯೂಷನ್ ಬಗ್ಗೆ ಕಾಲ ಪರಿಮಿತಿ.–** (1) ಯಾವುದೇ ದಾವೆ ಅಥವಾ ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಈ ಅಧಿನಿಯಮ ಅಥವಾ ಅದರ ಮೇರೆಗೆ ಮಾಡಿದ ನಿಯಮಗಳು ಅಥವಾ ಆದೇಶಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಯಾವನೇ ಲೋಕ ನೌಕರ ಅಥವಾ ಈ ಅಧಿನಿಯಮದ ಮೇರೆಗೆ ಕ್ರಮಬದ್ಧವಾಗಿ ಅಧಿಕೃತಗೊಳಿಸಿದ ಅಧಿಕಾರಿ ಅಥವಾ ವ್ಯಕ್ತಿಗಳ ವಿರುದ್ಧ ಹೂಡತಕ್ಕುದಲ್ಲ.

(2) ಯಾವುದೇ ದಾವೆ ಅಥವಾ ಪ್ರಾಸಿಕ್ಯೂಷನನ್ನು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯನ್ನು ಪಡೆದ ಹೊರತು ಈ ಅಧಿನಿಯಮದ ಮೇರೆಗೆ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಯಾವನೇ ಲೋಕ ನೌಕರ ಅಥವಾ ಈ ಅಧಿನಿಯಮದ ಮೇರೆಗೆ ಕ್ರಮಬದ್ಧವಾಗಿ ಅಧಿಕೃತಗೊಳಿಸಿದ ಯಾವನೇ ಅಧಿಕಾರಿ ಅಥವಾ ವ್ಯಕ್ತಿಯ ವಿರುದ್ಧ ಹೂಡತಕ್ಕುದಲ್ಲ.

**71. ನೋಟೀಸುಗಳು ಮತ್ತು ಬಿಲ್ಲುಗಳ ಜಾರಿ.–** (1) ಈ ಅಧಿನಿಯಮದ ಮೇರೆಗೆ ಹೊರಡಿಸಿದ ಅಥವಾ ತಯಾರಿಸಿದ ಪ್ರತಿಯೊಂದು ನೋಟೀಸು ಅಥವಾ ಬಿಲ್ಲನ್ನು–

(ಎ) ಯಾರ ವಿಳಾಸ ಬರೆಯಲಾಗಿದೆಯೋ ಆ ವ್ಯಕ್ತಿಗೆ ಅಥವಾ ಅವನ ಪ್ರತಿನಿಧಿಗೆ ಅದನ್ನು ತಲುಪಿಸುವ ಅಥವಾ ಕೊಡುವ ಮೂಲಕ ಅಥವಾ ನೋಂದಾಯಿತ ಅಂಚೆಯ ಮೂಲಕ ಕಳುಹಿಸುವ ಮೂಲಕ; ಅಥವಾ

(ಬಿ) ಅಂಥ ವ್ಯಕ್ತಿ ಅಥವಾ ಅವನ ಪ್ರತಿನಿಧಿಯು ಸಿಕ್ಕದಿದ್ದರೆ ಆಗ ಅದನ್ನು ಅವನ ಮಾಮೂಲಿ ಅಥವಾ ಕೊನೆಯದಾಗಿ ತಿಳಿದುಬಂದ ವಾಸಸ್ಥಳದಲ್ಲಿ ಇಡುವ ಮೂಲಕ ಅಥವಾ ಅವನ ಕುಟುಂಬದ ಯಾವನೇ ವಯಸ್ಕ ಪುರುಷ ಸದಸ್ಯನಿಗೆ ಅದನ್ನು ತಲುಪಿಸುವ ಅಥವಾ ಕೊಡುವ ಮೂಲಕ ಅಥವಾ ಅದು ಯಾವುದಕ್ಕೆ ಸಂಬಂಧಪಟ್ಟಿದೆಯೋ ಆ ಕಟ್ಟಡ ಅಥವಾ ಭೂಮಿ ಯಾವುದಾದರೂ ಇದ್ದರೆ ಅದರ ಯಾವುದಾದರೂ ಎದ್ದು ಕಾಣುವ ಭಾಗದಲ್ಲಿ ಅದನ್ನು ಅಂಟಿಸುವಂತೆ ಮಾಡುವ ಮೂಲಕ

– ಜಾರಿಗೊಳಿಸಬಹುದು ಅಥವಾ ಸಲ್ಲಿಸಬಹುದು.

(2) ಈ ಅಧಿನಿಯಮದ ಮೇರೆಗಿನ ನೋಟೀಸನ್ನು ಕಟ್ಟಡ ಅಥವಾ ಭೂಮಿಯ ಒಡೆಯ ಅಥವಾ ಅಧಿಭೋಗದಾರನಿಗೆ ಜಾರಿಗೊಳಿಸಬೇಕೆಂದು ಅಗತ್ಯಪಡಿಸಿರುವಲ್ಲಿ ಆ ಒಡೆಯ ಅಥವಾ ಅಧಿಭೋಗದಾರನನ್ನು ಹೆಸರಿಸುವುದು ಅವಶ್ಯವಾಗಿರತಕ್ಕುದಲ್ಲ, ಮತ್ತು ಅದರ ಜಾರಿಯನ್ನು,–

(ಎ) ಒಡೆಯನಿಗೆ ಅಥವಾ ಅಧಿಭೋಗದಾರನಿಗೆ ಅಥವಾ ಒಬ್ಬನಿಗಿಂತ ಹೆಚ್ಚು ಒಡೆಯರು ಅಥವಾ ಅಧಿಭೋಗದಾರರು ಇದ್ದರೆ ಅವರಲ್ಲಿ ಯಾವುದೇ ಒಬ್ಬನಿಗೆ ನೋಟೀಸನ್ನು ತಲುಪಿಸುವ ಅಥವಾ ಕೊಡುವ ಮೂಲಕ ಅಥವಾ ಅದನ್ನು ನೋಂದಾಯಿತ ಅಂಚೆಯ ಮೂಲಕ ಕಳುಹಿಸುವ ಮೂಲಕ; ಅಥವಾ

(ಬಿ) ಅಂಥ ಯಾವನೇ ಒಡೆಯ ಅಥವಾ ಅಧಿಭೋಗದಾರನು ಸಿಕ್ಕದಿದ್ದರೆ, ಆಗ ಅವನ ಕುಟುಂಬದ ವಯಸ್ಕ ಪುರುಷ ಸದಸ್ಯನಿಗೆ ಅಥವಾ ನೌಕರನಿಗೆ ನೋಟೀಸನ್ನು ಕೊಡುವ ಅಥವಾ ನೀಡುವ ಮೂಲಕ ಅಥವಾ ಅದು ಯಾವುದಕ್ಕೆ ಸಂಬಂಧಪಟ್ಟಿದೆಯೋ ಆ ಕಟ್ಟಡ ಅಥವಾ ಭೂಮಿ ಯಾವುದಾದರೂ ಇದ್ದರೆ ಅದರ ಎದ್ದು ಕಾಣುವ ಭಾಗದಲ್ಲಿ ನೋಟೀಸನ್ನು ಅಂಟಿಸುವ ಮೂಲಕ

– ಮಾಡತಕ್ಕುದು.

(3) ನೋಟೀಸು ಅಥವಾ ಬಿಲ್ಲನ್ನು ಯಾರಿಗೆ ಜಾರಿ ಮಾಡಬೇಕಾಗಿದೆಯೋ ಆ ಯಾವನೇ ವ್ಯಕ್ತಿಯು ಅಪ್ರಾಪ್ತ ವಯಸ್ಕನಾಗಿದ್ದರೆ ಅವನ ಪಾಲಕ ಅಥವಾ ಅವನ ಕುಟುಂಬದ ವಯಸ್ಕ ಪುರುಷ

ಸದಸ್ಯ ಅಥವಾ ನೌಕರನಿಗೆ ಅದನ್ನು ಜಾರಿಮಾಡಿದಾಗ ಅಪ್ರಾಪ್ತ ವಯಸ್ಕನಿಗೆ ಜಾರಿಮಾಡಿರುವುದಾಗಿ ಭಾವಿಸತಕ್ಕುದು.

**72. ನಿಯಮ ರಚನಾಧಿಕಾರ.–** (1) ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಮತ್ತು ಪೂರ್ವಪ್ರಕಟಣೆಯ ಷರತ್ತಿಗೊಳಪಟ್ಟು ಈ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉದ್ದೇಶವನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ರಾಜ್ಯ ಸರ್ಕಾರವು ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಕ್ಕಾಗಿ ನಿಯಮಗಳನ್ನು ರಚಿಸಬಹುದು.

(ಎ) 7ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಗ್ರಾಮದಲ್ಲಿ ಮತ್ತು ತಾಲ್ಲೂಕಿನ ಕೇಂದ್ರ ಸ್ಥಳದಲ್ಲಿ ಅಧಿಸೂಚನೆಯನ್ನು ಪ್ರಕಟಿಸಬಹುದಾದಂಥ ರೀತಿ;

(ಬಿ) 8ನೇ ಪ್ರಕರಣದ ಮೇರೆಗೆ ನಕಾಶೆಗಳ ಪ್ರತಿಗಳು ಪರಿಶೀಲನೆಗೆ ಮುಕ್ತವಾಗಿರಬೇಕಾದಂಥ ಇತರ ಸ್ಥಳಗಳು;

(ಸಿ) 9ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗಿನ ಅರ್ಜಿಯ ನಮೂನೆ ಮತ್ತು ಅದರ ಒಳಾಂಶಗಳು;

(ಡಿ) 15ನೇ ಪ್ರಕರಣದ ಮೇರೆಗೆ ಆ ಅಧಿಸೂಚನೆಯನ್ನು ಪ್ರಕಟಿಸುವ ಇತರ ರೀತಿ;

(ಇ) ಯಾವ ಷರತ್ತುಗಳ ಮೇಲೆ ಮತ್ತು ಯಾವ ಬಾಡಿಗೆ ಅಥವಾ ಚಾರ್ಜನ್ನು ಸಂದಾಯ ಮಾಡಿದ ಮೇಲೆ ಹೆದ್ದಾರಿಯ ಮೇಲೆ ಒತ್ತುವರಿಗಳನ್ನು ಮಾಡಬಹುದೋ ಆ ಷರತ್ತುಗಳು ಮತ್ತು ಆ ಬಾಡಿಗೆಯ ಅಥವಾ ಚಾರ್ಜಿನ ಮೊಬಲಗು;

(ಎಫ್) 35ನೇ ಅಥವಾ 44ನೇ ಪ್ರಕರಣದ ಮೇರೆಗೆ ಪರಾಮರ್ಶೆಗೆ ಒಪ್ಪಿಸಬೇಕಾದಂಥ ರೀತಿ;

(ಜಿ) 47ನೇ ಪ್ರಕರಣದ ಮೇರೆಗೆ ಪುರೋಭಿವೃದ್ಧಿ ವೆಚ್ಚಗಳನ್ನು ಮತ್ತು ಸದರಿ ಪ್ರಕರಣದ ಪರಂತುಕದ ಮೇರೆಗೆ ಬಡ್ಡಿಯ ದರದೊಂದಿಗೆ ಕಂತುಗಳನ್ನು ಸಂದಾಯ ಮಾಡತಕ್ಕಂಥ ದಿನಾಂಕದ ಮತ್ತು ಯಾವ ಅವಧಿಯೊಳಗೆ ಅಂತ ಕಂತುಗಳನ್ನು ಸಂದಾಯ ಮಾಡತಕ್ಕುದೋ ಆ ಅವಧಿಯನ್ನು ನಿಗದಿಪಡಿಸುವುದು;

(ಹೆಚ್) 48ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರದ ಹೆಸರಿಗೆ ವಿನಿಮಯದಲ್ಲಿ ಯಾವ ಷರತ್ತುಗಳ ಮೇಲೆ ಯಾವುದೇ ಭೂಮಿಯನ್ನು ಬಿಟ್ಟುಕೊಡಬಹುದೋ ಅಥವಾ ವಶಕ್ಕೆ ಒಪ್ಪಿಸಬಹುದೋ ಆ ಷರತ್ತುಗಳು;

(ಐ) ಯಾವ ನಿಯಮಗಳಿಗೆ ಒಳಪಟ್ಟು 50ನೇ ಪ್ರಕರಣದ ಮೇರೆಗೆ ಯಾವುದೇ ಹೆದ್ದಾರಿ ಅಥವಾ ಅದರ ಭಾಗವನ್ನು ಸಂಚಾರಕ್ಕೆ ಅಥವಾ ಸಂಚಾರದ ಯಾವುದೇ ವರ್ಗಕ್ಕೆ ಮುಚ್ಚಬಹುದೋ ಅಥವಾ ಆ ಹೆದ್ದಾರಿಯನ್ನು ಉಪಯೋಗಿಸುವ ವಾಹನಗಳ ಸಂಖ್ಯೆ ಮತ್ತು ವೇಗ ಅಥವಾ ಭಾರವನ್ನು ನಿಯಂತ್ರಿಸಬಹುದೋ ಆ ನಿಯಮಗಳು;

(ಜೆ) 51ನೇ ಪ್ರಕರಣದ ಮೇರೆಗೆ ಯಾವ ನಿಯಮಗಳಿಗೆ ಒಳಪಟ್ಟು ವಾಹನಗಳ ಓಡಾಟವನ್ನು ನಿಷೇಧಿಸಬಹುದೋ ಆ ನಿಯಮಗಳು;

(ಕೆ) ಹೆದ್ದಾರಿಗಳನ್ನು ಉಪಯೋಗಿಸುವ ವ್ಯಕ್ತಿಗಳ ದೃಷ್ಟಿಗೆ ಅಡ್ಡಿ ಉಂಟುಮಾಡುವುದನ್ನು ಮತ್ತು ಸಾರ್ವಜನಿಕರಿಗೆ ಕಿರುಕುಳ, ಅಪಾಯ ಅಥವಾ ಕ್ಷತಿಯನ್ನು ನಿವಾರಿಸುವುದು;

(ಎಲ್) ಹೆದ್ದಾರಿಗಳ ಮೇಲೆ ಅಥವಾ ಅವುಗಳ ಸಮೀಪ ಅಡೆತಡೆ, ಒತ್ತುವರಿ ಮತ್ತು ಉಪದ್ರವ ಮತ್ತು ಅವುಗಳಿಗೆ ಉಂಟಾಗುವ ಹಾನಿಯನ್ನು ನಿವಾರಿಸುವುದು;

(ಎಂ) ಹೆದ್ದಾರಿಗಳ ಗಡಿಗಳು ಮತ್ತು ಕಟ್ಟಡ ಮತ್ತು ನಿಯಂತ್ರಣ ರೇಖೆಗಳ ಗಡಿ ಗುರುತುಮಾಡುವ ಗಡಿ ಗುರುತುಗಳ ಸರಿಯಾದ ನಿರ್ವಹಣೆ;

(ಎನ್) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಿಕೊಳ್ಳಬೇಕೆಂದು ಅಗತ್ಯಪಡಿಸಿದ ಅರ್ಜಿಗಳ ವಿವಿಧ ನಮೂನೆಗಳು ಮತ್ತು ವ್ಯಕ್ತಿಗಳಿಗೆ ಜಾರಿ ಮಾಡಬೇಕೆಂದು ಅಗತ್ಯಪಡಿಸಿದ ನೋಟೀಸುಗಳು ಮತ್ತು ಬಿಲ್ಲುಗಳ ನಮೂನೆಗಳು, ನಕಾಶೆಗಳ ಪ್ರತಿಗಳನ್ನು ಸರಬರಾಜು ಮಾಡುವುದಕ್ಕಾಗಿ ವಿಧಿಸಬೇಕಾದ ಚಾರ್ಜುಗಳು ಮತ್ತು ವಿಧಿಸಬೇಕಾದ ಮತ್ತು ಸಂಗ್ರಹಿಸಬೇಕಾದ ಬಾಡಿಗೆ ಅಥವಾ ಇತರ ಚಾರ್ಜುಗಳು

- ಇವುಗಳನ್ನು ನಿಯಮಿಸುವುದು;

(ಓ) ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಹೆದ್ದಾರಿ ಪ್ರಾಧಿಕಾರದ ಸಾಮಾನ್ಯ ಮಾರ್ಗದರ್ಶನ;

(ಪಿ) ಅಸ್ತಿತ್ವದಲ್ಲಿರುವ ಪ್ರವೇಶದ ಹಕ್ಕುಗಳ ನಿಯಂತ್ರಣ ಅಥವಾ ಪಲ್ಲಟಗಳು;

(ಕ್ಯೂ) 65ನೇ ಪ್ರಕರಣ ಅಥವಾ 66ನೇ ಪ್ರಕರಣದ ಮೇರೆಗೆ ವಿಚಾರಣೆಯನ್ನು ನಡೆಸುವ ರೀತಿ;

(ಆರ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ.

**73. ಉಳಿಸುವಿಕೆಗಳು.–** (1) ಈ ಪ್ರಕರಣದ ಉಪಬಂಧಗಳಿಗೊಳಪಟ್ಟು, ಈ ಅಧಿನಿಯಮದಲ್ಲಿ ಇರುವುದು ಯಾವುದೂ–

(ಎ) ಯಾವುದೇ ಗ್ರಾಮಸಾರ, ಚರಂಡಿ, ಜಲಮಾರ್ಗ ಅಥವಾ ಇತರ ಕಾಮಗಾರಿಯನ್ನು ಅನುಗೊಳಿಸುವ, ಮಾಡುವ, ಬದಲಾಯಿಸುವ, ದುರಸ್ತಿಮಾಡುವ ಅಥವಾ ನವೀಕರಿಸುವ ಉದ್ದೇಶಕ್ಕಾಗಿ ಯಾವುದೇ ಅಗೆತವನ್ನು ಮಾಡುವುದಕ್ಕೆ ಯಾವುದೇ ಸ್ಥಳೀಯ ಪ್ರಾಧಿಕಾರದ ಹಕ್ಕುಗಳು; ಅಥವಾ

(ಬಿ) ಯಾವುದೇ ಮೈನು, ಪೈಪು, ತೂಬು, ಕೋಡಿ, ವಿದ್ಯುತ್ ಮಾರ್ಗ, ಕೊಳಾಯಿ, ಚರಂಡಿ ಅಥವಾ ಇತರ ಉಪಕರಣಗಳನ್ನು ಅನುಗೊಳಿಸುವ, ಮಾಡುವ, ಬದಲಾಯಿಸುವ, ದುರಸ್ತಿಮಾಡುವ ಅಥವಾ ನವೀಕರಿಸುವ ಉದ್ದೇಶಕ್ಕಾಗಿ ಯಾವುದೇ ಆಸರೆಯನ್ನು ನಿರ್ಮಿಸಲು ಅಥವಾ ಯಾವುದೇ ಅಗೆತವನ್ನು ಮಾಡಲು ನೀರು, ವಿದ್ಯುಚ್ಛಕ್ತಿ, ರೈಲ್ವೆಗಳು ಅಥವಾ ಟ್ರಾಲಿ ವಾಹನಗಳಿಗಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ನೇಮಕಗೊಂಡ ಯಾವುದೇ ಪ್ರಾಧಿಕಾರದ ಹಕ್ಕುಗಳು; ಅಥವಾ

(ಸಿ) ರೈಲ್ವೆ ಆಡಳಿತಕ್ಕೆ ಸೇರಿದ ಅಥವಾ ಅವರು ಅದಕ್ಕೆ ಸಮ್ಮತಿಸಬಹುದಾದಷ್ಟರಮಟ್ಟಿಗೆ ಹೊರತು ಅದರ ರೈಲ್ವೆಯ ಉದ್ದೇಶಕ್ಕಾಗಿ ಅಥವಾ ವಿದ್ಯುಚ್ಛಕ್ತಿಯ ಉತ್ಪಾದನೆ, ಪರಿವರ್ತನೆ ಅಥವಾ ವಿತರಣೆಗಾಗಿ ಸಂದರ್ಭಾನುಸಾರ ಅಂಥ ಭೂಮಿಯನ್ನು ಆ ರೈಲ್ವೆ ಆಡಳಿತ ಅಥವಾ ಅಂಥ ವ್ಯಕ್ತಿಯು ಧಾರಣ ಮಾಡಿರುವಾಗ ಅಥವಾ ಉಪಯೋಗಿಸುವಾಗ ಭಾರತ ವಿದ್ಯುಚ್ಛಕ್ತಿ ಅಧಿನಿಯಮ, 1910ರ ಮೇರೆಗೆ ವಿದ್ಯುಚ್ಛಕ್ತಿಯ ಉತ್ಪಾದನೆ, ಪರಿವರ್ತನೆ ಅಥವಾ ವಿತರಣೆಗಾಗಿನ ಲೈಸೆನ್ಸು ಅಥವಾ ಮಂಜೂರಾತಿಯನ್ನು ಧಾರಣ ಮಾಡಿದ ವ್ಯಕ್ತಿಗೆ ಸೇರಿದ ಅಥವಾ ಅವನು ಉಪಯೋಗಿಸಿದ ಯಾವುದೇ ಭೂಮಿ;

(ಡಿ) ದಂಡು ಪ್ರದೇಶದ ಅಥವಾ ಮುಖ್ಯ ಬಂದರೆಂಬುದಾಗಿ ಸಂಸತ್ತು ಮಾಡಿದ ಯಾವುದೇ ಕಾನೂನು ಅಥವಾ ಅಸ್ತಿತ್ವದಲ್ಲಿರುವ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಘೋಷಿಸಿದ ಬಂದರಿನ ಪರಿಮಿತಿಗಳೊಳಗಿನ ಯಾವುದೇ ಭೂಮಿ; ಅಥವಾ

(ಇ) ಕೇಂದ್ರ ಸರ್ಕಾರದ ಆಡಳಿತ ನಿಯಂತ್ರಣದಲ್ಲಿರುವ ಸ್ಥಳೀಯ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗಿನ ಯಾವುದೇ ಭೂಮಿ

– ಇವುಗಳಿಗೆ ಬಾಧಕವನ್ನುಂಟುಮಾಡತಕ್ಕುದಲ್ಲ:

ಪರಂತು,–

(i) ಯಾವುದೇ ರಸ್ತೆಗೆ ಅಥವಾ ಅದರಿಂದ ಪ್ರವೇಶ ಮಾರ್ಗವನ್ನು ನಿರ್ಮಿಸುವುದು, ರೂಪಿಸುವುದು ಅಥವಾ ರೂಪುರೇಖೆಗೊಳಿಸುವುದು ಇವುಗಳ ಬಗ್ಗೆ 9ನೇ ಪ್ರಕರಣದ ಮೇರೆಗೆ ಜಾರಿಯಲ್ಲಿರುವ ಯಾವುದೇ ನಿರ್ಬಂಧವು ಹಿಂದೆ ಹೇಳಿದಂತೆ ಯಾವುದೇ ಅಂಥ ಸಮ್ಮತಿ ಇಲ್ಲದೆ (ಸಿ) ಖಂಡದಲ್ಲಿ ನಿರ್ದಿಷ್ಟಪಡಿಸಿದಂಥ ಭೂಮಿಗೆ, ಅಂಥ ನಿರ್ಬಂಧಗಳು ಹಾಗೆ ನಿರ್ದಿಷ್ಟಪಡಿಸಿದ ಭೂಮಿಯಲ್ಲದ ಭೂಮಿಗೆ ಅಥವಾ ಅದರಿಂದ ಭೂಮಿಯ ಮೇಲೆ ಅಥವಾ ಅದರ ಕೆಳಗೆ ಪ್ರವೇಶ ಮಾರ್ಗಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ವ್ಯಾಪ್ತವಾಗತಕ್ಕುದು; ಮತ್ತು

(ii) ಈ ಪ್ರಕರಣದ ಉದ್ದೇಶಕ್ಕಾಗಿ ಅಗತ್ಯವಾದ ಯಾವುದೇ ಸಮ್ಮತಿಯನ್ನು ಕಾರಣವಿಲ್ಲದೆ ತಡೆಯಿಡಿಯತಕ್ಕುದಲ್ಲ ಮತ್ತು ಹಾಗೆ ಅಗತ್ಯಪಡಿಸಿದ ಸಮ್ಮತಿಯನ್ನು ಕಾರಣವಿಲ್ಲದೆ ತಡೆಹಿಡಿಯಲಾಗಿದೆಯೋ ಅಥವಾ ಇಲ್ಲವೋ ಹೇಗೆ ಎಂಬ ಪ್ರಶ್ನೆಯನ್ನು ರಾಜ್ಯಸರ್ಕಾರವು ನಿರ್ಧರಿಸತಕ್ಕುದು ಮತ್ತು ಆ ಪ್ರಶ್ನೆಯ ಬಗ್ಗೆ ರಾಜ್ಯ ಸರ್ಕಾರದ ನಿರ್ಣಯವು ಅಂತಿಮವಾಗಿರತಕ್ಕುದು.

(2) ಈ ಅಧಿನಿಯಮದಲ್ಲಿ ಇರುವುದು ಯಾವುದೂ, ಭಾರತ ಟೆಲಿಗ್ರಾಫ್ ಅಧಿನಿಯಮ, 1885ರ ಉಪಬಂಧದ ಮೇರೆಗೆ ಟೆಲಿಗ್ರಾಫ್ ಪ್ರಾಧಿಕಾರದ ಯಾವುದೇ ಅಧಿಕಾರಗಳು ಮತ್ತು ಕರ್ತವ್ಯಗಳಿಗೆ ಬಾಧಕವನ್ನುಂಟುಮಾಡತಕ್ಕುದಲ್ಲ.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, [1][ಕರ್ನಾಟಕ][1] ಗೃಹ ನಿರ್ಮಾಣ ಮಂಡಳಿ ಅಧಿನಿಯಮ, 1963ರ ಮೇರೆಗೆ ರಚಿಸಲಾದ [1][ಕರ್ನಾಟಕ][1] ಗೃಹ ನಿರ್ಮಾಣ ಮಂಡಳಿಯನ್ನು ಸ್ಥಳೀಯ ಪ್ರಾಧಿಕಾರವೆಂಬುದಾಗಿ ಭಾವಿಸತಕ್ಕುದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**74. ಈ ಅಧಿನಿಯಮ ಅಥವಾ ನಿಯಮಗಳ ಉಪಬಂಧಗಳು ಇತರ ಕಾನೂನುಗಳಲ್ಲಿನ ಅಸಂಗತ ಉಪಬಂಧಗಳಿಗೆ ಸಂಬಂಧಪಟ್ಟಂತೆ ಮೇಲುಗೈಯಾಗಿರತಕ್ಕುದು.–** 72ನೇ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಹೊರತು, ಯಾವುದೇ ವಿಷಯದ ಬಗ್ಗೆ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳು ರಾಜ್ಯ ವಿಧಾನಮಂಡಲವು ರಚಿಸಿದ ಯಾವುದೇ ಇತರ ಕಾನೂನಿನ ಅಥವಾ ರಾಜ್ಯವಿಧಾನ ಮಂಡಲವು ರಚಿಸಲು ಅಥವಾ ತಿದ್ದುಪಡಿ ಮಾಡಲು ಸಕ್ಷಮವಾಗಿರುವಂಥ ಯಾವುದೇ ಕಾನೂನಿನ ಉಪಬಂಧಗಳಿಗಿಂತಲೂ ಅಂಥ ಕಾನೂನು, ಸದರಿ ಉಪಬಂಧಗಳು ಅಥವಾ ನಿಯಮಗಳಿಗೆ ಅಸಂಗತವಾಗಿರುವಷ್ಟರಮಟ್ಟಿಗೆ ಮೇಲುಗೈಯಾಗಿರತಕ್ಕುದು ಮತ್ತು ಅಂಥ ಕಾನೂನು ಅಂಥ ಅಸಂಗತೆಯಷ್ಟರ ಮಟ್ಟಿಗೆ ಯಾವುದೇ ಅಂಥ ವಿಷಯಕ್ಕೆ ಅನ್ವಯವಾಗುವುದು ನಿಂತುಹೋಗತಕ್ಕುದು ಅಥವಾ ಅನ್ವಯವಾಗತಕ್ಕುದಲ್ಲ.

**75. ರಾಷ್ಟ್ರೀಯ ಹೆದ್ದಾರಿಗಳ ಗುಂಟ ಕಟ್ಟಡ ಮತ್ತು ನಿಯಂತ್ರಣ ರೇಖೆಗಳು.–** ಸಂದೇಹವನ್ನು ನಿವಾರಿಸುವುದಕ್ಕಾಗಿ ಈ ಅಧಿನಿಯಮದಲ್ಲಿ ಇರುವುದು ಯಾವುದೂ, ರಾಷ್ಟ್ರೀಯ ಹೆದ್ದಾರಿಗಳಾಗಿರುವುದಾಗಿ ಸಂಸತ್ತು ಮಾಡಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ

ಮೇರೆಗೆ ಘೋಷಿಸಲಾಗಿರುವ ಅಥವಾ ಘೋಷಿಸಲಾದ ಹೆದ್ದಾರಿಗಳಿಗೆ ಅನ್ವಯವಾಗ ತಕ್ಕುದಲ್ಲವೆಂದು ಈ ಮೂಲಕ ಘೋಷಿಸಲಾಗಿದೆ:

ಪರಂತು, ಯಾವುದೇ ಹೆದ್ದಾರಿಯನ್ನು ಸಂಸತ್ತು ಮಾಡಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ರಾಷ್ಟ್ರೀಯ ಹೆದ್ದಾರಿಯೆಂಬುದಾಗಿ ಘೋಷಿಸಿದ್ದರೆ, ರಾಜ್ಯ ಸರ್ಕಾರಕ್ಕೆ, 7ನೇ ಪ್ರಕರಣದ ಮೇರೆಗೆ ಸದರಿ ಹೆದ್ದಾರಿಯ ಬೇರೆ ಬೇರೆ ಭಾಗಗಳಾಗಿ ಕಟ್ಟಡ ಮತ್ತು ನಿಯಂತ್ರಣ ರೇಖೆಗಳನ್ನು ನಿಗದಿಪಡಿಸಲು ಅಥವಾ ನಿಗದಿಪಡಿಸದೆ ಇರುವುದು ಕಾನೂನು ಸಮ್ಮತವಾಗಿರತಕ್ಕುದು ಮತ್ತು ಆ ತರುವಾಯ ಈ ಅಧಿನಿಯಮದ ಉಪಬಂಧಗಳು, ಅವು ಹೆದ್ದಾರಿ ಗಡಿ ಮತ್ತು ಕಟ್ಟಡ ರೇಖೆಯ ನಡುವಣ ರೇಖೆ ಮತ್ತು ಕಟ್ಟಡ ರೇಖೆ ಮತ್ತು ನಿಯಂತ್ರಣರೇಖೆ ನಡುವಣ ಕಟ್ಟಡಗಳ ಮೇಲಣ ನಿರ್ಬಂಧಗಳಿಗೆ ಅವು ಅನ್ವಯವಾಗುವಷ್ಟರ ಮಟ್ಟಿಗೆ ಮತ್ತು ಅಂಥ ಕಟ್ಟಡ ಮತ್ತು ನಿಯಂತ್ರಣ ರೇಖೆಗಳಿಗೆ ಸಂಬಂಧಪಟ್ಟ ಇತರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕುದು.

**76. ನಿರಸನ.–** ಮುಂಬಯಿ ಹೆದ್ದಾರಿಗಳ ಅಧಿನಿಯಮ, 1955 (ಮುಂಬಯಿ ಅಧಿನಿಯಮ 1955ರLV) ಮತ್ತು ಮೈಸೂರು ಹೆದ್ದಾರಿಗಳ ಅಧಿನಿಯಮ, 1920 (ಮೈಸೂರು ಅಧಿನಿಯಮ 1920 IV) ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

## ಅನುಸೂಚಿ

### (28) (2) ಮತ್ತು 30ನೇ ಪ್ರಕರಣಗಳನ್ನು ನೋಡಿ)

### ಭೂಸ್ವಾಧೀನ (ಅಧಿನಿಯಮ 1894) ಇದಕ್ಕೆ ತಿದ್ದುಪಡಿಗಳು

**1. 1894ರ ಅಧಿನಿಯಮ 1ರ 23ನೇ ಪ್ರಕರಣದ ತಿದ್ದುಪಡಿ.–** ಭೂ ಸ್ವಾಧೀನ ಅಧಿನಿಯಮ, 1894ರ 23ನೇ ಪ್ರಕರಣಕ್ಕೆ ಬದಲಾಗಿ ಈ ಕೆಳಕಂಡುದನ್ನು ಪ್ರತಿಯೋಜಿಸತಕ್ಕುದು, ಎಂದರೆ:–

**"23. ನಷ್ಟಪರಿಹಾರವನ್ನು ನಿರ್ಧರಿಸುವಲ್ಲಿ ಪರ್ಯಾಲೋಚಿಸಬೇಕಾದ ವಿಷಯಗಳು.–** ಈ ಅಧಿನಿಯಮದ ಮೇರೆಗೆ ಆರ್ಜಿಸಿದ ಭೂಮಿ ಅಥವಾ ಅದರಲ್ಲಿನ ಯಾವುದೇ ಹಿತಾಸಕ್ತಿಗಾಗಿ ಕೊಡಬೇಕಾದ ನಷ್ಟಪರಿಹಾರದ ಮೊಬಲಗನ್ನು ನಿರ್ಧರಿಸುವಲ್ಲಿ ಈ ಕೆಳಕಂಡ ವಿಷಯಗಳನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳತಕ್ಕುದು:–

(1) [1][ಕರ್ನಾಟಕ][1] ಹೆದ್ದಾರಿಗಳ ಅಧಿನಿಯಮ, 1964ರ 15ನೇ ಪ್ರಕರಣದ ಮೇರೆಗಿನ ಘೋಷಣೆಯನ್ನು ಪ್ರಕಟಿಸಿದ ದಿನಾಂಕದಲ್ಲಿನ ಮಾರುಕಟ್ಟೆ ಮೌಲ್ಯ;

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ಅಂಥ ಘೋಷಣೆಯ ದಿನಾಂಕದಂದು ಆ ಭೂಮಿಯನ್ನು ಯಾವ ಉಪಯೋಗಕ್ಕೆ ಬಳಸಲಾಗಿತ್ತೊ, ಆ ಉಪಯೋಗ;

(3) ಅವನಿಂದ ಭೂಮಿಯ ಸ್ವಾಧೀನವನ್ನು ತೆಗೆದುಕೊಂಡ ಕಾಲದಲ್ಲಿ ಭೂಮಿಯ ಮೇಲೆ ಇದ್ದಿರಬಹುದಾದಂಥ, ನಿಂತಿರುವ ಬೆಳೆಗಳು ಅಥವಾ ಮರಗಳನ್ನು ತೆಗೆದುಕೊಳ್ಳುವ ಕಾರಣದಿಂದಾಗಿ ಹಿತಾಸಕ್ತಿಯನ್ನು ಹೊಂದಿದ ವ್ಯಕ್ತಿಯು ಅನುಭವಿಸಿದ ಹಾನಿ;

(4) ಅವನಿಂದ ಸ್ವಾಧೀನವನ್ನು ತೆಗೆದುಕೊಳ್ಳುವ ಕಾಲದಲ್ಲಿ ಅವನ ಇತರ ಭೂಮಿಯಿಂದ ಅಂಥ ಭೂಮಿಯನ್ನು ಬೇರ್ಪಡಿಸುವ ಕಾರಣದಿಂದಾಗಿ ಹಿತಾಸಕ್ತಿಯನ್ನು ಹೊಂದಿದ ವ್ಯಕ್ತಿಯು ಅನುಭವಿಸಿದ ಹಾನಿ (ಯಾವುದಾದರೂ ಇದ್ದರೆ) ಅದು;

(5) ಅವನಿಂದ ಆ ಭೂಮಿಯ ಸ್ವಾಧೀನವನ್ನು ತೆಗೆದುಕೊಂಡ ಕಾಲದಲ್ಲಿ ಆರ್ಜನೆಯ ಕಾರಣದಿಂದಾಗಿ ಹಿತಾಸಕ್ತಿಯನ್ನು ಹೊಂದಿದ ವ್ಯಕ್ತಿಯು ಅನುಭವಿಸಿದ ಯಾವುದೇ ಇತರ ರೀತಿಯಲ್ಲಿ ಅವನ ಇತರ ಸ್ವತ್ತು - ಚರ ಅಥವಾ ಸ್ಥಿರ - ಇದನ್ನು ಅಥವಾ ಅವನ ಗಳಿಕೆಗಳಿಗೆ ಹಾನಿಕಾರಕವಾಗಿ ಬಾಧಕವನ್ನುಂಟು ಮಾಡುವ ಹಾನಿ, (ಯಾವುದಾದರೂ ಇದ್ದರೆ) ಅದು;

(6) ಭೂಮಿಯನ್ನು ಆರ್ಜಿಸಿದ ಪರಿಣಾಮವಾಗಿ ಹಿತಾಸಕ್ತಿಯನ್ನು ಹೊಂದಿದ ವ್ಯಕ್ತಿಯು ಅವನ ನಿವಾಸ, ಅಥವಾ ವ್ಯವಹಾರದ ಸ್ಥಳವನ್ನು ಬದಲಾಯಿಸಬೇಕೆಂದು ಒತ್ತಾಯ ಮಾಡಿದ್ದರೆ ಅಂಥ ಬದಲಾವಣೆ ನಿಮಿತ್ತ ಆಗಬಹುದಾದ ಯುಕ್ತ ವೆಚ್ಚಗಳು ಏನಾದರೂ ಆಗಿದ್ದರೆ."

**2 1894ರ ಅಧಿನಿಯಮ 1ರ 24ನೇ ಪ್ರಕರಣದ ತಿದ್ದುಪಡಿ.–** ಭೂ ಸ್ವಾಧೀನ ಅಧಿನಿಯಮ, 1894ರ 24ನೇ ಪ್ರಕರಣಕ್ಕೆ ಬದಲಾಗಿ ಈ ಕೆಳಕಂಡುದನ್ನು ಪ್ರತಿಯೋಜಿಸತಕ್ಕುದು, ಎಂದರೆ:–

**"24. ನಷ್ಟ ಪರಿಹಾರ ನಿರ್ಧರಿಸುವಲ್ಲಿ ಉಪೇಕ್ಷಿಸಬೇಕಾದ ವಿಷಯಗಳು.–** ನ್ಯಾಯಾಲಯವು ಈ ಕೆಳಕಂಡ ವಿಷಯಗಳನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳತಕ್ಕುದಲ್ಲ:–

(1) ಆರ್ಜನೆಗೆ ಕಾರಣವಾದಂಥ ಪ್ರಾಮುಖ್ಯತೆ ಅಥವಾ ಜರೂರು;

(2) ಆರ್ಜಿಸಿದ ಭೂಮಿಯನ್ನು ಬಿಟ್ಟುಕೊಡಲು ಹಿತಾಸಕ್ತಿಯನ್ನು ಹೊಂದಿದ ವ್ಯಕ್ತಿಯ ಯಾವುದೇ ಅನಿಚ್ಛೆ;

(3) ಅವನು ಅನುಭವಿಸಿದ ಯಾವುದೇ ಹಾನಿ ಎಂದರೆ, ಅದನ್ನು ಖಾಸಗೀ ವ್ಯಕ್ತಿಯು ಮಾಡಿದ್ದರೆ ಅಂಥ ವ್ಯಕ್ತಿಯನ್ನು ದಾವೆಗೆ ಗುರಿಪಡಿಸುವುದಿಲ್ಲವೋ ಆ ಯಾವುದೇ ಹಾನಿ;

(4) [1][ಕರ್ನಾಟಕ][1] ಹೆದ್ದಾರಿಗಳ ಅಧಿನಿಯಮ, 1964ರ 15ನೇ ಪ್ರಕರಣದ ಮೇರೆಗಿನ ಘೋಷಣೆಯ ಪ್ರಕಟಣೆಯ ದಿನಾಂಕದ ತರುವಾಯ ಆರ್ಜಿಸಿದ ಭೂಮಿಗೆ, ಅದನ್ನು ಯಾವ ಉಪಯೋಗಕ್ಕಾಗಿ ಬಳಸಲಾಗುವುದೋ ಆ ಉಪಯೋಗದಿಂದ ಅಥವಾ ಆ ಪರಿಣಾಮದಿಂದಾಗಿ ಉಂಟಾಗುವ ಸಂಭವವಿರುವಂಥ ಯಾವುದೇ ಹಾನಿ;

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(5) ಭೂಮಿಯನ್ನು ಆರ್ಜಿಸಿದಾಗ ಯಾವ ಉಪಯೋಗಕ್ಕಾಗಿ ಅದನ್ನು ಬಳಸಲಾಗುವುದೋ ಆ ಉಪಯೋಗದಿಂದ ಆ ಆರ್ಜಿಸಿದ ಭೂಮಿಯ ಮೌಲ್ಯದಲ್ಲಿ ಆಗಲಿರುವ ಯಾವುದೇ ಹೆಚ್ಚಳ;

(6) ಹಿತಾಸಕ್ತಿ ಹೊಂದಿರುವ ವ್ಯಕ್ತಿಯ ಇತರ ಭೂಮಿಯನ್ನು ಆರ್ಜಿಸಿದಾಗ, ಅದನ್ನು ಯಾವ ಉಪಯೋಗಕ್ಕಾಗಿ ಬಳಸಲಾಗುವುದೋ ಆ ಉಪಯೋಗದಿಂದ ಆ ಆರ್ಜಿಸಿದ ಭೂಮಿಯ ಮೌಲ್ಯದಲ್ಲಿ ಆಗಲಿರುವ ಯಾವುದೇ ಹೆಚ್ಚಳ;

(7) ಆ ಆರ್ಜಿಸಿದ ಭೂಮಿಯಲ್ಲಿ ಅಥವಾ ಅದರ ವಿಲೆಗಾಗಿ, [1][ಕರ್ನಾಟಕ][1] ಹೆದ್ದಾರಿ ಅಧಿನಿಯಮ, 1964ರ 15ನೇ ಪ್ರಕರಣದ ಮೇರೆಗಿನ ಘೋಷಣೆಯ ಪ್ರಕಟಣೆಯ ದಿನಾಂಕದ ತರುವಾಯ ಹೆದ್ದಾರಿ ಪ್ರಾಧಿಕಾರದ ಮಂಜೂರಾತಿಯಿಲ್ಲದೆ ಆರಂಭಿಸಿದ, ಮಾಡಿದ ಅಥವಾ ನಿರ್ವಹಿಸಿದ ಯಾವುದೇ ವೆಚ್ಚ ಅಥವಾ ಸುಧಾರಣೆಗಳು;

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(8) ಯಾವುದೇ ಉದ್ದೇಶಕ್ಕಾಗಿ, ಆ ಉದ್ದೇಶವು ಯಾವುದೇ ಕಾನೂನಿಗೆ ಅನುಸಾರವಾಗಿ ಭೂಮಿಯನ್ನು ಉಪಯೋಗಿಸಬಹುದಾದಂಥ ಉದ್ದೇಶವಾಗಿದ್ದರೆ ಅಥವಾ ಹೆದ್ದಾರಿ ಪ್ರಾಧಿಕಾರದ ವಿಶೇಷ ಅವಶ್ಯಕತೆಗಳ ಹೊರತು ಭೂಮಿಯನ್ನು ಕೊಳ್ಳುವವರೇ ಇರದಿದ್ದರೆ, ಆ ಯಾವುದೇ ಉದ್ದೇಶಕ್ಕಾಗಿ ಭೂಮಿಯ ವಿಶೇಷ ಸೂಕ್ತತೆ ಅಥವಾ ಹೊಂದಿಕೆ;

(9) ಯಾವುದೇ ನ್ಯಾಯಾಲಯವು ನಿರ್ಬಂಧಿಸಬಹುದಾದ ರೀತಿಯಲ್ಲಿ ಅಥವಾ ಕಾನೂನಿಗೆ ತದ್ವಿರುದ್ಧವಾಗಿ ಅಥವಾ ಆವರಣದ ನಿವಾಸಿಗಳ ಆರೋಗ್ಯಕ್ಕೆ ಅಥವಾ ಸಾರ್ವಜನಿಕರ ಆರೋಗ್ಯಕ್ಕೆ ಹಾನಿಕರವಾಗಿರುವಂಥ ರೀತಿಯಲ್ಲಿ ಅದನ್ನು ಅಥವಾ ಅದರಲ್ಲಿನ ಯಾವುದೇ ಆವರಣವನ್ನು ಉಪಯೋಗಿಸಿದ ಕಾರಣದಿಂದಾಗಿ ಭೂಮಿಯ ಮೌಲ್ಯದಲ್ಲಿ ಆದ ಯಾವುದೇ ಹೆಚ್ಚಳ".

* * * *

**ಅಧಿಸೂಚನೆ**

**ಬೆಂಗಳೂರು, ದಿನಾಂಕ 6ನೇ ಆಗಸ್ಟ್, 1969**

**[ಸಂಖ್ಯೆ ಪಿಡಬ್ಲ್ಯೂಡಿ 17 ಸಿಎಸ್‌ಆರ್ 65]**

**ಎಸ್.ಓ.1638.–** ಕರ್ನಾಟಕ ಹೆದ್ದಾರಿ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 44) 1ನೇ ಪ್ರಕರಣದ (4)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಸದರಿ ಅಧಿನಿಯಮದ ಎಲ್ಲಾ ಉಪಬಂಧಗಳು ಅದರ 1ನೇ ಪ್ರಕರಣದ ಹೊರತಾಗಿ 16ನೇ ಆಗಸ್ಟ್, 1969 ರಂದು ಕರ್ನಾಟಕ ರಾಜ್ಯದಾದ್ಯಂತ ಜಾರಿಗೆ ಬರತಕ್ಕದ್ದು ಎಂಬುದಾಗಿ ಈ ಮೂಲಕ ನಿರ್ದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಸರ್ಕಾರದ ಉಪ ಕಾರ್ಯದರ್ಶಿ,
ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಇಲಾಖೆ.

1. 1963ರ ತಿದ್ದುಪಡಿಯ ಅಧಿನಿಯಮ 15: ಅಧಿಸೂಚನೆ ಲಭ್ಯವಿಲ್ಲ.

* * * *

The above translation of the Karnataka Hghways Act, 1964 (44 of 1964) shall be the authoritative text in the Kannada Language under section 5A of the Karnataka Official Language Act, 1963 (Karnataka Act No 26 of 1963)

**GOVERNOR OF KARNATAKA**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
**ಮ.ರಾ. ಹೆಗಡೆ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.